ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಸೆಪ್ಟೆಂಬರ್ 18 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 152 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸ್ವಾಮಿ ಕಾರ್ಯ! ಸ್ವ ಕಾರ್ಯ!!

■ ಇಡಿ ಅಧಿಕಾರಿಗಳಿಂದ ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ತೀವ್ರ ವಿಚಾರಣೆ ವೇಳೆ ಅಚ್ಚರಿ ಸಂಗತಿಗಳು ಬಯಲು! ■ ಈ ಮಾಹಿತಿ, ದಾಖಲೆ ಪರಿಶೀಲನೆಗೆ ಪ್ರತ್ಯೇಕ ತಂಡ ರಚನೆ ■ ಒತ್ತಡಕ್ಕೆ ಮಣಿದು ನಿವೇಶನ ಹಂಚಿಕೆ ಅನಿವಾರ್ಯತೆ ಅಳಲು ■ ಮುಡಾ ಹಗರಣ ಕೆಲವರಿಗೆ ಉರುಳಾಗುವ ಸಾಧ್ಯತೆ



ಬೆಂಗಳೂರು, ಸೆ.17(ಕೆಎಂಶಿ)–ಒತ್ತಡಗಳಿಗೆ ಮಣಿದು ಮುಡಾ ಬಿಡಿ ನಿವೇಶನಗಳನ್ನು ನಿಯಮಾವಳಿ ಮೀರಿ ಹಂಚುವ ಮೂಲಕ ಸ್ವಾಮಿ ಕಾರ್ಯದೊಂದಿಗೆ ಸ್ವಕಾರ್ಯವನ್ನೂ ಮಾಡಿಕೊಂಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ ದಿನೇಶ್‌ಕುಮಾರ್ ಅವರಿಗೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಡ್ರಿಲ್ ಮುಂದುವರೆಸಿದ್ದಾರೆ.

ಅಧಿಕಾರಿಯಾಗಿ ಒತ್ತಡಕ್ಕೆ ಮಣಿದು ಕೆಲಸ ಮಾಡುವ ಪ್ರಸಂಗ ಉಂಟಾಯಿತು. ಉದ್ದೇಶಪೂರ್ವಕವಾಗಿ ತಪ್ಪು ಮಾಡಿಲ್ಲ ಎಂದು ದಿನೇಶ್‌ಕುಮಾರ್ ಅಲವತ್ತುಕೊಂಡಿದ್ದಾರೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ನಿನ್ನೆಯಷ್ಟೇ ದಿನೇಶ್‌ಕುಮಾರ್ ಅವರನ್ನು ವಶಕ್ಕೆ ಪಡೆದ ಇ.ಡಿ. ಅಧಿಕಾರಿಗಳು, ದಿನವಿಡೀ ಮತ್ತು ರಾತ್ರಿಯೂ ವಿಚಾರಣೆಗೆ ಒಳಪಡಿಸಿದ್ದಾರೆ. ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಮೊದ ಮೊದಲು ಸಮರ್ಥಿಸಿಕೊಂಡಿದ್ದ ದಿನೇಶ್‌ಕುಮಾರ್, ನಂತರ ಇ.ಡಿ. ಅಧಿಕಾರಿಗಳ ತಂಡ ಸಂಗ್ರಹಿಸಿರುವ ದಾಖಲೆಗಳನ್ನು ತೋರಿಸಿದಾಗ ಅವಕ್ಕಾಗಿದ್ದಾರೆ.

ವಿಚಾರಣೆ ವೇಳೆ ದಿನೇಶ್‌ಕುಮಾರ್ ಹೇಳಿಕೆಯನ್ನು ಚಿತ್ರೀಕರಿಸಿಕೊಂಡಿರುವ ಅಧಿಕಾರಿಗಳು, ತಮ್ಮ ಮೇಲೆ ಯಾವ ರಾಜಕಾರಣಿ ಮತ್ತು ಅಧಿಕಾರಿಗಳು ಒತ್ತಡ ಹೇರಿದ್ದರು, ಯಾವ ಕಾರಣಕ್ಕೆ ನಿವೇಶನಗಳನ್ನು ಹಂಚಲಾಯಿತು ಎಂಬ ಬಗ್ಗೆ ಎಲ್ಲಾ ಮಾಹಿತಿ ಕಲೆ ಹಾಕಲಾಗಿದೆ ಎಂದು ಇ.ಡಿ. ಮೂಲಗಳು ತಿಳಿಸಿವೆ.

▶ 6ನೇ ಪುಟಕ್ಕೆ

ದಿನೇಶ್‌ಕುಮಾರ್ 9 ದಿನ ಇಡಿ ಕಸ್ಟಡಿಗೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸೈಟ್ ಹಂಚಿಕೆ ಹಗರಣದಲ್ಲಿ ಬಂಧನಕ್ಕೊಳಗಾದ ಮಾಜಿ ಆಯುಕ್ತ ದಿನೇಶ್‌ಕುಮಾರ್ ಅವರನ್ನು ನ್ಯಾಯಾಲಯ, 9 ದಿನಗಳ ಕಾಲ ಜಾರಿ ನಿರ್ದೇಶನಾಲಯದ ಕಸ್ಟಡಿಗೆ ನೀಡಿ ಆದೇಶಿಸಿದೆ.


ದಿನೇಶ್‌ಕುಮಾರ್

ಮಂಗಳವಾರ(ಸೆ.16) ಬೆಂಗಳೂರಿನ ಕಚೇರಿಗೆ ವಿಚಾರಣೆಗೆ ಆಗಮಿಸಿದ್ದ ದಿನೇಶ್‌ಕುಮಾರ್ ಅವರನ್ನು ಇಡಿ ಬಂಧಿಸಿತ್ತು. ರಾತ್ರಿ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿ 1 ದಿನ ಕಸ್ಟಡಿಗೆ ಪಡೆದುಕೊಂಡಿದ್ದ ಇಡಿ, ಇಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿತು. ಈ ವೇಳೆ ಇಡಿ ಪರ ವಕೀಲರು, 2022ರಿಂದ 2024ರವರೆಗೆ ಮುಡಾ ಆಯುಕ್ತರಾಗಿದ್ದ ದಿನೇಶ್‌ಕುಮಾರ್, ಕೆಲ ಬಿಲ್ಡರ್‌ಗಳ ಜೊತೆ ಕೈಜೋಡಿಸಿ, ನೂರಾರು ಕೋಟಿ ಮೌಲ್ಯದ ಮುಡಾ ನಿವೇಶನಗಳನ್ನು ಅಕ್ರಮವಾಗಿ ಪರಭಾರೆ ಮಾಡಿದ್ದಾರೆ. ಇವರಿಂದ ಪ್ರಯೋಜನ ಪಡೆದ ಬಿಲ್ಡರ್‌ಗಳು ಇವರ (ದಿನೇಶ್) ಪತ್ನಿ ಮಾಲೀಕತ್ವದ ಕಂಪನಿಗೆ ಹಣ ವರ್ಗಾವಣೆ ಮಾಡಿದ್ದು, ಇದು ಅಕ್ರಮ ಹಣ ವರ್ಗಾವಣೆ ಅಪರಾಧವಾಗುತ್ತದೆ. ಅಲ್ಲದೇ, ದಿನೇಶ್ ರಾಜಕಾರಣಿಗಳಿಗೆ ಕಾನೂನು ಬಾಹಿರವಾಗಿ ಅನೇಕ ಅನುಕೂಲಗಳನ್ನು ಮಾಡಿಕೊಟ್ಟಿದ್ದು, ರಾಜಕಾರಣಿಗಳ ಅಭಯ ಹಾಗೂ ಅಧಿಕಾರದ ಬೆಂಬಲದಿಂದ ಇವರು 50:50 ಯೋಜನೆಯಡಿ ಭಾರಿ ಅಕ್ರಮ ಎಸಗಿದ್ದಾರೆ. ನಿವೇಶನಗಳ ಅಕ್ರಮ ಹಂಚಿಕೆಗೆ ನಕಲಿ ದಾಖಲೆಗಳನ್ನೂ ಸೃಷ್ಟಿಸಲಾಗಿದೆ. ಬ್ಯಾಂಕ್ ವ್ಯವಹಾರ ಸೇರಿದಂತೆ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ನಮ್ಮ ತನಿಖೆಗೆ ಬೇಕಾದ ಅಗತ್ಯ ದಾಖಲೆಗಳು ಸಿಕ್ಕಿವೆ. ಈ ಕುರಿತು ಎಲ್ಲಾ ವಿಚಾರಗಳನ್ನೂ ಹೊರತರಬೇಕಿರುವುದರಿಂದ ದಿನೇಶ್‌ಕುಮಾರ್ ಅವರನ್ನು 14 ದಿನ ತಮ್ಮ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು.

ಇದೇ ವೇಳೆ ವಾದ ಮಂಡಿಸಿದ ದಿನೇಶ್ ಕುಮಾರ್ ಪರ ವಕೀಲರು, ಕಳೆದ ಒಂದು ವರ್ಷದಿಂದ ಸುಮ್ಮನಿದ್ದ ಇಡಿ ಅಧಿಕಾರಿಗಳು ಈಗ ತನಿಖೆಗೆ ದಿನೇಶ್‌ಕುಮಾರ್ ಬೇಕು ಎನ್ನುತ್ತಿದ್ದಾರೆ. ಇಷ್ಟು ದಿನ ಬಂಧನ ಮಾಡದೇ ಇದ್ದವರನ್ನು ಈಗ ಬಂಧಿಸಿದ್ದು ಯಾಕೆ? ಈಗಾಗಲೇ ಬ್ಯಾಂಕ್ ವಿವರಗಳೂ ಸೇರಿದಂತೆ ▶ 6ನೇ ಪುಟಕ್ಕೆ

> **“ ಮಾಡಿರುವ ತಪ್ಪನ್ನು ಇ.ಡಿ. ಮುಂದೆ ಒಪ್ಪಿಕೊಂಡಿರುವ ದಿನೇಶ್‌ಕುಮಾರ್, ಯಾವ ಕಾರಣಕ್ಕಾಗಿ ಇಂತಹ ಕೆಲಸ ಮಾಡಬೇಕಾಯಿತು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಬಿಡಿ ನಿವೇಶನಗಳ ಹಂಚಿಕೆಗಾಗಿ ಮೇಲಿಂದ ತಮಗೆ ಯಾರು ಒತ್ತಡ ಹಾಕುತ್ತಿದ್ದರು ಮತ್ತು ದೂರವಾಣಿ ಮೂಲಕ ತಮ್ಮನ್ನು ಸಂಪರ್ಕಿಸಿ ಶಿಫಾರಸು ಮಾಡುತ್ತಿದ್ದರು ಎಂಬ ಮಾಹಿತಿಗಳನ್ನು ವಿವರಿಸಿದ್ದು, ಮುಂದೆ ಇದು ಕೆಲವರ ಕೊರಳಿಗೆ ಸುತ್ತಿಕೊಳ್ಳುವ ಸಾಧ್ಯತೆ ಇದೆ.**

ಕೃಷಿ ಸಾಲಮನ್ನಾ ಪರಿಶೀಲನೆ: ಸಿಎಂ ಸಿದ್ದರಾಮಯ್ಯ ಇಂಗಿತ





ರೈತರಲ್ಲಿ ಹೊಸ ವಿಶ್ವಾಸ

ಬೆಂಗಳೂರು, ಸೆ.17(ಕೆಎಂಶಿ)– ಕೃಷಿ ಸಾಲಮನ್ನಾ ಮಾಡುವ ಬಗ್ಗೆ ಪರಿಶೀಲನೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ರೈತರಲ್ಲಿ ಆಶಾಕಿರಣ ಮೂಡಿಸಿದ್ದಾರೆ.

ನಿರಂತರ ಮಳೆಯಿಂದಾಗಿ ಬೆಳೆಗಳು ನೀರು ಪಾಲಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿ ಸಾಲಮನ್ನಾ ಮಾಡಬೇಕೆಂಬ ಕೂಗುಗಳು ಕೇಳಿಬರುತ್ತಿವೆ. ಚಾಮರಾಜನಗರ ಜಿಲ್ಲೆ ಹೊರತುಪಡಿಸಿ ರಾಜ್ಯದ ಉಳಿದೆಲ್ಲಾ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಅದರಲ್ಲೂ ಮುಂಗಾರು ಪೂರ್ವ ಮಳೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಷ್ಟರ ನಡುವೆಯೂ ರಾಜ್ಯಾದ್ಯಂತ ಬಿತ್ತನೆ ಕಾರ್ಯ ▶ 6ನೇ ಪುಟಕ್ಕೆ

ಸೆ.23ರಿಂದ 27ರವರೆಗೆ ಯುವ ದಸರಾ
ಖ್ಯಾತ ಗಾಯಕರ ಸಂಗೀತ ರಸಧಾರೆ


ಅರ್ಜುನ್ ಜನ್ಯ ಪ್ರೀತಮ್ ಜುಬಿನ್ ನೌಟಿಯಲ್ ದೇವಿಶ್ರೀ ಪ್ರಸಾದ್ ಸುನಿಧಿ ಚೌಹಾಣ್

ಬಾಲಿವುಡ್‌ನ ಖ್ಯಾತ ಹಿನ್ನೆಲೆ ಗಾಯಕಿ ಸುನಿಧಿ ಚೌಹಾಣ್ ಹಾಡಿನ ಮೋಡಿ ಸೇರಿದಂತೆ ಪ್ರಖ್ಯಾತ ಸಂಗೀತ ನಿರ್ದೇಶಕರು, ಗಾಯಕರಿಂದ ಸಂಗೀತದ ಹೊನಲು

ಮೈಸೂರು,ಸೆ.17(ಪಿಎಂ)– 'ಯುವ ದಸರಾ'ದಲ್ಲಿ ಈ ಬಾರಿಯೂ ಖ್ಯಾತ ಗಾಯಕರು, ತಮ್ಮ ಗಾನ–ಸಂಗೀತದ ಅಲೆಗಳಲ್ಲಿ ಯುವ ಸಮೂಹ ಹುಚ್ಚೆದ್ದು ಕುಣಿದು ತೇಲುವಂತೆ ಮಾಡಲಿದ್ದು, ಸೆ.23ರಿಂದ 27ರವರೆಗೆ ಮೈಸೂರಿನ (ರಿಂಗ್ ರಸ್ತೆ ಪಕ್ಕದ ಮೈದಾನ) ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನ ಸಮೀಪದ ಮೈದಾನದಲ್ಲಿ ಈ ಸಂಗೀತೋತ್ಸವ ನಡೆಯಲಿದೆ. ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕರು, ಗಾಯಕರೂ ▶ 6ನೇ ಪುಟಕ್ಕೆ

ಸಾಮಾಜಿಕ ಕಾರ್ಯಕರ್ತನ ಮೇಲೆ ಹಲ್ಲೆ, ಕೊಲೆ ಬೆದರಿಕೆ ಆರೋಪ

ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ವಿರುದ್ಧ ಕೇಸ್ ದಾಖಲಿಸಲು ಕೋರ್ಟ್ ಆದೇಶ

ಮೈಸೂರು, ಸೆ.17(ಆರ್‌ಕೆ)–ಸಾಮಾಜಿಕ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಮುಡಾ ಹಿಂದಿನ ಆಯುಕ್ತ ಡಾ.ಡಿ.ಬಿ.ನಟೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮೈಸೂರಿನ 8ನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಲಕ್ಷ್ಮೀಪುರಂ ಠಾಣೆ ಪೊಲೀಸರಿಗೆ ಆದೇಶ ನೀಡಿದೆ.


ಡಿ.ಬಿ.ನಟೇಶ್

ಮುಡಾ ಆಯುಕ್ತರಾಗಿದ್ದ ನಟೇಶ್ ಅವರು ತಮ್ಮ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿದ್ದಲ್ಲದೇ ಮೊಬೈಲ್ ಕಸಿದುಕೊಂಡಿದ್ದಾರೆ ಎಂದು 2022ರ ಮಾರ್ಚ್ ತಿಂಗಳಲ್ಲಿ ಮೈಸೂರಿನ ಬೋಗಾದಿ ನಿವಾಸಿಯಾಗಿರುವ ಸಾಮಾಜಿಕ ಕಾರ್ಯಕರ್ತ ಎಸ್.ಶ್ರೀನಿವಾಸ್ ಸಲ್ಲಿಸಿದ್ದ ದೂರಿಗೆ ಲಕ್ಷ್ಮೀಪುರಂ ಠಾಣೆ ಪೊಲೀಸರು, ಇದೇ ವಿಚಾರವಾಗಿ ನಿಮ್ಮ (ಶ್ರೀನಿವಾಸ್) ವಿರುದ್ಧ ಈಗಾಗಲೇ ದೂರು ದಾಖಲಾಗಿರುವುದರಿಂದ ನಿಮ್ಮ ದೂರನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಹಿಂಬರಹ ನೀಡಿದ್ದರು. ಈ ಹಿನ್ನೆಲೆಯಲ್ಲಿ ಶ್ರೀನಿವಾಸ್ ಅವರು ವಕೀಲ ಕೆ.ಹೆಚ್.ಪ್ರಸನ್ನ ಅವರ ಮೂಲಕ 2022ರ ಏಪ್ರಿಲ್ 20ರಂದು ನ್ಯಾಯಾಲಯಕ್ಕೆ ಪಿಸಿಆರ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯವು, ಡಾ.ಡಿ.ಬಿ.ನಟೇಶ್ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 341 (ಅಡ್ಡಗಟ್ಟುವುದು), 323 (ಹಲ್ಲೆ), 392 (ರಾಬರಿ), 504 ಮತ್ತು 506 (ಪ್ರಾಣ ಬೆದರಿಕೆ), ರೆಡ್ ವಿತ್ 34 (ಒಬ್ಬರಿಗಿಂತ ಹೆಚ್ಚು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವುದು) ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಿಸಿ ವರದಿ ಸಲ್ಲಿಸಬೇಕೆಂದು ▶ 6ನೇ ಪುಟಕ್ಕೆ

ದಿವಂಗತ ಬಿ.ಸರೋಜಾದೇವಿ ಹೆಸರಲ್ಲಿ 'ಅಭಿನಯ ಸರಸ್ವತಿ' ಪ್ರಶಸ್ತಿ ಘೋಷಣೆ

ಬೆಂಗಳೂರು: ಪಂಚಭಾಷಾ ತಾರೆ ದಿವಂಗತ ಬಿ.ಸರೋಜಾದೇವಿ ಅವರ ಹೆಸರಿನಲ್ಲಿ 'ಅಭಿನಯ ಸರಸ್ವತಿ' ಪ್ರಶಸ್ತಿ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ.



ದಿವಂಗತ ಬಿ.ಸರೋಜಾದೇವಿ, ಪಂಚಭಾಷಾ ತಾರೆಯಾಗಿದ್ದು, ಭಾರತೀಯ ಹಾಗೂ ಕನ್ನಡ ಚಿತ್ರರಂಗಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ಅದನ್ನು ಪರಿಗಣಿಸಿ ಅವರು ಪಡೆದಿದ್ದ 'ಅಭಿನಯ ಸರಸ್ವತಿ' ಬಿರುದಿನ ಹೆಸರಿನಲ್ಲಿ ಕನ್ನಡ ಚಿತ್ರರಂಗಕ್ಕೆ ಕನಿಷ್ಠ 25 ವರ್ಷಗಳ ಅವಿಸ್ಮರಣೀಯ ಸೇವೆ ಸಲ್ಲಿಸಿರುವ ಮಹಿಳೆಯರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುವುದು. ಪ್ರಸ್ತುತ ಜಾರಿಯಲ್ಲಿರುವ ಕನ್ನಡ ಚಲನಚಿತ್ರ ನೀತಿ–2011ರಲ್ಲಿನ ವಾರ್ಷಿಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳ ಪಟ್ಟಿ ಅನುಬಂಧ–1ರಡಿ ಜಾರಿಗೆ ತರಲಾಗಿದೆ. ಈ ಪ್ರಶಸ್ತಿಯಡಿಯಲ್ಲಿ 1 ಲಕ್ಷ ರೂ. ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕ ನೀಡಲಾಗುವುದು ಎಂದು ರಾಜ್ಯ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಜಿ ಸಿಎಂ ಸದಾನಂದಗೌಡರ ಬ್ಯಾಂಕ್ ಖಾತೆಗೆ ಸೈಬರ್ ಖದೀಮರು ಕನ್ನ

ಬೆಂಗಳೂರು, ಸೆ.17(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವರೂ ಆದ ಡಿ.ವಿ.ಸದಾನಂದಗೌಡ ಅವರ ಬ್ಯಾಂಕ್ ಖಾತೆಗಳನ್ನು ಸೈಬರ್ ಅಪರಾಧಿಗಳು ಹ್ಯಾಕ್ ಮಾಡಿ ಲಕ್ಷಾಂತರ ರೂ. ಲಪಟಾಯಿಸಿದ್ದಾರೆ. ಅವರ ಎಚ್‌ಡಿಎಫ್‌ಸಿ, ಆಕ್ಸಿಸ್ ಹಾಗೂ ಎಸ್‌ಬಿಐ ಬ್ಯಾಂಕ್ ಖಾತೆಗಳಲ್ಲಿದ್ದ ಹಣ ದೋಚಲಾಗಿದೆ.



ಪ್ರಧಾನಿ ಮೋದಿ ಹುಟ್ಟುಹಬ್ಬದ ಸಮಾರಂಭದಲ್ಲಿ ಪಾಲ್ಗೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಿರಾತಕರು ತಮ್ಮ ಖಾತೆಗಳಿಂದಲೇ ಹಣ ದೋಚಿದ್ದು, ಈ ಬಗ್ಗೆ ಸೈಬರ್ ಠಾಣೆಗೆ ದೂರು ದಾಖಲಿಸಿದ್ದೇನೆ ಎಂದರು. ಮೂರು ಖಾತೆಗಳಿಂದಲೂ ಪ್ರತ್ಯೇಕವಾಗಿ ತಲಾ ಒಂದೊಂದು ಲಕ್ಷ ರೂ. ಗಳನ್ನು ದೋಚಿದ್ದಾರೆ. ನಕಲಿ ಯುಪಿಐ ಐಡಿ ತಯಾರಿಸಿ ಹಣ ದೋಚಿದ್ದಾರೆ, ಇತ್ತೀಚೆಗೆ ಸೈಬರ್ ಅಪರಾಧಗಳು ಹೆಚ್ಚುತ್ತಿದ್ದು, ಕಡಿವಾಣ ಹಾಕುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ವಹಿಸುವಂತೆ ಆಗ್ರಹಿಸಿದರು. ಸೈಬರ್ ವಂಚಕರ ವಿಷಯದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಪೊಲೀಸ್ ಇಲಾಖೆ ಕ್ರಮ ವಹಿಸಬೇಕು ಎಂದರು. ಮಾಜಿ ಮುಖ್ಯಮಂತ್ರಿಗಳ ಹಣವನ್ನೇ ಸೈಬರ್ ಅಪರಾಧಿಗಳು ದೋಚಿರುವುದು ರಾಜಕೀಯ ವಲಯದಲ್ಲೂ ಹುಬ್ಬೇರುವಂತೆ ಮಾಡಿದೆ.

ಮರದ ಅಂಬಾರಿ ಹೊತ್ತು ಮಹೇಂದ್ರನ ಗಾಂಭೀರ್ಯ ನಡೆ


ಮೈಸೂರು ಸಂಯ್ಯಾಜಿರಾವ್ ರಸ್ತೆಯಲ್ಲಿ ಮರದ ಅಂಬಾರಿ ಹೊತ್ತ ಮಹೇಂದ್ರನೊಂದಿಗೆ ಸಾಗುತ್ತಿರುವ ಗಜಪಡೆ. ಚಿತ್ರದಲ್ಲಿ ಆರ್‌ಎಎಫ್ ಗಜಪಡೆಗೆ ಭಾರಿ ಭದ್ರತೆ ನೀಡಿರುವುದು.

ಬಳ್ಳೆ ಲಕ್ಷ್ಮಿ, ರೂಪ ಸಾಥ್

ಮೈಸೂರು,ಸೆ.17(ಪಿಎಂ)– ದಸರಾ ಮಹೋತ್ಸವ ಆರಂಭಕ್ಕೆ ದಿನಗಣನೆ ಪ್ರಾರಂಭವಾಗಿದ್ದು, ವಿಜಯದಶಮಿ ಮೆರವಣಿಗೆಯ ಕೇಂದ್ರಬಿಂದುವಾದ ಗಜಪಡೆಯನ್ನು ಸಜ್ಜುಗೊಳಿಸುವ ಕಾರ್ಯ ಭರದಿಂದ ಸಾಗಿದೆ. ಅಂತೆಯೇ ಬುಧವಾರ ಮಹೇಂದ್ರ ಆನೆಗೆ ಮರದ ಅಂಬಾರಿ ಹಾಗೂ ಭಾರ ಹೊರುವ ತಾಲೀಮು ಯಶಸ್ವಿಯಾಗಿ ನಡೆಯಿತು.

ದಸರಾ ಗಜಪಡೆಯ ನಾಯಕ ಅಭಿಮನ್ಯುಗೆ ಸೋಮವಾರ ಮರದ ಅಂಬಾರಿ ಒಳಗೊಂಡಂತೆ ಭಾರ ಹೊರುವ ತಾಲೀಮು ಯಶಸ್ವಿಯಾಗಿ ನಡೆಸಲಾಗಿತ್ತು. ಆ ಮೂಲಕ ಮರದ ಅಂಬಾರಿ ಹಾಗೂ ಭಾರ ಹೊರುವ ತಾಲೀಮಿಗೆ ಚಾಲನೆ ನೀಡಲಾಗಿತ್ತು. ಅದೇ ರೀತಿ ಇಂದು 42 ವರ್ಷದ ಗಂಡಾನೆಯಾದ ಮಹೇಂದ್ರಗೆ ಮರದ ಅಂಬಾರಿ ಒಳಗೊಂಡಂತೆ ಭಾರ ಹೊರುವ ತಾಲೀಮು ಸುಸೂತ್ರವಾಗಿ ಜರುಗಿತು.

ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯ ಸಮೀಪದಲ್ಲಿ 200 ಕೆಜಿ ತೂಕ ಹೊಂದಿರುವ ಗಾದಿ, ನಮ್ದಾ ಎರಡನ್ನೂ ಮಹೇಂದ್ರ ಆನೆಯ ಬೆನ್ನಿನ ಮೇಲೆ ಬಿಗಿಯಾಗಿ ಕಟ್ಟಿ, ಇದೇ ಆವರಣದಲ್ಲಿರುವ ರಾಜವಂಶಸ್ಥರ ನಿವಾಸದ ಸಮೀಪದಲ್ಲಿ 250 ಕೆಜಿ ಭಾರ ಹೊಂದಿರುವ ಮರದ ಅಂಬಾರಿ ಕಟ್ಟಲಾಯಿತು. ಮರಳು ಮೂಟೆಗಳು ಒಳಗೊಂಡಂತೆ ಸುಮಾರು 750 ಕೆಜಿ ಭಾರ ಹೊತ್ತ ಮಹೇಂದ್ರನ ಜೊತೆಗೆ ಕುಮ್ಕಿ ಆನೆಗಳಾಗಿ ರೂಪ ಮತ್ತು ಬಳ್ಳೆ ಲಕ್ಷ್ಮಿ ಹೆಜ್ಜೆ ಹಾಕಿದವು. ಇವುಗಳ ಹಿಂದೆ ಉಳಿದೆಲ್ಲಾ ಆನೆಗಳು ಸಾಗಿದವು.

ಸಾಲಾಗಿ ಸಾಗಿದ ಗಜಪಡೆ, ಅರಮನೆ ಆವರಣದಲ್ಲಿ ಒಂದು ಸುತ್ತು ಹಾಕಿ ವಿಜಯದಶಮಿ ಮೆರವಣಿಗೆಯಂದು ಪುಷ್ಪಾರ್ಚನೆ ಸಲ್ಲಿಸುವ ಸ್ಥಳದ ಮೂಲಕ ಅರಮನೆ ಉತ್ತರದ್ವಾರ ತಲುಪಿದವು. ಬಳಿಕ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ, ಹೈವೆ ವೃತ್ತ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದವು. ನಂತರ ಅದೇ ಮಾರ್ಗದಲ್ಲಿ ಅರಮನೆ ಆವರಣಕ್ಕೆ ಗಜಪಡೆ ಹಿಂತಿರುಗಿದವು. ಆ ಮೂಲಕ ಮಹೇಂದ್ರ ಮರದ ಅಂಬಾರಿ ಜೊತೆಗೆ ಭಾರ ಹೊರುವ ಜೊತೆಗಿನ ಗಜಪಡೆ ತಾಲೀಮು ಯಶಸ್ವಿಗೊಂಡಿತು.

ಅಂಬಾರಿ ಹೊರಲು ಮಹೇಂದ್ರನೂ ಸೈ: ಮರದ ಅಂಬಾರಿ ಕಟ್ಟುವ ಸ್ಥಳದಿಂದ ಸುಮಾರು 5.15ಕ್ಕೆ ಹೊರಟ ಮಹೇಂದ್ರ, ಸುಮಾರು 6.30ಕ್ಕೆ ಬನ್ನಿಮಂಟಪದಲ್ಲಿರುವ ಪಂಜಿನ ಕವಾಯತು ಮೈದಾನ ತಲುಪಿತು. ಆ ಮೂಲಕ 1 ಗಂಟೆ 15 ನಿಮಿಷದ ಅವಧಿಯವರೆಗೆ ಮಹೇಂದ್ರ ಸುಮಾರು 750 ಕೆಜಿ ಭಾರ ಹೊತ್ತು ತನ್ನ ಸಹಪಾಠಿಗಳ ಜೊತೆಗೆ ಸಾಗಿ ಸೈ ಎನ್ನಿಸಿಕೊಂಡಿತು.

ಆರ್‌ಎಎಫ್‌ನಿಂದ ಭಾರಿ ಭದ್ರತೆ: ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ ದಾರಿಯುದ್ದಕ್ಕೂ ಸಾರ್ವಜನಿಕರು ▶ 6ನೇ ಪುಟಕ್ಕೆ

> **ಮಹೇಂದ್ರ ಆನೆ ಈ ಹಿಂದಿನ ವರ್ಷಗಳಲ್ಲೂ ಮರದ ಅಂಬಾರಿ ಹೊತ್ತು ಯಶಸ್ವಿಯಾಗಿ ತಾಲೀಮು ನಡೆಸಿದೆ. ಇದೀಗ ಈ ಬಾರಿಯೂ ಮರದ ಅಂಬಾರಿ ಹೊತ್ತು ಭರವಸೆ ಮೂಡಿಸಿದೆ. ಮತ್ತಿಗೋಡು ಶಿಬಿರದ ಈ ಆನೆಯು ಶಾಂತ ಸ್ವಭಾವ ಹೊಂದಿದ್ದು, ಕಾಡಾನೆ ಮತ್ತು ಹುಲಿಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆಗಳಲ್ಲಿ ಅತ್ಯಂತ ಧೈರ್ಯಶಾಲಿ ಎಂಬ ಹೆಸರು ಗಳಿಸಿದೆ. ಮುಂದಿನ ದಿನಗಳಲ್ಲಿ ಧನಂಜಯ, ಪ್ರಶಾಂತ ಆನೆಗಳಿಗೆ ಮರದ ಅಂಬಾರಿ ಒಳಗೊಂಡಂತೆ ಭಾರ ಹೊರಿಸುವ ತಾಲೀಮು ನಡೆಸಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ.**



ಮೈಸೂರು ಮಿತ್ರ ಗುರುವಾರ 18 ಸೆಪ್ಟೆಂಬರ್ 2025

ಹಳೆಯ, ಶಿಥಿಲ ಕಟ್ಟಡಗಳ ಮೇಲೆ ಕುಳಿತು ಜಂಬೂಸವಾರಿ ವೀಕ್ಷಣೆಗೆ ನಿರ್ಬಂಧ

ಮೈಸೂರು, ಸೆ.17(ಎಸ್‌ಪಿಎನ್)– 2025ನೇ ಸಾಲಿನ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಹಳೆ ಕಟ್ಟಡಗಳು, ಶಿಥಿಲ ಕಟ್ಟಡಗಳ ಮೇಲೆ ಸಾರ್ವಜನಿಕರು ಕುಳಿತು ಜಂಬೂಸವಾರಿ ವೀಕ್ಷಣೆಗೆ ಮೈಸೂರು ನಗರ ಪೊಲೀಸ್ ಇಲಾಖೆ ಮತ್ತು ಮೈಸೂರು ಮಹಾನಗರಪಾಲಿಕೆ ನಿರ್ಬಂಧ ವಿಧಿಸಿದೆ.



2024ನೇ ಸಾಲಿನ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ದಿನದಂದು ಅರಮನೆಯಿಂದ ಬನ್ನಿಮಂಟಪದ ಮೈದಾನದವರೆಗೆ ಜಂಬೂಸವಾರಿ ಸಾಗುವ ಮಾರ್ಗದ ರಸ್ತೆಯ ಎರಡೂ ಕಡೆಗಳಲ್ಲಿ ಹಳೆ ಕಟ್ಟಡಗಳು, ಶಿಥಿಲ ಕಟ್ಟಡಗಳು, ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಮೇಲೆ ಸಾವಿರಾರು ಸಾರ್ವಜನಿಕರು ನಿಂತು ಜಂಬೂಸವಾರಿ ವೀಕ್ಷಣೆ ಮಾಡಿರುವುದು ಕಂಡುಬಂದಿದೆ. ಈ ರೀತಿಯಾಗಿ ಹಳೆಯ/ಶಿಥಿಲ ಕಟ್ಟಡಗಳು ಮತ್ತು ನಿರ್ಮಾಣ ಹಂತದ ಕಟ್ಟಡಗಳ ಮೇಲೆ ಒಮ್ಮೆಲೆ ನೂರಾರು ಜನರು ಸೇರುವುದರಿಂದ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ.

ಆದ್ದರಿಂದ 2025ನೇ ಸಾಲಿನಲ್ಲಿ ಜಂಬೂಸವಾರಿ ಮೆರವಣಿಗೆಯಲ್ಲಿ ಯಾವುದೇ ಅನಾಹುತಗಳಿಗೆ ಅವಕಾಶ ನೀಡಬಾರದೆಂಬ ಕಾರಣಕ್ಕಾಗಿ ಹಾಗೂ ಜನಸಂದಣಿ ನಿರ್ವಹಣಾ ಪ್ರಮಾಣಿತ ಕಾರ್ಯಾಚರಣೆ ವಿಧಾನ (SOP) ಅನುಸಾರವಾಗಿ ಮೈಸೂರು ನಗರ ಪೊಲೀಸ್ ಆಯುಕ್ತರು ತಮ್ಮ ಇತರೇ ಅಧಿಕಾರಿಗಳೊಂದಿಗೆ ಮೈಸೂರು ನಗರಪಾಲಿಕೆ ಅಧಿಕಾರಿಗಳ ಜೊತೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಜಂಟಿ ಸಮೀಕ್ಷೆ ನಡೆಸಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಕೆ.ಆರ್. ವೃತ್ತದ ಕಟ್ಟಡಗಳು, ದೇವರಾಜ ಮಾರು ಕಟ್ಟೆ, ಪಂಚಮುಖಿ ವೃತ್ತದ ಕಟ್ಟಡಗಳು, ಹಾರ್ಸ್ ಸ್ಟ್ಯಾಂಡ್ (Horse Stand) ಹಾಗೂ ಇನ್ನಿತರೆ ಹಳೆಯ, ಶಿಥಿಲ ಕಟ್ಟಡಗಳನ್ನು ಗುರುತಿಸಲಾಗಿದೆ.

ಈ ಸಂಬಂಧ ಹಳೆಯ/ಶಿಥಿಲ ಕಟ್ಟಡಗಳು, ನಿರ್ಮಾಣ ಹಂತದ ಕಟ್ಟಡಗಳ ಮಾಲೀಕರ ಸಭೆಯನ್ನು ನಡೆಸಲಾಗಿದ್ದು, 2025ನೇ ಸಾಲಿನ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಸಮಯದಲ್ಲಿ ಹಳೆಯ ಕಟ್ಟಡಗಳು, ಶಿಥಿಲ ಕಟ್ಟಡಗಳು ಮತ್ತು ನಿರ್ಮಾಣ ಹಂತದ ಕಟ್ಟಡಗಳ ಮೇಲೆ ಜಂಬೂಸವಾರಿ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ ನೀಡಬಾರದೆಂದು ಕಟ್ಟಡದ ಮಾಲೀಕರಿಗೆ ಸೂಕ್ತ ತಿಳುವಳಿಕೆ ನೀಡಲಾಗಿದೆ.

ಸಾರ್ವಜನಿಕರೂ ಜಂಬೂಸವಾರಿ ಮಾರ್ಗದ ಹಳೆಯ ಕಟ್ಟಡಗಳು, ಶಿಥಿಲ ಕಟ್ಟಡಗಳು, ನಿರ್ಮಾಣ ಹಂತದ ಕಟ್ಟಡಗಳು, ಮರಗಳು, ಕಂಬಗಳು ಇನ್ನಿತರೇ ಸುರಕ್ಷಿತವಲ್ಲದ ಸ್ಥಳಗಳ ಮೇಲೆ ಹತ್ತಿ ಜಂಬೂಸವಾರಿ ವೀಕ್ಷಣೆ ಮಾಡದೆ ಸುರಕ್ಷಿತ ಸ್ಥಳಗಳಲ್ಲಿ ಕುಳಿತು ಜಂಬೂಸವಾರಿ ವೀಕ್ಷಿಸಬೇಕೆಂದು ನಗರ ಪೊಲೀಸ್ ಆಯುಕ್ತರ ಕಚೇರಿಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ; ಕಾಲ್ನಡಿಗೆ ಜಾಥಾಕ್ಕೆ ಪ್ರತಾಪ್ ಸಿಂಹ ಚಾಲನೆ

ಮೈಸೂರು, ಸೆ.17(ಜಿಎ)–ಕನ್ನಡಾಂಬೆ ರಕ್ಷಣಾ ವೇದಿಕೆ ಕಾಲ್ನಡಿಗೆ ಜಾಥಾ 3ನೇ ದಿನಕ್ಕೆ ಕಾಲಿಟ್ಟಿದ್ದು, ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಪ್ರಾರಂಭವಾದ ಜಾಥಾಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಇನ್ಫೋಸಿಸ್ ಮುಂಭಾಗ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತ್ರಿಭಾಷಾ ನೀತಿ ಮತ್ತು ಶಿಕ್ಷಣ ಮತ್ತು ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ ನೀಡುವ ಬಗ್ಗೆ ದೊಡ್ಡ ಹೋರಾಟವನ್ನು ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಕನ್ನಡವೇ ಸೌರ್ವಭೌಮ, ಕನ್ನಡಾಂಬೆ ರಕ್ಷಣಾ ವೇದಿಕೆಯ ಹೋರಾಟದ ಜೊತೆ ನಾವಿದ್ದೇವೆ ಎಂದರು.



ಕನ್ನಡಾಂಬೆ ರಕ್ಷಣಾ ವೇದಿಕೆಯ ಮೂರನೇ ದಿನದ ಕಾಲ್ನಡಿಗೆ ಜಾಥಾಕ್ಕೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಇನ್ಫೋಸಿಸ್ ಮುಂಭಾಗ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ರಾಜ್ಯದಲ್ಲಿ ಕಂಪನಿಗಳು ಕಾರ್ಯ ನಿರ್ವಹಿಸಲು ಕನ್ನಡಿಗರ ಅಪಾರ ಶ್ರಮ ಕಾರಣವಾಗಿದೆ. ಮಾಜಿ ಸಿಎಂ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ಬೆಂಗಳೂರಿನಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಲಕ್ಷಾಂತರ ಎಕರೆ ಭೂಮಿಯನ್ನು ಕಡಿಮೆ ಬೆಲೆಗೆ ನೀಡಲಾಯಿತು. ಎಷ್ಟು ಕಡಿಮೆ ಎಂದರೇ ದೇಣಿಗೆ ರೂಪದಲ್ಲಿ ನೀಡಲಾಗಿತ್ತು. ಆ ಸಂದರ್ಭದಲ್ಲಿ ಕನ್ನಡಿಗರಿಗೆ ಶೇ.50ರಷ್ಟು ಉದ್ಯೋಗವನ್ನು ಕಡ್ಡಾಯವಾಗಿ ಕೊಡಲೇಬೇಕು ಎಂಬ ಷರತ್ತು ಹಾಕಿದ್ದಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಉತ್ತರ ಭಾರತೀಯರು ಕರ್ನಾಟಕಕ್ಕೆ ಕೆಲಸ ಹುಡುಕಿಕೊಂಡು ಬಂದರೆ, ನಮ್ಮ ಪಕ್ಕದ ರಾಜ್ಯದ ತೆಲುಗಿನವರು ರಿಯಲ್ ಎಸ್ಟೇಟ್ ಹೆಸರಲ್ಲಿ ನಮ್ಮ ಭೂಮಿಯನ್ನು ಸಂಪೂರ್ಣ ಕಬಳಿಕೆ ಮಾಡಿದ್ದಾರೆ ಎಂದು ಕಿಡಿ ಕಾರಿದರು.

ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡುವುದು, ಕಾರ್ಮಿಕರ ತಾರತಮ್ಯ ಹೋಗಲಾಡಿಸುವುದು, ಕನ್ನಡ ಭಾಷೆಯ ಬಳಕೆ ಮುಂತಾದ ಕನ್ನಡಾಂಬೆ ರಕ್ಷಣಾ ವೇದಿಕೆಯ ನ್ಯಾಯಸಮ್ಮತ ಬೇಡಿಕೆಗಳಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದರು.

ಕನ್ನಡಾಂಬೆ ರಕ್ಷಣಾ ವೇದಿಕೆ ಪದಾಧಿಕಾರಿಗಳು ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗ ನೀಡುವುದು, ಕಾರ್ಖಾನೆಗಳಲ್ಲಿ ಕಾಯಂ ಮತ್ತು ಗುತ್ತಿಗೆ ನೌಕರರ ವೇತನ ಮತ್ತು ಊಟೋಪಚಾರಗಳಲ್ಲಿ ತಾರತಮ್ಯ ಹೋಗಲಾಡಿಸುವುದು, ಇಎಸ್‌ಐ, ಪಿಎಫ್ ಸಮರ್ಪಕವಾಗಿ ಒದಗಿಸುವುದು, ಕಾರ್ಖಾನೆ ಮಾಲಿಕರು ಕಾರ್ಮಿಕರ ಆರೋಗ್ಯ ರಕ್ಷಣೆ ಬಗ್ಗೆ ನಿಗಾ ವಹಿಸುವುದು, ಮಹಿಳಾ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಮತ್ತು ಅಗತ್ಯ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ಆಗ್ರಹಿಸಿ, ಹೆಬ್ಬಾಳು ಕೈಗಾರಿಕಾ ಪ್ರದೇಶಗಳ ವಿವಿಧ ಕಾರ್ಖಾನೆಗಳಿಗೆ ಭೇಟಿ ನೀಡಿ, ಕರಪತ್ರ ಹಂಚಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಕಿರಣ್‌ಗೌಡ, ಸೋಮಶೇಖರ್ ರಾಜು, ನಂಜಪ್ಪ ಅವರು ಕನ್ನಡಾಂಬೆ ರಕ್ಷಣಾ ವೇದಿಕೆಯ ಕನ್ನಡಪರ, ಕಾರ್ಮಿಕರ ಪರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಕನ್ನಡಾಂಬೆ ರಕ್ಷಣಾ ವೇದಿಕೆಯ ಅಧ್ಯಕ್ಷ ಬಿ.ಬಿ.ರಾಜಶೇಖರ್, ಡಿಪಿಕೆ ಪರಮೇಶ್, ರಾಜ್ಯ ಖಜಾಂಚಿ ನಂಜುಂಡ, ಮೈಸೂರು ಜಿಲ್ಲಾ ಅಧ್ಯಕ್ಷ ಸಂತೋಷ್, ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷರಾದ ಮಂಜುಳ, ಪದಾಧಿಕಾರಿಗಳಾದ ಸಿಂಧುವಳ್ಳಿ ಶಿವಕುಮಾರ್, ಮನುಗೌಡ, ಸೋಮಶೇಖರ, ಗೌತಮ್, ಅನುರಾಜ್ ಗೌಡ, ಮಂಜುನಾಥ್, ಸಿದ್ದೇಗೌಡ, ಕಿಕ್ಕೇರಿ ಕಿರಣ, ಶಿವಕುಮಾರ್, ಹೊನ್ನೇಗೌಡ, ರವಿಗೌಡ, ನಾಗರಾಜು, ರಾಜೇಗೌಡ, ಮಹದೇವಸ್ವಾಮಿ, ನೇಹ, ಗುಂಗ್ರಾಲ್ ಛತ್ರ ಲೋಕೇಶ್, ಕಿರಣ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸಂಸದ ಯದುವೀರ್ ಒಡೆಯರ್‌ಗೆ ಸನ್ಮಾನ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ವತಿಯಿಂದ ಸಂಸದ ಯದುವೀರ್ ಒಡೆಯರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಜಿ.ನಿರಂಜನ್, ಹೆಚ್.ಹರೀಶ್‌ಕುಮಾರ್, ಪಿ.ರಾಜೇಶ್ವರಿ, ಎಂ.ಪ್ರಮಿಳಾ, ಕೆ.ಗಿರೀಶ್ ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರಿದ್ದರು.

ಸೆ.22ಕ್ಕೆ ಶ್ರೀ ಲಕ್ಷ್ಮಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ

ಮೈಸೂರು,ಸೆ.17(ಜಿಎ)–ಮೈಸೂರಿನ ನಾಗನಹಳ್ಳಿಯಲ್ಲಿ ಸೆ.22ರಿಂದ 24ರವರೆಗೆ ಶ್ರೀ ಲಕ್ಷ್ಮಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ಹಾಗೂ ವಿವಿಧ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶ್ರೀ ಲಕ್ಷ್ಮಿ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಎನ್.ಎಂ. ಜಗದೀಶ್‌ಗೌಡ ಈ ವಿಷಯ ತಿಳಿಸಿ, ಸೆ.22ರಂದು ಬೆಳಿಗ್ಗೆ 8ರಿಂದ ಪೂಜಾ ಕಾರ್ಯಗಳು ಆರಂಭವಾಗಲಿವೆ ಎಂದರು.

ಸೆ.24ರಂದು ಮಧ್ಯಾಹ್ನ 12ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ನೆರವೇರಿಸುವರು. ದಿವ್ಯ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ಶಾಖಾಮಠದ ಸೋಮನಾಥ ಸ್ವಾಮೀಜಿ, ವಿನಯ್ ಗುರೂಜೀ ಮತ್ತು ಶ್ರೀ ನಿಜಗುಣ ಸಿದ್ದಲಿಂಗಯ್ಯ ಒಡೆಯರ್ ಸ್ವಾಮಿ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಸದಾನಂದಗೌಡ, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಮೇಘಾಲಯ ರಾಜ್ಯಪಾಲ ವಿಜಯಶಂಕರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಯದುವೀರ್ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೃಷಿ ಸಚಿವ ಚಲುವರಾಯಸ್ವಾಮಿ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಭಕ್ತಾದಿಗಳಿಗೆ ನಾಗನಹಳ್ಳಿಯ ಡೈರಿ ಪಕ್ಕದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದರು. ಸುದಿಗೋಷ್ಠಿಯಲ್ಲಿ ಕಾರ್ಯದರ್ಶಿ ಎನ್.ಎಸ್.ಶ್ರೀಕಂಠು ಪಣ್ಣೇಗಾರ್, ಟ್ರಸ್ಟಿಗಳಾದ ಎನ್.ಕೆ.ಮಹದೇವಪ್ಪ, ಎನ್.ಎಸ್.ಸಿಂಗಪ್ಪ, ನಾ.ನಾ.ಮಹೇಶ್, ವೇಣು, ಯಶೋಧಾ ಉಪಸ್ಥಿತರಿದ್ದರು.

ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ಮೈಸೂರು,ಸೆ.17(ಪಿಎಂ)– ಆದರ್ಶ ಸೇವಾ ಸಂಘವು 2025–26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಸಂಘದ ತ್ರಿಮತಸ್ಥ ಬ್ರಾಹ್ಮಣ ಸದಸ್ಯರ (31–3–2025ಕ್ಕೂ ಮೊದಲು) ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಿದೆ. ಕುಟುಂಬದ ವಾರ್ಷಿಕ ವರಮಾನ 4 ಲಕ್ಷ ರೂ. ಒಳಗಿದ್ದು, ವಿದ್ಯಾರ್ಥಿಯ ಹಿಂದಿನ 2025ನೇ ಸಾಲಿನ ಪರೀಕ್ಷೆಯಲ್ಲಿ ಶೇ.85ರಷ್ಟು ಅಂಕ ಪಡೆದಿದ್ದಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು 2025ರ ಸಾಲಿನ ಅಂಕಪಟ್ಟಿ, ಟಿಸಿಯೊಂದಿಗೆ ಸಂಘದ ಕಚೇರಿಯನ್ನು (ಶ್ರೀರಾಂಪುರ 2ನೇ ಹಂತದ ಮಧುವನ ಬಡಾವಣೆ) ಸೆ.17ರಿಂದ 22ರೊಳಗೆ ಸಂಜೆ 4ರಿಂದ 6ರವರೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನೇಮಕಾತಿ ಪತ್ರ ವಿತರಣೆ....



ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯಾಗಿ ನೇಮಕಗೊಂಡ ಸುಣ್ಣದಕೇರಿಯ ಎಸ್.ಮನುನಾಯಕ ಅವರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇಮಕಾತಿ ಪತ್ರ ವಿತರಿಸಿದರು.

ಅಡವಿಟ್ಟ ಚಿನ್ನ ಖರೀದಿ ಹೆಸರಲ್ಲಿ ವಂಚನೆ

ಮೈಸೂರು,ಸೆ.17(ಜಿಎ)–ಅಡವಿಟ್ಟ ಚಿನ್ನ ಖರೀದಿಸಿ ಬಾಕಿ ಹಣ ಕೊಡುತ್ತೇವೆ ಎಂದು ನಂಬಿಸಿ ವಂಚನೆ ಮಾಡುವವರು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದಾರೆ. ಹೀಗಾಗಿ ಅಂತಹವರು ಎಚ್ಚರಿಕೆ ವಹಿಸಬೇಕು ಎಂದು ಸ್ಕಂದ ಗೋಲ್ಡ್ ಕಂಪನಿ ಸ್ಥಾಪಕ ಸಹದೇವ್ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಡವಿಟ್ಟ ಚಿನ್ನ ಬಿಡಿಸಿಕೊಂಡ ಬಳಿಕ ಅದನ್ನು ಖರೀದಿಸುವುದಾಗಿ ಹೇಳುವ ವೇಳೆ ಗ್ರಾಹಕರು ಚಿನ್ನ ಕರಗಿಸುವುದು ಬೇಡ, ಇರುವ ಚಿನ್ನಕ್ಕೇ ದರ ನಿಗದಿ ಮಾಡಿ ಎಂದ ಒತ್ತಾಯಿಸಬೇಕು. ಏಕೆಂದರೆ ಕರಗಿಸುವ ವೇಳೆ ಅದಕ್ಕೆ ತಾಮ್ರ ಸೇರಿಸಿ, ವೇಸ್ಟೇಜ್ ಎಂದು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುವುದು ನಡೆದಿದೆ. ಇಂತಹ ಸಂದರ್ಭದಲ್ಲಿ ಕಂಪ್ಯೂಟರೈಸ್ಡ್ ಗೋಲ್ಡ್ ಟೆಸ್ಟಿಂಗ್ ಮಾಡಿಸಿ ಅದರ ಶುದ್ಧತೆ ಪ್ರಮಾಣ ಪತ್ರದೊಂದಿಗೆ ಮಾರಾಟಕ್ಕೆ ಮುಂದಾಗಬೇಕು. ನೇರವಾಗಿ ಗಿರವಿ ಅಂಗಡಿಗೆ ಹೋಗಿ ಮಾರಾಟ ಮಾಡುವುದು ಉತ್ತಮವಲ್ಲ. ಇದರಿಂದ ಸೂಕ್ತ ಮೌಲ್ಯ ಸಿಗದೆ ಮೋಸ ಹೋಗಬಹುದು. ಆದ್ದರಿಂದ ಪರಿಶುದ್ಧತೆ ಪ್ರಮಾಣಪತ್ರ ಪಡೆದೇ ಮಾರಾಟ ಮಾಡಬೇಕು. ಇದಕ್ಕೆ ಹೆಚ್ಚಿನ ವೆಚ್ಚವೂ ಆಗುವುದಿಲ್ಲ ಎಂದರು. ಗೋಷ್ಠಿಯಲ್ಲಿ ಸಂಸ್ಥೆ ಸಿಬ್ಬಂದಿ ಸಂಜಯ ಉಪಸ್ಥಿತರಿದ್ದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಮರು ಪರಿಶೀಲಿಸುವಂತೆ ಮನವಿ

ಮೈಸೂರು,ಸೆ.17(ಜಿಎ)–ಈ ಬಾರಿಯ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಆಯ್ಕೆ ಬಗ್ಗೆ ಸಾಕಷ್ಟು ವಿವಾದಗಳು ಹುಟ್ಟಿಕೊಂಡಿವೆ. ಇದಕ್ಕೆ ಕಾರಣವೂ ಇದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಅವರು ಈ ಆಯ್ಕೆ ಮರು ಪರಿಶೀಲಿಸಬೇಕೆಂದು ರಾಷ್ಟ್ರೀಯ ರಕ್ಷಣಾ ಸೇನೆಯ ರಾಜ್ಯ ಸಂಚಾಲಕ ಸುರೇಶ್‌ಗೌಡ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಪೂಜೆ ಮಾಡುವ ಪದ್ಧತಿ ಮುಸ್ಲಿಂ ಸಮುದಾಯದಲ್ಲಿಲ್ಲ. ಇದರಿಂದಾಗಿ ಬಾನು ಮುಷ್ತಾಕ್ ಇಕ್ಕಟ್ಟಿಗೆ ಸಿಲುಕಬೇಕಾಗಬಹುದಾಗಿದೆ. ಅವರು ಆ ರೀತಿ ಮಾಡುವುದಕ್ಕೆ ಕೆಲ ಮುಸ್ಲಿಂ ಧರ್ಮ ಗುರುಗಳೂ ವಿರೋಧ ವ್ಯಕ್ತಪಡಿಸಿ ಮುಂದೆ ಅವರು ಸಮಸ್ಯೆಗೆ ಸಿಲುಕ ಬಹುದಾಗಿದೆ. ದಸರಾ ನಾಡಹಬ್ಬದ ಜೊತೆಗೆ ಧಾರ್ಮಿಕ ಆಚರಣೆಯೂ ಆಗಿದೆ. ಒಂದು ವೇಳೆ ಬಾನು ಮುಷ್ತಾಕ್ ಆಯ್ಕೆ ಅಂತಿಮವಾಗಿರುವುದಾದಲ್ಲಿ ಅವರಿಗೆ ಪ್ರಶಸ್ತಿ ಬರಲು ಕಾರಣರಾದ ಅನುವಾದಕಿ ದೀಪಾ ಬಸ್ತಿ ಅವರಿಗೂ ಸಮಾನ ಅವಕಾಶ ನೀಡಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಪುನೀತ್, ಧರ್ಮಾನಾಯಕ್, ಮಾರುತಿ ಉಪಸ್ಥಿತರಿದ್ದರು.

ನೇಮಕ



ಮೈಸೂರು, ಸೆ. 17– ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್, ಕರ್ನಾಟಕ ರಾಜ್ಯ ಅಧ್ಯಕ್ಷ ಡಿ.ಲಕ್ಷ್ಮೀ ವೆಂಕಟೇಶ್ ಹಾಗೂ ಕಾಂಗ್ರೆಸ್ ಯುವ ಘಟಕದ ರಾಜ್ಯಾಧ್ಯಕ್ಷ ಡಾ.ಟಿ.ವೈ. ಕುಮಾರ್ ಆದೇಶದ ಮೇರೆಗೆ ಆರ್.ಹರೀಶ್ ಅವರನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಘಟಕ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಆರ್.ಗಂಗಾಧರ್ ಅವರ ಮಾರ್ಗದರ್ಶನದಲ್ಲಿ ಬನಿತಾ ಬೆಹೆರಾ ಅವರು ಮಾನವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ವಿವಿ ಕಾನೂನು ಶಾಲೆಗೆ ಗುತ್ತಿಗೆ ಆಧಾರದಲ್ಲಿ ನಿರ್ದೇಶಕರ ನೇಮಕ ಕಾನೂನುಬಾಹಿರ

ಮೈಸೂರು,ಸೆ.17(ಜಿಎ)–ಮೈಸೂರು ವಿವಿಯ ಕಾನೂನು ಶಾಲೆ ನಿರ್ದೇಶಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ವಿವಿ ಪ್ರಕಟಣೆ ಹೊರಡಿಸಿರುವುದು ಕಾನೂನುಬಾಹಿರವಾಗಿದೆ. ವಾಸ್ತವವಾಗಿ ಅನುಭವಿ, ಹಿರಿಯರನ್ನೇ ಇದಕ್ಕೆ ನೇಮಕ ಮಾಡಿಕೊಳ್ಳಬೇಕಾಗಿತ್ತು. ಹೀಗಾಗಿ ಈ ನೇಮಕ ಪ್ರಕ್ರಿಯೆ ರದ್ದುಗೊಳಿಸಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಮಕ ಮಾಡಿಕೊಳ್ಳಲು ಸರ್ಕಾರ ಅಥವಾ ಸಿಂಡಿಕೇಟ್ ಅನುಮತಿ ಪಡೆದಿಲ್ಲ ಎಂಬ ಮಾಹಿತಿ ತಮಗೆ ಬಂದಿದೆ. ಯುಜಿಸಿ, ಬಿಸಿಐ ನಿಯಮಾವಳಿ ಪಾಲನೆ ಮಾಡುತ್ತಿಲ್ಲ. ಮೈಸೂರು ವಿವಿ ಈಗಾಗಲೇ ನಿವೃತ್ತ ಪ್ರಾಧ್ಯಾಪಕರಿಗೆ ನಿವೃತ್ತಿ ವೇತನ ನೀಡಲು ಸಾಧ್ಯವಾಗದಂತಹ ದುಸ್ಥಿತಿಯಲ್ಲಿದೆ. ಹೀಗಿರುವಾಗ ಹೊರಗಿನವರ ನೇಮಕ ಅಗತ್ಯವಿತ್ತೇ ಎಂದು ಪ್ರಶ್ನಿಸಿದರು.

ಈ ನೇಮಕಾತಿ ಪ್ರಕ್ರಿಯೆ ಕಾನೂನಿಗೆ ವಿರುದ್ಧವಾದುದಾಗಿದ್ದು, ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು ವಿವಿಗೆ ಹೊರೆಯಾಗಲಿದೆ. ಆದ್ದರಿಂದ ಈ ನೇಮಕಾತಿ ಪ್ರಕ್ರಿಯೆ ರದ್ದುಗೊಳಿಸಿ, ಈಗಾಗಲೇ ಶಾಲೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ನಿರ್ದೇಶಕ ಸ್ಥಾನ ನೀಡಬೇಕು. ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯಪಾಲರು ಇತ್ತ ಗಮನಹರಿಸಬೇಕು. ಒಂದು ವೇಳೆ ನೇಮಕಾತಿ ಪ್ರಕ್ರಿಯೆ ಮುಂದುವರಿಸಿದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಭಾಕರ್, ಸುರೇಶ್ ಕುಮಾರಬೀಡು, ರಾಜು ಮಾರ್ಕೆಟ್, ಶ್ರೀಧರ್, ಮೂರ್ತಿ, ಮಣಿಕಂಠ, ರಮೇಶ್ ಉಪಸ್ಥಿತರಿದ್ದರು.

ವಿಶೇಷ ಪೂಜೆ...



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಮೇಲುಕೋಟೆ ಶ್ರೀ ಯದುಗಿರಿ ಯತಿರಾಜ ಮಠ ಇದರ ಶಾಖಾ ಮಠ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ದಸರಾ ವೇಳೆ ಜರುಗುವ ತೋಳಪ್ಪರ್ ಶ್ರೀ ಕೃಷ್ಣ ಜಯಂತಿಯನ್ನು ದೇವಸ್ಥಾನದ ಮುಖ್ಯಸ್ಥ ಕೆ.ಆರ್.ಯೋಗಾನರಸಿಂಹನ್ ನೇತೃತ್ವದಲ್ಲಿ ವೈಭವದಿಂದ ಆಚರಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.09.2025 ಗುರುವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ) ಕುರಿತು ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು, ಭುಜದ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ಬಂಜೆತನ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಕಾನೂನು ಕಾಲೇಜು:** ವಿಕಾಸ ಪರ್ವ ಸೇರ್ಪಡೆ ಕಾರ್ಯಕ್ರಮ, ಉದ್ಘಾಟನೆ: 3ನೇ ಹೆಚ್ಚುವರಿ ಪ್ರಿನ್ಸಿಪಲ್ ಜಡ್ಜ್, ಕೌಟುಂಬಿಕ ನ್ಯಾಯಾಲಯ ಎಸ್.ಬಿ.ಕೆಂಬಾವಿ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಅಧ್ಯಕ್ಷ ಎಸ್.ಶಿವಲಿಂಗಯ್ಯ, ಸ್ಥಳ: ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ: ಶ್ರೀಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಉಪಸ್ಥಿತರು: ಎಂ.ಜಿ.ಪ್ರಕಾಶ್, ಎಸ್.ಎಂ.ಲಿಂಗಮ್ಮಣ್ಣಿ ನಂಜುಂಡಯ್ಯ, ಡಾ.ಎ.ಪುಷ್ಪ ಅಯ್ಯಂಗಾರ್, ಎ.ವೈದೇಹಿ, ಪ್ರಿನ್ಸಿಪಾಲ್ ಡಾ.ಎಂ.ಶಾರದಾ, ಅಧ್ಯಕ್ಷತೆ: ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಮೈಸೂರು ರತ್ನ ಡಾ. ವಿಷ್ಣುವರ್ಧನ್ ಸ್ಮಾರಕ ಅಭಿಮಾನಿಗಳ ಒಕ್ಕೂಟ :** ಡಾ. ವಿಷ್ಣುವರ್ಧನ್ ಚಿತ್ರಗಳ ಗೀತ ಗಾಯನ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಪೂಜೆ, ಉಪಸ್ಥಿತರು : ಶ್ರೀಮತಿ ಭಾರತಿ ವಿಷ್ಣುವರ್ಧನ್, ಅನಿರುದ್ಧ್ ಜತನಕರ್, ಶ್ರೀಮತಿ ಕೀರ್ತಿ ಅನಿರುದ್ಧ್, ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಬೆಳಗ್ಗೆ 11ಕ್ಕೆ ವಿಷ್ಣು ಗ್ರೂಪ್ ತಂಡದಿಂದ ವಿಷ್ಣುವರ್ಧನ್ ಚಿತ್ರಗಳ ಗೀತ ಗಾಯನ ಕಾರ್ಯಕ್ರಮ, ಸ್ಥಳ: ಡಾ. ವಿಷ್ಣುವರ್ಧನ್ ಸ್ಮಾರಕ, ಉದ್ಬೂರು ಗೇಟ್ ಬಳಿ.

■ **ಮಹಾರಾಜ ಕಾಲೇಜು:** ಹಿಂದಿ ದಿನಾಚರಣೆ ಮತ್ತು ವಿಶೇಷ ಉಪನ್ಯಾಸ, ಪ್ರಾಸ್ತಾವಿಕ ನುಡಿ: ಪ್ರಾಧ್ಯಾಪಕ ಡಾ.ಬಸವರಾಜ ಕೆ.ಬಾರಕೇರ, ಮುಖ್ಯ ಅತಿಥಿಗಳು: ಪ್ರಿನ್ಸಿಪಾಲ್ ಡಾ. ಎಂ.ಬಿ. ಇರ್ಷಾದ್, ವಿಶೇಷ ಅತಿಥಿಗಳು: ಹಿಂದಿ ಶಿಕ್ಷಕ ಹೆಚ್.ಜಿ.ಯೂನಸ್ ಷರೀಫ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಹೆಚ್.ಸಿ.ದೇವರಾಜೇಗೌಡ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ಕೆ.ತಿಮ್ಮಯ್ಯ, ಪ್ರೊ. ಸಿ.ಇ. ಲೋಕೇಶ್, ಸ್ಥಳ: ಜೂನಿಯರ್ ಬಿ.ಎ.ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.

■ **ಯುವರಾಜ ಕಾಲೇಜು:** ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಮಹದೇವಮೂರ್ತಿ, ಉದ್ಘಾಟನೆ: ವಿದುಷಿ ನಮ್ರತಾ ಜೋಯಿಸ್, ಮುಖ್ಯ ಭಾಷಣಕಾರರು: ಪ್ರೊ.ಮೈಸೂರು ಕೃಷ್ಣಮೂರ್ತಿ, ಉಪಸ್ಥಿತರು: ಪ್ರೊ.ಅಜಯ್‌ಕುಮಾರ್, ಪ್ರೊ.ನಾಗೇಶ್ ಬಾಬು, ಪ್ರೊ.ಪರಶುರಾಮ, ಪ್ರೊ. ಮಹೇಶ್ವರ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕೂಡಲ ಸಂಗಮದೇವ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಎ. ಮಹೇಶ್, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಶರಣ ಮಂಡಲಿ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 110ನೇ ಜನ್ಮ ದಿನಾಚರಣೆ, ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಪುಷ್ಪಾರ್ಚನೆ : ಶ್ರೀಅರ್ಜುನ್ ಅವಧೂತ ಗುರುಮಹಾರಾಜರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸನ್ಮಾನಿಸುವವರು : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ :** ಉದಯರವಿ ಪ್ರಕಾಶ್ ಕೆ.ಆರ್. ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮ, ನುಡಿ ನಮನ : ಮಾಜಿ ಶಾಸಕ ಗೋ. ಮಧುಸೂದನ, ಪ್ರಾಸ್ತಾವಿಕ ನುಡಿ : ಸ್ವಾಮಿ ಮರಳಾಪುರ, ಉಪಸ್ಥಿತರು : ಎನ್.ಆರ್. ಮಂಜುನಾಥ್, ಎ. ಗಂಗಾಧರಾಚಾರಿ, ವೃಷಭೇಂದ್ರಸ್ವಾಮಿ, ಡಾ. ಸಿ.ಬಿ. ಅರುಣಕುಮಾರ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಿ. ಕೆಂಪಯ್ಯ, ಸ್ಥಳ: ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣ, ಸಂಜೆ 5ಕ್ಕೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್ :** ಹೆಚ್‌ಎಸ್‌ವಿ–ಗೀತ ನಮನ, ಉಪಸ್ಥಿತರು : ಬಿ.ಆರ್. ಲಕ್ಷ್ಮಣ್‌ರಾವ್, ಟಿ.ಎನ್. ಸೀತಾರಾಂ, ಸ್ಥಳ: ರಜತ ಸಭಾಂಗಣ, ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ನಿರಂತರ ಫೌಂಡೇಷನ್ :** ಸಂಜೆ 6.15 ರಿಂದ ಸಹಜ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಡಾ.ಬಿ.ಆರ್. ಅಂಬೇಡ್ಕರ್ ತರಬೇತಿ ಸಲಹೆಗಾರ ಬಸವರಾಜ ದೇವನೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ನಿರಂತರದ ಎಂ.ಎಂ.ಸುಗುಣ, ಶಿಬಿರಾರ್ಥಿಗಳಿಂದ ಜನಗಣಮನ ನಾಟಕ ಪ್ರದರ್ಶನ, ನಿರ್ದೇಶನ : ಎಂ.ಎಂ. ಸುಗುಣ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

■ **ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ, ಪ್ರಕಾಶ್ ಪ್ರದರ್ಶಕ ಕಲೆಗಳ ಟ್ರಸ್ಟ್ :** ದಿವಂಗತ ವಿದ್ವಾನ್ ಎ.ವಿ. ಪ್ರಕಾಶ್ ಸ್ಮರಣಾರ್ಥ ವರ್ಷಾಬ್ಧಿ–2022, ವಿನೂತನ ಶಾಸ್ತ್ರೀಯ ಸಂಗೀತ, ನೃತ್ಯ ಕಾರ್ಯಕ್ರಮಗಳು ಮತ್ತು ಕಾರ್ಯಾಗಾರ, ಡಾ. ಕೃಪಾ ಫಡ್ಕೆಯವರ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: 33, ಸೂರ್ಯ ಲೇಔಟ್, ಶ್ರೀರಾಂಪುರ 2ನೇ ಹಂತ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ.ಶಾಂತ ಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಬಿ.ಸುನೀತಾ ಆಚಾರ್ಯ ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ: ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅನುರಾಧ ಸುರೇಶ್ ಕೃಷ್ಣಮೂರ್ತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಶಿವಮೊಗ್ಗ ವೇಣುಗೋಪಾಲ್, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ–1) ಅಣ್ವಸ್ತ್ರಗಳ ಅಪಾಯ ಮತ್ತು ಅಣುಶಕ್ತಿಯ ಉಪಯೋಗ ಈ ಕುರಿತು ಮಾತನಾಡುತ್ತಾರೆ ಡಾ.ಪ್ರಸನ್ನ ಸಂತೆಕಡೂರು, 2) ಮಾನವ ಚಾಲಿತ ಮತ್ತು ಸ್ವಯಂಚಾಲಿತ ತಂತ್ರಜ್ಞಾನ ಕುರಿತು ಲಕ್ಷ್ಮಿ ಬಿ.ಅವರಿಂದ ಭಾಷಣ, 6.50 ಕೃಷಿರಂಗ–ಕಿಸಾನ್‌ವಾಣಿ, ಕೋಳಿ ಸಾಕಾಣಿಕೆಯಲ್ಲಿ ಸುಧಾರಿತ ತಾಂತ್ರಿಕತೆಗಳು ಈ ಕುರಿತು ಮೈಸೂರಿನ ಪಶು ವೈದ್ಯರಾದ ಡಾ. ಶಶಿಭೂಷಣ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಧುರೈ ಸೋಮಸುಂದರಂ–ಹಾಡುಗಾರಿಕೆ, 10.00 ನಾಟಕ–ಹದಿನಾಲ್ಕು ವರ್ಷಗಳ ನಂತರ

ಹೊಸ ಮಾರ್ಗಸೂಚಿಯಿಂದ ಸಾರಿಗೆ ಬಸ್ ಪ್ರಯಾಣಿಕರಿಗೆ ತೊಂದರೆ; ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಅಧಿಕಾರಿಗಳು ದೂರು

ಮೈಸೂರು, ಸೆ.17(ಎಸ್‌ಪಿಎನ್)– ಬೆಂಗಳೂರಿನಿಂದ ಬರುವ ಘಟಕ–1 ಮತ್ತು ಘಟಕ–3ರ ಸಾರಿಗೆ ಬಸ್‌ಗಳು ಮೈಸೂರು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಾರದೆ ಪ್ರಯಾಣಿಕರನ್ನು ಆರ್ಚ್‌ಗೇಟ್ ಬಳಿ ಇಳಿಸಿ, ಪ್ರಯಾಣಿಕರಿಗೆ ತೊಂದರೆ ಕೊಡುತ್ತಿರುವುದರ ಕುರಿತು ಕೆಎಸ್‌ಆರ್‌ಟಿಸಿ ಹಿರಿಯ ಘಟಕ ವ್ಯವಸ್ಥಾಪಕರಿಗೆ, ಮೈಸೂರು ಗ್ರಾಮಾಂತರ ನಿಲ್ದಾಣದ ಹಿರಿಯ ಅಧಿಕಾರಿಗಳು ದೂರು ನೀಡಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ನಿಯಂತ್ರಿಸಲು 2025ರ ಏ.21ರಂದು ಮೈಸೂರು ಗ್ರಾಮಾಂತರ ವಿಭಾಗೀಯ ಕಚೇರಿಯಲ್ಲಿ ಮೈಸೂರು ನಗರ ಡಿಸಿಪಿ(ಸಂಚಾರ ಮತ್ತು ಅಪರಾಧ) ಮತ್ತು ಸಂಚಾರ ವಿಭಾಗದ ಎಸಿಪಿ, ಇನ್ಸ್‌ಪೆಕ್ಟರ್‌ಗಳೊಂದಿಗೆ ನಡೆದ ಸಭೆಯಲ್ಲಿ ನಗರ ಪೊಲೀಸ್ ಇಲಾಖೆಯಿಂದ ಗ್ರಾಮಾಂತರ ಬಸ್ ನಿಲ್ದಾಣ ಸುತ್ತಮುತ್ತ ಸಂಚಾರ ನಿಯಂತ್ರಣಕ್ಕೆ ಕೆಲ ಮಾರ್ಗಸೂಚಿಗಳನ್ನು ಸೂಚಿಸಿ, ನಿರ್ಬಂಧಗಳನ್ನು ವಿಧಿಸಿದ್ದಾರೆ.


ಸಂಗ್ರಹ ಚಿತ್ರ

ಶ್ರೀರಂಗಪಟ್ಟಣ ಮಾರ್ಗವಾಗಿ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬರುವ ಸಾರಿಗೆ ಬಸ್‌ಗಳು ಫೈವ್‌ಲೈಟ್ ವೃತ್ತದಿಂದ ಕಮಾನು ಗೇಟ್ ಬಳಿ ಎಡಕ್ಕೆ ತಿರುಗಿ ಮುಂದಕ್ಕೆ ಸಾಗಿ ತಾಲೂಕು ಕಚೇರಿ ಬಳಿ ಬಲಕ್ಕೆ ತಿರುಗಿ ಹಾರ್ಡಿಂಜ್ ವೃತ್ತದ ಕಡೆಯಿಂದ ಗ್ರಾಮಾಂತರ ನಿಲ್ದಾಣಕ್ಕೆ ಆಗಮಿಸಿ ಪ್ರಯಾಣಿಕರನ್ನು ಇಳಿಸುವಂತೆ ಸೂಚಿಸಿದ್ದರೂ ಹಿರಿಯ ಅಧಿಕಾರಿಗಳ ಸೂಚನೆಗಳನ್ನು ಸಾರಿಗೆ ಬಸ್ ಸಿಬ್ಬಂದಿಗಳು ಪಾಲಿಸುತ್ತಿಲ್ಲ ಎಂದು ಅಲವತ್ತುಕೊಂಡಿದ್ದಾರೆ.

ಘಟಕ–1 ಮತ್ತು ಘಟಕ–3ಕ್ಕೆ ಸೇರಿದ ಸಾರಿಗೆ ಬಸ್‌ಗಳು, ಪ್ರಯಾಣಿಕರನ್ನು ಆರ್ಚ್ ಗೇಟ್ ಬಳಿಯೇ ಒತ್ತಾಯಪೂರಕವಾಗಿ ಇಳಿಸುತ್ತಿದ್ದಾರೆ ಎಂದು ಪ್ರಯಾಣಿಕರು ಪದೇಪದೆ ದೂರು ನೀಡುತ್ತಿದ್ದಾರೆ. ಪ್ರಯಾಣಿಕರಲ್ಲಿ ವೃದ್ಧರು, ಮಕ್ಕಳು, ಮಹಿಳೆಯರು ಹಾಗೂ ವಿಕಲಚೇತನರು ನಿಲ್ದಾಣದಿಂದ ಬೇರೆ ಸ್ಥಳಗಳಿಗೆ ತೆರಳುವ ಪ್ರಯಾಣಿಕರು ಲಗೇಜ್ ಇರುವವರಿದ್ದು, ಇವರು ರಸ್ತೆಯನ್ನು ದಾಟಿ ಬಸ್ ನಿಲ್ದಾಣಕ್ಕೆ ಒಂದು ಪ್ರಿಪೇಡ್ ಆಟೋ ರಿಕ್ಷಾವನ್ನು ಹತ್ತಬೇಕಾಗಿರುತ್ತದೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ.

ಈ ಕುರಿತಂತೆ ಹಲವು ಬಾರಿ ಬಸ್ ನಿಲ್ದಾಣದ ಧ್ವನಿವರ್ಧಕಗಳು ಹಾಗೂ ಸಂಚಾರ ನಿಯಂತ್ರಕರ ಮೂಲಕ ಸೂಚನೆ ನೀಡಲಾಗುತ್ತಿದೆ. ಆರ್ಚ್ ಗೇಟ್ ಬಳಿ ಕೆಎಸ್‌ಆರ್‌ಟಿಸಿ ಪೇದೆಗಳನ್ನು ನಿಯೋಜಿಸಿ ನಿಲ್ದಾಣದಲ್ಲೇ ಪ್ರಯಾಣಿಕರನ್ನು ಇಳಿಸಲು ಸೂಚಿಸಿದರೂ ಸಹ ಚಾಲನ ಸಿಬ್ಬಂದಿ ಗ್ರಾಮಾಂತರ ನಿಲ್ದಾಣಕ್ಕೆ ಆಗಮಿಸಿ ಪ್ರಯಾಣಿಕರನ್ನು ಇಳಸದೇ ಹೋಗುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಬೆಂಗಳೂರಿನಿಂದ ಹೊರಹೋಗಲು ಬ್ಲ್ಯಾಕ್‌ಬಕ್ ನಿರ್ಧಾರ

ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬೇಕೆಂದು ಪೈ, ಕಿರಣ್ ಮಜುಂದಾರ್ ಶಾ ಆಗ್ರಹ

ಬೆಂಗಳೂರು: ಹದಗೆಟ್ಟ ರಸ್ತೆಗಳು ಮತ್ತು ಸಂಚಾರ ದಟ್ಟಣೆ ಸಮಸ್ಯೆಗಳನ್ನು ಉಲ್ಲೇಖಿಸಿ ಆನ್‌ಲೈನ್ ಟ್ರಕ್ಕಿಂಗ್ ಪ್ಲಾಟ್‌ಫಾರ್ಮ್ ಬ್ಲ್ಯಾಕ್‌ಬಕ್ ಬೆಂಗಳೂರಿನ ಹೊರ ವರ್ತುಲ ರಸ್ತೆಯ(ಒಆರ್‌ಆರ್) ಬೆಳ್ಳಂದೂರಿನಲ್ಲಿರುವ ತನ್ನ ಪ್ರಸ್ತುತ ಕಚೇರಿಯನ್ನು ಸ್ಥಳಾಂತರಿಸುವುದಾಗಿ ಹೇಳಿದ ನಂತರ ಬೆಂಗಳೂರಿನ ಕೆಲವು ಉದ್ಯಮಿಗಳು ರಾಜ್ಯ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿದ್ದಾರೆ.

ನಗರದ ಐಟಿ ಕಾರಿಡಾರ್‌ಗಳಲ್ಲಿ ಒಂದಾದ ಒಆರ್‌ಆರ್ ಆಗಾಗ್ಗೆ ಸಂಚಾರ ದಟ್ಟಣೆಗೆ ಸಾಕ್ಷಿಯಾಗುತ್ತದೆ. ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿದ ಇನ್ಫೋಸಿಸ್‌ನ ಮಾಜಿ ಸಿಎಫ್‌ಒ ಮೋಹನ್‌ದಾಸ್ ಪೈ ಅವರು, ಇದು ಬೆಂಗಳೂರಿನ ಆಡಳಿತದ ದೊಡ್ಡ ವೈಫಲ್ಯ ಎಂದು ಟೀಕಿಸಿದ್ದಾರೆ. ಅಲ್ಲದೆ ಈ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಐಟಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತ ಮಹೇಶ್ವರ ರಾವ್ ಅವರು ಮಧ್ಯಪ್ರವೇಶಿಸಬೇಕು ಎಂದು ಕೋರಿದ್ದಾರೆ.

ಸಚಿವ ಡಿ.ಕೆ.ಶಿವಕುಮಾರ್ ಅವರೇ ದಯವಿಟ್ಟು ಗಮನಿಸಿ, ಕಂಪನಿಗಳು ಒಆರ್‌ಆರ್‌ನಿಂದ ಹೊರಹೋಗುತ್ತಿವೆ. ಪರಿಸ್ಥಿತಿ ಆಶಾದಾಯಕವಾಗಿಲ್ಲ. ದಯವಿಟ್ಟು ಮಧ್ಯಪ್ರವೇಶಿಸಿ ಎಂದು ಮೋಹನ್‌ದಾಸ್ ಪೈ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇನ್ನೂ ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್–ಶಾ ಅವರು ಸಹ, ಡಿಕೆ ಶಿವಕುಮಾರ್ ಅವರು ಈ ಸಮಸ್ಯೆಗಳನ್ನು ಸರಿಪಡಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.ಸಮಸ್ಯೆ ಗಂಭೀರವಾಗಿದೆ. ಈ ಸಮಸ್ಯೆಗಳನ್ನು ಸರಿಪಡಿಸಲು ತುರ್ತು ಕ್ರಮಗಳ ಅಗತ್ಯವಿದೆ ಎಂದು ಶಾ ಅವರು, ಡಿ.ಕೆ.ಶಿವಕುಮಾರ್ ಅವರನ್ನು ಟ್ಯಾಗ್ ಮಾಡಿ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.



ಕಿರಣ್ ಮಜುಂದಾರ್ ಶಾ, ಮೋಹನ್‌ದಾಸ್ ಪೈ

ಬ್ಲ್ಯಾಕ್‌ಬಕ್‌ನ ಸಹ–ಸಂಸ್ಥಾಪಕ ಮತ್ತು ಸಿಇಒ ರಾಜೇಶ್ ಯಬಾಜಿ ಅವರು, ಒಆರ್‌ಆರ್‌ನಲ್ಲಿರುವ ಕಂಪನಿಯು ಸುಮಾರು ಒಂದು ದಶಕದಿಂದ ಕಚೇರಿ ಮತ್ತು ಮನೆ ಎರಡೂ ಆಗಿತ್ತು. ಹಾಳಾದ ರಸ್ತೆಗಳು, ಗುಂಡಿಗಳು ಮತ್ತು ಧೂಳಿನಿಂದಾಗಿ ಪರಿಸ್ಥಿತಿ ಅಸಹನೀಯವಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ಮುಂದುವರಿಯುವುದು ಈಗ ತುಂಬಾ ಕಷ್ಟ, ನಾವು ಹೊರ ಹೋಗಲು ನಿರ್ಧರಿಸಿದ್ದೇವೆ' ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ತಿ.ನರಸೀಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ನಿ), ತಿ.ನರಸೀಪುರ,

2024–25ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ,

ಮೇಲ್ಕಂಡ ಸಂಘದ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ:19–09–2025ರ ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ.ಟಿ.ಪಿ. ಸುಬ್ರಹ್ಮಣ್ಯ ರವರ ಘನ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತದೆ. ಸಂಘದ ಮಾನ್ಯ ಸರ್ವ ಸದಸ್ಯರೆಲ್ಲರಿಗೂ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿರುತ್ತದೆ . ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದರೆ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ, ಸಕಾಲದಲ್ಲಿ ಆಗಮಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಜಿ.ರಘುನಂದನ್, ಕಾರ್ಯದರ್ಶಿ
ತಾ॥ವ್ಯ॥ಮಾ॥ಸ॥ಸಂ॥(ನಿ) ತಿ.ನರಸೀಪುರ
ಮೊ.ನಂ.:9036840738

ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ನಿಯಮಿತ (ರಿ.)

ಕ್ರ.ಸಂ:ಸನಿ41/ಸಿ3/ನೋಂದಣಿ/ಸೌ.ಕಾ./ನೊ.ಸಂ:5482/2020–21
ನಂ. 328, 'ರೋಹಿಣಿ', ಮೊದಲನೇ ಮಹಡಿ, 1ನೇ ಕ್ರಾಸ್, 2ನೇ ಮೇನ್, 1/3 ಕ್ರಾಸ್, ನಿವೇದಿತ ನಗರ, ಮೈಸೂರು. ಮೊ: 9900888791

BKSS/2025-26/13 Date: 15-9-2025

ಚುನಾವಣೆ ಪ್ರಕಟಣೆ

ಮುಂಬರುವ ದಿನಾಂಕ: 5–10–2025ರಂದು ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿಯ ಚುನಾವಣೆಯನ್ನು ನಿಗಧಿಪಡಿಸಿದ್ದು, ಈ ಸಂಬಂಧ ಪೂರ್ವಭಾವಿ ಪ್ರಕ್ರಿಯೆಯು ದಿನಾಂಕ: 20–9–2025 ರಿಂದ ಜಾರಿಗೊಳ್ಳಲಿದ್ದು, ಈ ವಿಷಯವನ್ನು ಸಹಕಾರಿಯ ಸಂಬಂಧಿತ ಸದಸ್ಯ ಬಂಧುಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಸ್ಥಳ: ಮೈಸೂರು
ದಿನಾಂಕ: 15–9–2025

ರಿಟರ್ನಿಂಗ್ ಅಧಿಕಾರಿಗಳು
ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ನಿಯಮಿತ
ನಿವೇದಿತ ನಗರ, ಮೈಸೂರು

PUBLIC NOTICE

Notice is hereby issued to the General Public that my client **Mr. CHETAN P TAYAL,** has filed O. S No 257/2016 on the file of the 3rd ADDL CIVIL JUDGE SENIOR DIVISION, Mysore, in respect of Schedule Property, the Hon'ble court has granted stay order not to alienate and not to create any charge over the Schedule property to any 3rd person until the disposal of the suit. Any persons entering into any contract or creating any type of charge over the Schedule property is not binding on my client, who is the plaintiff in the above case.

SCHEDULE

All that piece and parcel of composite immovable lands bearing Sy no 153 (New Sy No 153/1) Measuring 15 Guntas situated at Metagalli Village, Kasaba Hobli, Mysore Thaluk, Mysore District, Karnataka state and Bounded on the : **East by -** KRS Road, **West by:** Govt Voni and Land Bearing Sy No 152, **North By** Annayappa's Choultry, **South By** - Remaining part of Sy no 153 of Mrs. Shanthi.

Sd/- M. Sampath Kumar BAL., LL.B.
Advocate, Office at #904/CH1,
Gopalaswamy, Shishu Vihara Road,
Lakshmipuram, Mysore-570004
Phone: 9845147741

ವೈಕುಂಠ ಸಮಾರಾಧನ ಆಹ್ವಾನ ಪತ್ರಿಕೆ



ಶ್ರೀಮತಿ ಈಶ್ವರಮ್ಮನವರು
(ಡಿ.ಎಸ್. ಕೇಶವಾಚಾರ್,ಕೆ.ಸಿ.ಟಿ ನಿವೃತ್ತ ಉಪನ್ಯಾಸಕರು, ಇವರ ಧರ್ಮಪತ್ನಿ)

ಇವರು ದಿನಾಂಕ 06–09–2025ನೇ ಶನಿವಾರ ದೈವಾಧೀನರಾದೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 18–09–2025ನೇ ಗುರುವಾರ ವೈಕುಂಠ ಸಮಾರಾಧನೆಯನ್ನು, ಮಧ್ಯಾಹ್ನ 12 ಗಂಟೆಗೆ ನಮ್ಮ ಸ್ವಗೃಹ ನಂ. 370, 11ನೇ ಕ್ರಾಸ್, ಜೆ. ಬ್ಲಾಕ್, ರಾಮಕೃಷ್ಣನಗರ, ಮೈಸೂರು ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಕೋರುವ.

ದುಃಖತಪ್ತರು:
ಶ್ರೀಮತಿ ಈಶ್ವರಮ್ಮ, ಶ್ರೀ ಕೇಶವಾಚಾರ್ ಡಿ. ಎಸ್ ರವರ ಮಕ್ಕಳು ಹಾಗೂ ಕುಟುಂಬ ವರ್ಗದವರು

ಗೌರವಾನ್ವಿತ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ ಮೈಸೂರು

ಸಿ.ಮಿಸ್.ಸಂಖ್ಯೆ.859/2025

ಅರ್ಜಿದಾರರು: ಶ್ರೀ.ಮಂಜುನಾಥ್ ವಿರುದ್ಧ,
ಎದುರುದಾರರು: ಜನನ ಮತ್ತು ಮರಣಗಳ ನೋಂದಣಾಧಿಕಾರಿ, ಮೈಸೂರು ಮಹಾನಗರಪಾಲಿಕೆ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಜನನ ಮತ್ತು ಮರಣ ನೋಂದಣಿ ಅಧಿನಿಯಮ 1969 ಕಲಂ 13(3) ರ ಅಡಿಯಲ್ಲಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯಾದ ಶ್ರೀ.ಚಂದ್ರಶೇಖರ್ ಬಿನ್ ಲೇಟ್ ವರದರಾಜು ರವರು ದಿನಾಂಕ 17–06–2020 ರಂದು ಮನೆ ನಂ.316, 5ನೇ ಕ್ರಾಸ್, ಕೆಸರೆ, 1ನೇ ಹಂತ, ಮೈಸೂರು ಇಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರ ನೀಡುವಂತೆ ನಿರ್ದೇಶನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಮೇಲ್ಕಂಡ ವಿಚಾರದ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ ಸುನಾವಣಾ ದಿನಾಂಕ 29/10/25 ರಂದು ಬೆಳಿಗ್ಗೆ 11–00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸಬಹುದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು. ಈ ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ಮೇರೆಗೆ ದಿನಾಂಕ 4/9/25 ರಂದು ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು ಗೌರವಾನ್ವಿತ
3ನೇ ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/–ಆನಂದ್.ಆರ್.
ದಿನಾಂಕ: 04–07–2025, ಸ್ಥಳ : ಮೈಸೂರು

ಪ್ರಕಟಣೆ

ನನ್ನ ಕಕ್ಷಿದಾರರಾದ ನಂಜನಗೂಡು ಟೌನ್ ಜೆಎಸ್‌ಎಸ್ ಕಾಲೇಜು ರಸ್ತೆ ದೇವಿರಮ್ಮನ–ಹಳ್ಳಿಯಲ್ಲಿ ವಾಸವಾಗಿರುವ ಪೇಮರಾಜ್ ಸಿರ್ವಿ ರವರ ಮಗನಾದ ಸುಮಾರು 31 ವರ್ಷದ ಶ್ರೀ ಮಹೇಶ್ ಸಿರ್ವಿ ರವರ ಇರಾದೆ ಮೇರೆಗೆ ನನ್ನ ಕಕ್ಷಿದಾರರು ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಖಾಲಿ ನಿವೇಶನವನ್ನು ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬ್ಯಾಳಾರು ಗ್ರಾಮದ ಸರ್ವೆ ನಂ.164/3 (ಒಂದು ನೂರ ಅರವತ್ತನಾಲ್ಕು ಸಬ್ ನಂ ಮೂರು) ರಲ್ಲಿ 0–12 ಗುಂಟೆ (ಹನ್ನೆರಡು ಗುಂಟೆ) ಜಮೀನನ್ನು ನಂಜನಗೂಡು ಟೌನ್, ಕೆ ಹೆಚ್ ಬಿ. ಕಾಲೋನಿ, ಮನೆ ನಂ.505ರಲ್ಲಿ ವಾಸವಾಗಿರುವ ಶ್ರೀನಿವಾಸ ಆರ್ ರವರ ಮಗನಾದ ಶಶಾಂಕ್ .ಎಸ್ ರಾವ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಈ ಜಮೀನಿನ ಮೇಲೆ ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಋಣಭಾರ ವಗೈರೆಗಳು ಯಾರಿಗಾದರೂ ಇದ್ದಲ್ಲಿ ಅಂತವರು ಈ ಕೆಳಕಂಡ ವಿಳಾಸಕ್ಕೆ ಈ ಲಾಗಾಯ್ತು 7(ಏಳು) ದಿನಗಳ ಒಳಗಾಗಿ ತಮ್ಮ ತಕರಾರು ಅಥವಾ ಆಕ್ಷೇಪಣೆ ಏನಾದರೂ ಇದ್ದಲ್ಲಿ ಲಿಖಿತವಾಗಿ ತಿಳಿಸತಕ್ಕದ್ದು.

ಷೆಡ್ಯೂಲ್:

ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬ್ಯಾಳಾರು ಗ್ರಾಮದ ಸರ್ವೆ ನಂ.164/3 (ಒಂದು ನೂರ ಅರವತ್ತನಾಲ್ಕು ಸಬ್ ನಂ ಮೂರು) ರಲ್ಲಿ 0–12 ಗುಂಟೆ (ಹನ್ನೆರಡು ಗುಂಟೆ ಜಮೀನಿಗೆ ಚೆಕ್ಕುಬಂಧಿ :
ಪೂರ್ವಕ್ಕೆ : ಸರ್ವೆ ನಂ.164/4 ರ ಜಮೀನು,
ಪಶ್ಚಿಮಕ್ಕೆ: ಸರ್ವೆ ನಂ.165/1 ರ ಜಮೀನು,
ಉತ್ತರಕ್ಕೆ: ಸರ್ವೆ ನಂ.164/2 ರ ಜಮೀನು,
ದಕ್ಷಿಣಕ್ಕೆ: ನಂಜನಗೂಡು ಹರತಲೆ ರಸ್ತೆ

ವಿಳಾಸ
ಜೆ ಎಂ ಶಿವಪ್ರಸಾದ್. ಬಿ.ಕಾಂ,ಎಲ್‌ಎಲ್‌ಬಿ
ವಕೀಲರು ಮತ್ತು ನೋಟರಿ
ಚಿಂತಾಮಣಿ ಗಣಪತಿ ದೇವಸ್ಥಾನದ ಹಿಂಭಾಗ 20ನೇ ಕ್ರಾಸ್, ನಂಜನಗೂಡು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈಅಪ್ರಾ/ವ.ಕ.–6/132/2025–26 ದಿನಾಂಕ: 16.09.2025

ಪತ್ರಿಕಾ ಪ್ರಕಟಣೆ

ಶ್ರೀ ಆರ್ಕೇಶ್.ಪಿ.ಎಂ ಬಿನ್ ಲೇ। ಮಾದಪ್ಪ ರವರಿಗೆ ಮೈಸೂರು ನಗರದ ಲಲಿತಾದ್ರಿನಗರ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 439 ಅಳತೆ **6.00 x 9.00** ಮೀ ನಿವೇಶನವು ಪ್ರಾಧಿಕಾರದಿಂದ ದಿನಾಂಕ: 20–10–2012 ರಂದು ಮಂಜೂರಾಗಿರುತ್ತದೆ. ದಿ: 26–06–2013 ರಂದು ಗುತ್ತಿಗೆ ಕರಾರು ಪತ್ರ ಪಡೆದು ನೊಂದಾಯಿಸಿ, ದಿ: 27–06–2013 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ಹಾಗೂ ದಿ: 11–07–2013 ರಂದು ನಿವೇಶನದ ಖಾತಾ ಮತ್ತು ಕಂದಾಯ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ ಆರ್ಕೇಶ್.ಪಿ.ಎಂ ರವರು ದಿನಾಂಕ: 20–10–2020 ರಂದು ಮರಣ ಹೊಂದಿರುವುದರಿಂದ ಮರಣ ಸಮರ್ಥನ ಪತ್ರ ಸಲ್ಲಿಸಿರುತ್ತಾರೆ ಹಾಗೂ ಉಪ ತಹಶೀಲ್ದಾರ್ ಪಾಳ್ಯ ಹೋಬಳಿ ಕೊಳ್ಳೆಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ ರವರು ನೀಡಿರುವ ವಂಶವೃಕ್ಷದ ***RD00386752-98896*** ದಿನಾಂಕ **1-10-2022** ರಂದು ನೀಡಿರುವ ಪ್ರತಿಗಳನ್ನು ನೀಡಿರುತ್ತಾರೆ.

ಮೃತರ ವಾರಸುದಾರರಾದ ಇವರ ಪತ್ನಿ ಶ್ರೀಮತಿ ಡಿ. ಸುಂದ್ರಮ್ಮ ಹಾಗೂ ಮಕ್ಕಳಾದ ಶ್ರೀ ಎ. ಮಹೇಶ್, ಶ್ರೀ ಪಿ.ಎ. ಉಮೇಶ ಮತ್ತು ಶ್ರೀ ಎ. ನಂದೀಶ ರವರುಗಳು ಪೌತಿ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ಜಂಟಿ ಪೌತಿ ವರ್ಗಾವಣೆ ಮಾಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್ ವಲಯ ಕಛೇರಿ–6
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ

ಜಿಲ್ಲಾ ಕಾರ್ಯಕ್ರಮ ನಿರ್ವಹಣ ಘಟಕ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
#308, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯಜೋಡಿ ರಸ್ತೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ –571313
Email ID: rchochamarajanagar@gmail.com ದೂರವಾಣಿ ಸಂಖ್ಯೆ : 08226-355162

ಕ್ರಸಂ :ಜಿಆಕುಕಸೊ/ಚಾನ/ಎನ್.ಹೆಚ್.ಎಂ/ಇ–ಟೆಂಡರ್/ವಾಹನ/01/2025–26 ದಿನಾಂಕ: 12/09/2025

–: ಟೆಂಡರ್ ಪ್ರಕಟಣೆ:–

ಚಾಮರಾಜನಗರ ಜಿಲ್ಲೆಯಲ್ಲಿ 2025–26 ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯಡಿ ಹೊರಗುತ್ತಿಗೆ ಸಂಸ್ಥೆಯವರಿಂದ ಮಾಸಿಕ ಬಾಡಿಗೆ ಆಧಾರದಲ್ಲಿ ಒಟ್ಟು 4 ವಾಹನಗಳನ್ನು ಒದಗಿಸಲು 2021 ರ ಮೇಲ್ಪಟ್ಟ ಮಾಡೆಲ್‌ನ **Bolero** ಮಾದರಿಯ **SUV** ನಾಲ್ಕು ಚಕ್ರಗಳ ವಾಹನಗಳನ್ನು (ಚಾಲಕರ ಸಮೇತ) ಸಾರಿಗೆ/ಪ್ರವಾಸೋದ್ಯಮ ಇಲಾಖೆಯಲ್ಲಿ ನೊಂದಾಯಿತ ಹೊರ ಸಂಪನ್ಮೂಲ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ **(Website: www.kppp.karnataka.gov.in)** ಮೂಲಕ ನಿಯಮಾನುಸಾರ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. (ರಜಾ ದಿನ ಹೊರತುಪಡಿಸಿ).

ಕ್ರ. ಸಂ.	ಅವಶ್ಯಕವಿರುವ ವಾಹನಗಳು	ಅನುಮೋದಿತ ಮಾಸಿಕ ಬಾಡಿಗೆ ದರ (Inclusive of GST)	ಟೆಂಡರ್ ಅಂದಾಜು ಮೊತ್ತ	ಇ.ಎಂ.ಡಿ. ಮೊತ್ತ	ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ & ವೇಳೆ	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ & ವೇಳೆ	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ & ವೇಳೆ	ಆರ್ಥಿಕ ಲಕೋಟೆ ತೆರೆಯುವ ದಿನಾಂಕ & ವೇಳೆ
1	ಸಂಚಾರಿ ಆರೋಗ್ಯ ಘಟಕ ವಾಹನ–04	60,000 With AC	16,80,000	42,000	12-9-2025	23-9-2025	24-9-2025	26-9-2025

ಸಹಿ/– ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ:ವಾಸಾಸಂಇ:ಚಾ.ನಗರ:360:2025–26

ನಕ್ಕರೆ ಅದೇ ಸ್ವರ್ಗ

ಗುಂಡ ಬೆಳಗ್ಗೆಯಿಂದ ಊರೆಲ್ಲಾ ತಿರುಗಿ ಮಧ್ಯಾಹ್ನ ಡಾಕ್ಟರ್ ಹತ್ರ ಹೋದ

ಗುಂಡ : ಡಾಕ್ಟ್ರೇ, 4 ಮಾತ್ರೆ ಬರ್ದಿದ್ರಲ್ಲಾ ಅವೆಲ್ಲಾ ಸಿಕ್ಕಿದಾವೆ, ಆದ್ರೆ ಚೀಟಿ ಹಿಂದೆ ಬರ್ದಿದ್ರಲ್ಲಾ 3 ಮಾತ್ರೆ ಅವು ಸಿಕ್ಕಿಲ್ಲ.
ಡಾಕ್ಟರ್ ಹಣೆ ಹಣೆ ಬಡ್ಕೊಂಡು ಹೇಳ್ದ; ಲೇ ಹುಚ್ಚ, ಪೆನ್ ಬರಿತಾ ಇರ್ಲಿಲ್ಲ ಅಂತ ಬರ್ದಿದ್ದು ಅದು...

ಗುಂಡ : ಅಯ್ಯೋ, ಮತ್ತೆ ಮೆಡಿಕಲ್‌ಶಾಪ್ ಅವ್ನು ಎಂತವ, 3 ದಿನದ ಒಳಗೆ ತರ್ಸಿಕೊಡ್ತೀನಿ ಅಂತ ಹೇಳ್ತಾನೆ!

ಮೈಸೂರು ಮಿತ್ರ
ಗುರುವಾರ, 18 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಪ್ರಪಂಚ ನೀ ಹೇಗೆ ಇದ್ದರೂ ದೂಷಿಸುತ್ತದೆ. ಶ್ರೀರಾಮನಂತಿದ್ದರೂ, ಸತ್ಯ ಹರಿಶ್ಚಂದ್ರನಂತಾದರೂ.. ಆದ್ದರಿಂದ ಲೋಕ ಮೆಚ್ಚಿಸುವ ಹುಚ್ಚು ಬೇಡ. ಸದಾಕಾಲ ನೀನು ನೀನಾಗಿರು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರೋಲ್ಲ

ನಿಮ್ಮ ಪತ್ರಗಳು

ಕ್ರೀಡಾ ಸ್ಫೂರ್ತಿ ಇಲ್ಲದ ಮೇಲೆ ಆಡುವುದೇಕೆ?

ಮಾನ್ಯರೆ,

ಭಾರತದ ಕ್ರಿಕೆಟ್ ತಂಡ ಪಾಕಿಸ್ತಾನದ ನೆಲದಲ್ಲಿ ಆಡಲು ನಿರಾಕರಿಸಿದ ಕಾರಣ ದುಬೈನಲ್ಲಿ ಏಷ್ಯಾ ಕಪ್ ಟಿ –20 ಕ್ರಿಕೆಟ್ ಪಂದ್ಯಗಳು ನಡೆಯುತ್ತಿವೆ. ಪಹಲ್ಗಾಮ್ ಉಗ್ರರ ದಾಳಿಯ ನಂತರ ಎರಡೂ ದೇಶಗಳ ಸಂಬಂಧ ಹಳಸಿದೆ. ಇದೇ ಕಾರಣದಿಂದ 14.9.25ರಂದು ನಡೆಯಲಿದ್ದ ಪಂದ್ಯವನ್ನು ಭಾರತ ಬಹಿಷ್ಕರಿಸಬೇಕು ಎಂದು ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ಒತ್ತಾಯ ಮಾಡಲಾಗಿತ್ತು. ಕಾಂಗ್ರೆಸ್, ಶಿವಸೇನೆ ಸೇರಿದಂತೆ ರಾಜಕೀಯ ಪಕ್ಷಗಳೂ ಒತ್ತಾಯಿಸಿದ್ದವು. ಆದರೂ ಬಿಜೆಪಿ ಮತ್ತು ಕೇಂದ್ರ ಸರ್ಕಾರಗಳು ಕ್ರಮ ಕೈಗೊಳ್ಳಲಿಲ್ಲ. ಭಾರತ ಮತ್ತು ಪಾಕ್ ನಡುವಿನ ದ್ವಿಪಕ್ಷೀಯ ಸರಣಿಗಳಿಗೆ ಅವಕಾಶವಿಲ್ಲ. ಆದರೆ ಬಹು ರಾಷ್ಟ್ರಗಳು ಭಾಗವಹಿಸುವ ಟೂರ್ನಿಗಳಲ್ಲಿ ಆಡುವುದನ್ನು ತಡೆಯಲು ಆಗುವುದಿಲ್ಲ ಎಂದು ಕೇಂದ್ರ ಕ್ರೀಡಾ ಸಚಿವಾಲಯ ಹೇಳಿದೆ.

ಹಾಗಾದರೆ ಅಂದು ನಡೆದ ಪಂದ್ಯದ ಆರಂಭದ ವೇಳೆ ಹಾಗೂ ಪಂದ್ಯದ ನಂತರ ಭಾರತ ಮತ್ತು ಪಾಕ್ ತಂಡಗಳ ಕ್ಯಾಪ್ಟನ್‌ಗಳು ಹಾಗೂ ಉಭಯ ತಂಡಗಳ ಆಟಗಾರರು ಪಂದ್ಯದ ನಂತರ ಹಸ್ತಲಾಘವ ಮಾಡದೆ ಹೋಗಿರುತ್ತಾರೆ. ಇದಕ್ಕೆ ಪಾಕ್ ತಂಡದ ಮ್ಯಾನೇಜರ್ ಪ್ರತಿಭಟನೆ ದಾಖಲಿಸಿದ್ದಾರೆ. ಇದೇ ಕಾರಣದಿಂದ ಪಾಕಿಸ್ತಾನ ತಂಡದ ಕ್ಯಾಪ್ಟನ್ ಪಂದ್ಯದ ನಂತರದ ಸಮಾರಂಭವನ್ನು ಬಹಿಷ್ಕರಿಸಿದ್ದಾರೆ.

ಹಸ್ತಲಾಘವ ಮಾಡದ ತಮ್ಮ ನಿರ್ಧಾರವನ್ನು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಇದು ಪಹಲ್ಗಾಮ್ ಉಗ್ರರ ದಾಳಿಗೆ ಬಲಿಯಾದವರ ಕುಟುಂಬದ ಜೊತೆ ನಾವಿದ್ದೇವೆ ಎಂಬುದನ್ನು ಸೂಚಿಸುವ ಕ್ರಮವಾಗಿತ್ತು ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೆ, ಕ್ರೀಡೆಯೇ ಬೇರೆ, ಎರಡೂ ದೇಶಗಳ ಸಂಬಂಧವೇ ಬೇರೆಯಾಗಿದೆ. ಸಂಬಂಧ ಹಳಸಿದ ಮೇಲೆ ಪಾಕಿಸ್ತಾನದ ಜೊತೆ ಪಾಕಿಸ್ತಾನದಲ್ಲಿ ಆಡುವುದಿಲ್ಲ. ಮೂರನೇ ದೇಶದಲ್ಲಿ ಆಡಬಹುದು ಎನ್ನುವುದು. ಅಲ್ಲಿ ಆಡಿದ ಮೇಲೆ ಹಸ್ತಲಾಘವ ಮಾಡದೆ ದಾಳಿಗೆ ಸೇಡು ತೀರಿಸಿಕೊಂಡೆವು ಎನ್ನುವುದು ಕ್ರೀಡಾ ಮನೋಭಾವವಲ್ಲ. ಹಾಗಿದ್ದ ಮೇಲೆ ಭಾರತದಲ್ಲಿ ಪಂದ್ಯ ಬಹಿಷ್ಕರಿಸಬೇಕು ಎನ್ನುವ ಕೂಗು ಕೇಳಿ ಬಂದಾಗ ಪಂದ್ಯದಿಂದ ಹಿಂದೆ ಸರಿಯಬಹುದಿತ್ತಲ್ಲವೆ? ಇದು ಮುಂದಿನ ಭಾರತ–ಪಾಕಿಸ್ತಾನ ತಂಡಗಳ ನಡುವಿನ ಪಂದ್ಯಗಳಲ್ಲಿ ಇನ್ನಷ್ಟು ತಾರಕಕ್ಕೇರುವುದರಲ್ಲಿ ಯಾವ ಅನುಮಾನವೂ ಇಲ್ಲ. ಏಕೆಂದರೆ ಭಾರತದಂತೆ ಪಾಕಿಸ್ತಾನ ತಂಡ ಕೂಡ ಸೇಡು ತೀರಿಸಿಕೊಳ್ಳಲು ಕಾಯುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಬಾನು ಮುಷ್ತಾಕ್‌ರನ್ನು ಗೌರವಿಸೋಣ

ಮಾನ್ಯರೆ,



ಈ ಬಾರಿಯ ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರನ್ನು ಒಬ್ಬ ಮುಸ್ಲಿಂ ಮಹಿಳೆ ಅನ್ನುವುದಕ್ಕಿಂತ ಹೆಚ್ಚಾಗಿ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತರೊಬ್ಬರನ್ನು ಸರ್ಕಾರ ಆಯ್ಕೆ ಮಾಡಿರುವುದು ಸಮಂಜಸವಾಗಿದೆ. ಪ್ರಸ್ತುತ ಅವರೇ ದಸರಾ ಉದ್ಘಾಟನೆಗೆ ಅರ್ಹ. ದಸರಾ ನಡೆಯುವುದು ಜನಸಾಮಾನ್ಯರ ತೆರಿಗೆಯ ಹಣದಿಂದಲೇ ಹೊರತು ಯಾವುದೇ ಪಕ್ಷದ ರಾಜಕೀಯ ನಾಯಕರುಗಳ ಸ್ವಂತ ಜೇಬಿನ ಹಣದಿಂದಲ್ಲ. ಹಿಂದು, ಮುಸ್ಲಿಂ, ಕ್ರೈಸ್ತ, ಜೈನ ಇತ್ಯಾದಿ ಧರ್ಮದವರೆಲ್ಲಾ ಸರ್ಕಾರಕ್ಕೆ ತೆರಿಗೆ ಕಟ್ಟುತ್ತಿದ್ದಾರೆ. ಇಂಗ್ಲಿಷ್ ಸಾಮ್ರಾಜ್ಯದವರು ಕೊಡಮಾಡುವ ಈ ಪ್ರಶಸ್ತಿಯು ನಮ್ಮ ಕನ್ನಡತಿಯೊಬ್ಬರು ಪಡೆದುದು ನಾವೆಲ್ಲರೂ ಹೆಮ್ಮೆಪಡಬೇಕಾದ ವಿಷಯವಾಗಿದೆ. ಮುಸ್ಲಿಂ ಮಹಿಳೆ ಎಂಬ ಕಾರಣದಿಂದ ಶುರುವಾದದ್ದು ಕೊನೆಗೆ ಉಚ್ಚ ನ್ಯಾಯಾಲಯದಲ್ಲಿ ತಾರ್ಕಿಕ ಅಂತ್ಯ ಕಂಡಿದೆ. ಇಂದು ಕರ್ನಾಟಕ ಐಟಿ–ಬಿಟಿಯಲ್ಲಿ ದೇಶದ ಎಲ್ಲಾ ರಾಜ್ಯದವರಿಗೆ ದುಡಿಯಲು ಅವಕಾಶ ಕೊಟ್ಟಿದೆ. ಉಳಿಯಲು ನೆಲೆ ನೀಡಿದೆ. ಸಾಧಕರನ್ನು ಧರ್ಮದಿಂದ ಅಳೆಯಲು ಆಗದು. ನಾವು ಸಹೃದಯ ಕನ್ನಡಿಗರು. ಎಲ್ಲಕ್ಕಿಂತ ಹೆಚ್ಚಾಗಿ ಜಾಗತಿಕ ಮಟ್ಟದ ಈ ಪ್ರಶಸ್ತಿಗೆ ನಮಿಸೋಣ, ಮಹಿಳೆಯರನ್ನು ಗೌರವಿಸೋಣ.

–ಸೋಮಶೇಖರ್, ಇಲವಾಲ.

ಬನ್ನೂರು ಕೆ. ರಾಜು ಚಿಕಿತ್ಸೆಗೆ ನೆರವಾಗಿ

ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಆಗಾಗ ಬನ್ನೂರು ಕೆ. ರಾಜು ಅವರ ಅಂಕಣದಲ್ಲಿ ಕನ್ನಡ ಚಿತ್ರರಂಗದ ಹಳೆಯ ತಲೆಮಾರಿನ ನಟ, ನಿರ್ದೇಶಕರ ಬಗ್ಗೆ ಅನೇಕ ವಿಷಯಗಳನ್ನು ಓದಿ ತಿಳಿದುಕೊಳ್ಳುತ್ತಿದ್ದೆವು. ಅವರ ಬರವಣಿಗೆಯಲ್ಲಿ ಆಕರ್ಷಣೆ ಸೆಳೆತ ಇತ್ತು. ತುಂಬಾ ಸ್ವಾಭಿಮಾನಿಗಳಾದ ಅವರು ಅವರ ಅನಾರೋಗ್ಯದ ವಿಷಯ ಬಹಿರಂಗಪಡಿಸಿಯೇ ಇಲ್ಲ. ಮೈಸೂರು ಜಿಲ್ಲಾಡಳಿತ, ಸಂಘ ಸಂಸ್ಥೆಗಳು ಅವರ ಚಿಕಿತ್ಸೆಗೆ ನೆರವಾಗಲು ಮನವಿ. ಆರೋಗ್ಯವಂತರಾಗಿ ತಮ್ಮ ಬರವಣಿಗೆ ಮುಂದುವರೆಸಲು ಕೋರುತ್ತೇವೆ.

– ಜೆ.ಪಿ. ರಾಜೇಶ್ ಮತ್ತು ಸ್ನೇಹಿತರು, ವಿ.ವಿ. ಪುರಂ, ಮೈಸೂರು.

ಮಹಾಕವಿಯೂ ಶ್ರೇಷ್ಠ ಗಮಕಿಯೂ!

ಮಾನ್ಯರೆ,

'ಭಾರತವೆಂಬ ಕೃಷ್ಣರಾಯರ ದಿವ್ಯಚೇತನ' (ಡಾ. ರಮಾ ವಿ. ಬೆಣ್ಣೂರರ 'ನಾದಲಹರಿ', ಆ. 31) ಗಮಕಿವರ್ಯ ಕೃಷ್ಣಗಿರಿ ಕೃಷ್ಣರಾಯರ ಬಗೆಗೆ ಮಹಾಕವಿ ಕುವೆಂಪು ಒಂದು ಕವನವನ್ನೇ ಕಟ್ಟಿದ್ದಾರೆ. ಅದು ಹೀಗೆ ಮೊದಲಾಗುತ್ತದೆ:

ಹಾಡಿದನು ಗಮಕಿ;
ನಾಡು ನಲಿದುದು ರಸದ ಕಡಲಿನಲಿ ಧುಮುಕಿ!
(ಹೀಗೆ ಮುಕ್ತಾಯಗೊಳ್ಳುತ್ತದೆ, ಕವನ)
ತೇಲಿಬರೆ ಕವಿ ಕುಮಾರ ವ್ಯಾಸನಾವೇಶವಾಣಿ,
ರೋಮಾಂಚನದಿ ವಿಕಂಪಿಸಿತು ಸಹ್ಯಾದ್ರಿ ಶ್ರೇಣಿ!
ತಂದೆಯ ಹಾದಿಯಲ್ಲೇ ಮುನ್ನಡೆದಿದ್ದಾರೆ, ಕೃ. ರಾಮಚಂದ್ರ !

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ವಿಶ್ವಕರ್ಮ ದಾಸಶ್ರೇಷ್ಠ ಮೋಹನದಾಸರು

ಸೆಪ್ಟೆಂಬರ್ 15ಕ್ಕೆ ಆಧುನಿಕ ಜಗತ್ತು ಕಂಡ ಶ್ರೇಷ್ಠ ಇಂಜಿನಿಯರ್ ವಿಶ್ವೇಶ್ವರಯ್ಯನವರ ಹುಟ್ಟಿದ ದಿನವನ್ನು ಇಂಜಿನಿಯರ್ಸ್ ಡೇ ಎಂದು ಆಚರಿಸಿದ ಎರಡನೇ ದಿನಕ್ಕೇ ಜಗತ್ತಿನ ಮೊದಲ ಇಂಜಿನಿಯರ್ ಎನಿಸಿದ ವಿಶ್ವಕರ್ಮನ ಜಯಂತಿ ಬರುವುದು ಕಾಕತಾಳೀಯವಷ್ಟೇ!

ದೇವಶಿಲ್ಪಿ ವಿಶ್ವಕರ್ಮನ ವಂಶಜರಿಂದ ಭಾರತದ ಕೀರ್ತಿಪತಾಕೆ ವಿಶ್ವದೆಲ್ಲೆಡೆ ಹಬ್ಬಿರುವುದು ಎಲ್ಲರಿಗೂ ತಿಳಿದೇ ಇದೆ. ಕರ್ನಾಟಕವೂ ಸೇರಿದಂತೆ ಭಾರತದ ಅತ್ಯದ್ಭುತ ಶಿಲ್ಪಕಲೆ ವಿಶ್ವಕರ್ಮರ ಕೊಡುಗೆ. ಸರ್ಕಾರವೇ ವಿಶ್ವಕರ್ಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿ ಅವನ ಕಲಾಕುಶಲತೆಯನ್ನು ಹೆಮ್ಮೆಯಿಂದ, ಭಕ್ತಿಯಿಂದ ಸಂಭ್ರಮಿಸಿದೆ.

ವಿಶ್ವಕರ್ಮರೆಂದರೆ, ಶಿಲ್ಪಿಗಳು, ಅಕ್ಕಸಾಲಿಗರು, ಮರದ ಕೆತ್ತನೆ ಕೆಲಸ ಮಾಡುವವರು, ಲೋಹದ ಕೈಂಕರ್ಯ ಕೈಗೊಳ್ಳುವವರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಈಗಿನ ಆಧುನಿಕ ಜಗತ್ತಿನಲ್ಲಿ ವಂಶಪಾರಂಪರ್ಯವಾಗಿ ಬಂದ ಕುಲಕಸುಬುಗಳನ್ನು ಸಾಕಷ್ಟು ಜನ ಮುಂದುವರೆಸಿಕೊಂಡು ಹೋಗುತ್ತಿದ್ದಾರಾದರೂ, ಬಹಳಷ್ಟು ಜನ ಹಲವು ಕ್ಷೇತ್ರಗಳಿಗೆ ಕಾಲಿಟ್ಟು ಯಶಸ್ವಿಯಾಗಿ ಮುಂದುವರೆಯುತ್ತಿದ್ದಾರೆ. ಇತ್ತೀಚೆಗೆ ಮಿಸ್ ಇಂಡಿಯಾ ಯೂನಿವರ್ಸ್ ಸ್ಪರ್ಧೆಯಲ್ಲಿ ಗೆದ್ದ ಮಣಿಕಾ ವಿಶ್ವಕರ್ಮ ಇದಕ್ಕೆ ಜ್ವಲಂತ ಉದಾಹರಣೆ.

ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮುಂದುವರೆಯುತ್ತಿರುವ ವಿಶ್ವಕರ್ಮರಲ್ಲಿ ಹರಿದಾಸರೂ ಆಗಿಹೋಗಿದ್ದಾರೆ ಎಂಬ ಸಂಗತಿ ಬಹುಶಃ ಬಹಳಷ್ಟು ಜನರಿಗೆ ತಿಳಿದಿರಲಾರದು. ಹೌದು, 18ನೇ ಶತಮಾನದ ಆದಿಯಲ್ಲಿ ಜನಿಸಿದ ಮೋಹನದಾಸರು ಪ್ರಪ್ರಥಮ ವಿಶ್ವಕರ್ಮ ಹರಿದಾಸರು ಎಂದು ಸಂಶೋಧನೆಗಳಿಂದ ಧೃಡಪಟ್ಟಿದೆ. ವಿಜಯದಾಸರ ಮಾನಸ ಪುತ್ರರಾಗಿದ್ದ ಮೋಹನದಾಸರು ಹರಿದಾಸ ಸಾಹಿತ್ಯಕ್ಕೆ ತಮ್ಮದೇ ಆದ ಬಹುಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಭೀಮಪ್ಪ ನಾಯಕರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿಯವರು. ತಮ್ಮ ಅಕ್ಕಸಾಲಿಗನ ವೃತ್ತಿಯಿಂದ ಸಾಕಷ್ಟು ಸಂಪತ್ತು ಮಾತ್ರವಲ್ಲದೆ ಕೀರ್ತಿಯನ್ನೂ ಗಳಿಸಿದ್ದವರು. ಅವರ ಹೆಂಡತಿಯ ಹೆಸರು ಎಲ್ಲಿಯೂ ಉಲ್ಲೇಖವಾಗಿಲ್ಲವಾದರೂ, ಆಕೆ ಸದ್ಗೃಹಿಣಿಯಾಗಿದ್ದರು ಮತ್ತು ಪೂಜೆ ವ್ರತ ನೇಮಗಳಲ್ಲಿ ಅಪಾರ ನಿಷ್ಠೆ ಹೊಂದಿದ್ದರು ಎಂದು ತಿಳಿದು ಬರುತ್ತದೆ. ಸುಖವಾಗಿದ್ದ ಅದೇ ಸಮಯದಲ್ಲಿ ಆಕೆ ಬಸುರಿಯಾಗುತ್ತಾರೆ. ಆದರೆ ದುರದೃಷ್ಟವಶಾತ್ ಭೀಮಣ್ಣ ನಾಯಕ ಅಕಾಲಮೃತ್ಯುವಿಗೆ ಈಡಾಗುತ್ತಾರೆ. ಗರ್ಭಿಣಿಯಾಗಿದ್ದ ಭೀಮಣ್ಣ ನಾಯಕರ ಹೆಂಡತಿ ಆನೆಗೊಂದಿಯ ತಮ್ಮ ಮನೆಯಲ್ಲಿಯೇ ಪ್ರಸವಿಸಿದರೆ ಎಲ್ಲಿ ಆಸ್ತಿ ಸಂಪತ್ತುಗಳು ಆ ಮಗುವಿನ ಪಾಲಾಗುತ್ತದೋ ಎಂದು ಹೆದರಿ, ಅಸೂಯೆಯಿಂದ ಭೀಮಣ್ಣ ನಾಯಕರ ದಾಯಾದಿಗಳು ಮತ್ತು ಬಂಧುಗಳು ಆಕೆಯನ್ನು ನಿಷ್ಕಾರಣವಾಗಿ ದೂರಿ ಮನೆಯಿಂದ ಆಚೆ ಹಾಕಿಬಿಡುತ್ತಾರೆ. ದುಃಖಿತಳಾದ ಆಕೆ, ತಾಯಿಯ ಮನೆಗೆ ಹಿಂತಿರುಗುತ್ತಾರೆ. ಅಲ್ಲಿಯೇ ಗಂಡು ಮಗುವಿಗೆ ತಾಯಿಯಾಗುತ್ತಾರೆ.

ಇಲ್ಲಿಯೂ ಆಕೆಯ ಅದೃಷ್ಟ ಕೈಕೊಡುತ್ತದೆ. ಮಗುವಿಗೆ ಸುಮಾರು ಮೂರು, ತಿಂಗಳುಗಳಾಗಿದ್ದಾಗ ಆಕೆಯ ಅಮ್ಮ ಇಹಲೋಕ ತ್ಯಜಿಸಿಬಿಡುತ್ತಾರೆ. ನಂತರ ಆಕೆ ತವರು ಮನೆಯಿಂದಲೂ ಹೊರಬೀಳಬೇಕಾದ ಪ್ರಸಂಗ ಒದಗಿಬಂದು, ನಿಸ್ಸಹಾಯಕರಾಗಿಬಿಡುತ್ತಾರೆ. ನಂತರ ಹಂಪೆಗೆ ಬರುವ ಆಕೆ ಹೇಗೋ ಜೀವನಯಾಪನೆ ಮಾಡುತ್ತಾ ಮಗುವನ್ನು ಸಾಕುತ್ತಿರುತ್ತಾರೆ. ಸರಿಯಾದ ಆರೈಕೆ ಇಲ್ಲದೆ ಮಗು ಸೊರಗಿ, ಚರ್ಮರೋಗಕ್ಕೆ ತುತ್ತಾಗುತ್ತದೆ. ತೀವ್ರತರವಾಗಿ ಬಾಧಿತವಾದಾಗ, ಊಟಕ್ಕೆ ಕೂರುತ್ತಿದ್ದ ತಾಯಿ–ಮಗುವನ್ನು ಎಬ್ಬಿಸುವಷ್ಟು ಕ್ರೌರ್ಯವನ್ನು ಜನ ತೋರತೊಡಗುತ್ತಾರೆ.

ಇದೇ ಸಮಯದಲ್ಲಿ, ವಿಜಯದಾಸರು ಹಂಪಿಗೆ ಬರುತ್ತಾರೆ. ಪುರಂದರದಾಸರ ನೇರಶಿಷ್ಯರಾದ ಅವರು ಪುರಂದರದಾಸರ ಹೆಸರಿನಲ್ಲಿ ಪ್ರತಿವರ್ಷದಂತೆ ಆರಾಧನೆ ನಡೆಸಿ, ಜ್ಞಾನಸತ್ರ ಮತ್ತು ಅನ್ನಸತ್ರವನ್ನು ನಡೆಸುತ್ತಿರುತ್ತಾರೆ. ಅಲ್ಲಿಯೂ ಅವಮಾನಿತಳಾದ ತಾಯಿ ಮಗುವಿನೊಂದಿಗೆ ತುಂಗಭದ್ರೆಯ ಮಡಿಲು ಸೇರಲು ನಿರ್ಧರಿಸಿ, ಇನ್ನೇನು ನದಿಗೆ ಹಾರಬೇಕೆಂದಿದ್ದಾಗ, ಅಲ್ಲಿಯೇ ಇದ್ದ ವಿಜಯದಾಸರು ಆಕೆಯನ್ನು ತಡೆಯುತ್ತಾರೆ. ಅವರ ಅಂತಃಕರಣಕ್ಕೆ ಶರಣಾದ ಆಕೆ ತನ್ನ ದುಃಖಭರಿತ ಕತೆಯನ್ನು ತೋಡಿಕೊಳ್ಳುತ್ತಾರೆ. ಮಾತೃಹೃದಯಿಯಾದ ವಿಜಯದಾಸರು, ಕೊಂಚವೂ ಯೋಚಿಸದೆ, ಮೊದಲು ಮಗುವನ್ನು ತಾಯಿಯ ಕೈಯ್ಯಿಂದ ತೆಗೆದುಕೊಂಡು ಸ್ನಾನ ಮಾಡಿಸುತ್ತಾರೆ. ನಂತರ ಆಕೆಗೆ, ತಾಯೀ ನೀನು ನನ್ನ ತಂಗಿಯಿದ್ದಂತೆ. ಇನ್ನು ಮೇಲೆ ನಿನಗೆ ಯಾವುದೇ ಚಿಂತೆ ಬೇಡ. ನನ್ನ ಮನೆಯಲ್ಲಿಯೇ ಇನ್ನು ನಿನ್ನ ವಾಸ. ಎಂದು ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಪುತ್ರ ಶೇಷಾಚಲನ ಅಕಾಲಮೃತ್ಯುವಿನಿಂದ ನೊಂದಿದ್ದ ವಿಜಯದಾಸರು ಮತ್ತು ಅವರ ಪತ್ನಿ ಅರಳಮ್ಮನವರು ತಾಯಿ ಮಗುವನ್ನು ಸ್ವಾಗತಿಸಿ ಸಂತೈಸುತ್ತಾರೆ.

ನಂತರದ ದಿನಗಳಲ್ಲಿ, ಮಗುವನ್ನು ತಮ್ಮ ಮಾನಸ ಪುತ್ರನೆಂದೇ ಭಾವಿಸಿ ಸಲಹುತ್ತಾರೆ. ದೇವರಿಗೆ ಅಭಿಷೇಕ ಮಾಡಿದ ಹಾಲನ್ನು ದಿನವೂ ಮಗುವಿಗೆ ಕೊಡುತ್ತಾ ಬರುತ್ತಾರೆ. ಮಗುವಿನ ಚರ್ಮವ್ಯಾಧಿ ವಾಸಿಯಾದುದಲ್ಲದೆ, ಮಗು ದಷ್ಟಪುಷ್ಟವಾಗಿ ಮನೋಹರವಾಗಿ ಬೆಳೆಯತೊಡಗುತ್ತದೆ. ಅದರ ಸುಂದರ ರೂಪ ನೋಡಿ, ವಿಜಯದಾಸರೇ ಮೋಹನ ಎಂದು ನಾಮಕರಣ ಮಾಡುತ್ತಾರೆ.

ಮಗು ದಿನೇ ದಿನೆ ಪೂರ್ಣಚಂದ್ರನಂತೆ ಬೆಳೆಯತೊಡಗುತ್ತದೆ. ಅದರ ಅಮ್ಮನೂ ಅಲ್ಪಕಾಲದಲ್ಲಿಯೇ ತೀರಿಹೋದಮೇಲೆ ಮಗುವಿನ ಪೂರ್ಣಜವಾಬ್ದಾರಿ ವಿಜಯದಾಸರದ್ದೇ ಆಗುತ್ತದೆ. ಸಕಾಲದಲ್ಲಿ ಮಗುವಿಗೆ ವಿದ್ಯಾಭ್ಯಾಸ ಆರಂಭಿಸಿ, ಎಲ್ಲ ವೇದಶಾಸ್ತ್ರಗಳನ್ನು ಹೇಳಿಕೊಡುತ್ತಾರೆ. 8ನೇ ವಯಸ್ಸಿಗೆ ಉಡುಪಿಯ ಮಠದಲ್ಲಿಯೇ ಉಪನಯನವನ್ನೂ ಮಾಡಿಸುತ್ತಾರೆ. ಸೂಕ್ತಕಾಲದಲ್ಲಿ, ಶಿರಗುಪ್ಪಾ ಸಮೀಪದ ಬಲಕುಂದಿ ಗ್ರಾಮದ ಶ್ಯಾನುಭೋಗರ ಮಗಳನ್ನು ಮದುವೆ ಮಾಡಿಸುತ್ತಾರೆ. ವೆಂಕೋಬನೆಂಬ ಇವರ ಮಗ ಕೂಡ, ತಂದೆ ಮೋಹನ ವಿಠ್ಠಲ ಎಂಬ ಅಂಕಿತ ಹೊಂದಿ ಹರಿದಾಸರಾಗಿದ್ದರು. ಒಮ್ಮೆ ವಿಜಯದಾಸರು ಮೋಹನನ ಜೊತೆ ಪ್ರವಾಸ ಹೋದಾಗ, ಅವರಿಗೆ ಅಶರೀರವಾಣಿಯೊಂದು, ಇನ್ನೂ ಏಕೆ ಮೋಹನನಿಗೆ ಅಂಕಿತ ನೀಡಿಲ್ಲ ಎಂದು ಕೇಳಿದಂತಾಗುತ್ತದೆ. ಆ ಕ್ಷಣವೇ ಮೋಹನನನ್ನು ಕರೆದು, ಮೋಹನ ವಿಠ್ಠಲ ಎಂಬ ಅಂಕಿತವನ್ನು ನೀಡಿ, ಹರಿದಾಸರಾಗಿ ಹರಿಸೇವೆ ಮಾಡುವಂತೆ ಉಪದೇಶ ಮಾಡುತ್ತಾರೆ.

ಚಿನಿವಾರ ವೃತ್ತಿಯನ್ನೇ ಕೈಗೊಂಡಿದ್ದ ಮೋಹನರು, ಮೋಹನದಾಸರಾದ ಮೇಲೆ, ಸುತ್ತಿಗೆ–ಅರಗಳನ್ನು ಬಿಟ್ಟು ತಾಳ–ತಂಬೂರಿಗಳನ್ನು ಹಿಡಿದು ಹರಿದಾಸರಾಗುತ್ತಾರೆ. ಹರಿನಾಮಸ್ಮರಣೆಯಲ್ಲಿಯೇ ಕಳೆದು ಹೋದ ಮೋಹನದಾಸರು 52 ಕೀರ್ತನೆಗಳು, 4 ಸಂಪ್ರದಾಯದ ಹಾಡುಗಳು, 3 ಸುಳಾದಿಗಳು, 2 ಉಗಾಭೋಗಗಳು ಮತ್ತು 217 ನುಡಿಗಳ ಕೋಲು ಹಾಡುಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಇದಲ್ಲದೆ, ಸಂಸ್ಕೃತದಲ್ಲಿ, ಶ್ರೀ ಗಢಕಾಳಿಕ ದಂಡಕಂ ಎನ್ನುವ ದೇವೀ ಸ್ತೋತ್ರವನ್ನು ರಚಿಸಿದ್ದಾರೆ.

ವಿಶ್ವಕರ್ಮರಿಗೆ ಕಾಳಿ ಆರಾಧ್ಯ ದೇವತೆ. ಮಧ್ಯ ಪ್ರದೇಶದ ಉಜ್ಜಯಿನಿಯಲ್ಲಿ, ಶ್ರೀ ಮಹಾಕಾಲೇಶ್ವರ



ಜಾಗೃತ ಜ್ಯೋತಿರ್ಲಿಂಗ ಇದೆಯಷ್ಟೇ.ಇದೇ ಉಜ್ಜಯಿನಿಯ ಕೋಟೆಯ ಮೇಲೆ, ದೇವಿಯ 52 ಶಕ್ತಿಪೀಠಗಳಲ್ಲಿ ಒಂದೆನಿಸಿರುವ ಶ್ರೀ ಗಢಕಾಳಿಕಾ ದೇವಿಯ ದೇವಸ್ಥಾನವಿದೆ. ಇಲ್ಲಿಯೇ ಸತೀದೇವಿಯ ಮೊಣಕೈ ಕಳಚಿ ಬಿದ್ದಿತ್ತು ಎಂದು ಹೇಳಲಾಗುತ್ತದೆ. ಕಾಳಿದಾಸನಿಗೆ ದರ್ಶನವಿತ್ತಿದ್ದೂ ಇದೇ ಗಢಕಾಳಿಕಾ ದೇವಿ ಎಂಬ ಪ್ರತೀತಿಯಿದೆ. ಇದೇ ಗಢಕಾಳಿಕಾ ದೇವಿಯ ಕುರಿತೇ, ಮೋಹನದಾಸರು ಸಂಸ್ಕೃತದಲ್ಲಿ ಸ್ತೋತ್ರ ರಚಿಸಿರುವುದು.

ಮೋಹನದಾಸರು ವಿಶ್ವಕರ್ಮ ಎನ್ನುವುದಕ್ಕೆ ಅವರ ರಚನೆಗಳಲ್ಲಿಯೇ ಬಂದಿರುವ ಸಾಕಷ್ಟು ಉಲ್ಲೇಖಗಳನ್ನು ವಿದ್ವಾಂಸರು ಗಮನಿಸಿ ಸಾಬೀತು ಮಾಡಿದ್ದಾರೆ. ಇವರಲ್ಲಿ ಪ್ರಮುಖರೆಂದರೆ, ಡಾ.ಶ್ರೀಮತಿ ರಾಜಶ್ರೀ ಕಲ್ಲೂರಕರ್, ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಪ್ರೊ.ವಸಂತ ಕುಷ್ಟಗಿ, ಡಾ.ಸ್ವಾಮಿರಾವ್ ಕುಲಕರ್ಣಿ, ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಮತ್ತು ಎನ್.ಹನುಮಗೌಡ. ಒಂದೆರಡನ್ನು ಉದಾಹರಿಸುವುದಾದರೆ,

**ಜಗೆಯಸುತನು ತಾನು ಜಗಳಕೆ ಬಹನೆಂದು
ಕರೆಸಿದ ವಿಶ್ವಕರ್ಮನ್ನ ಕೋಲೆ
ಕರೆಸಿದ ವಿಶ್ವಕರ್ಮನ್ನ ದ್ವಾರಕಾ
ಪುರ ನಿರ್ಮಿಸೆಂದಾಕ್ಷಣ ಪೇಳಿದಾ. ಕೋಲೆ
ನಿನ್ನ ಪಾದವ ನಂಬಿ ಅನ್ಯರಾಶ್ರಯ ಏತಕೆ
ಎಂಬ ಕೀರ್ತನೆಯಲ್ಲಿ, ಕಂಚು ಕಟ್ಟಳೆ ಮೇಣಕಲ್ಲುಗಳ
ಕಾಸಿಗೆ ಪಂಚೇರು ಮಾಡಿ ನಡೆದೆ ಬಿಡದೆ**

ಎನ್ನುತ್ತಾರೆ.

ಅದೇ ಕೀರ್ತನೆಯ ಕೊನೆಯ ಸಾಲಿನಲ್ಲಿ,

**ಎನ್ನೊಬ್ಬನ ಪಾಲಿಸಿದ್ದು ಬಲುಗುರುತಲ್ಲ
ಚಿನ್ನವರದನ ಸಂತತಿಯೆಲ್ಲ ಇನ್ನು
ನಿನ್ನ ಪಾಲಿಗೆ ಬಿಟ್ಟಿದ್ದಲ್ಲ ವಾಕು
ಅನ್ಯಥಾ ಮಾಳ್ಪುದು ಸಲ್ಲ
ಮೋಹನವಿಠ್ಠಲ ಇದನು ಬಲ್ಲ ಅಯ್ಯಾ**

ಎನ್ನುತ್ತಾ, ವಿಜಯದಾಸರ ಔದಾರ್ಯವನ್ನು ಹೇಳುತ್ತಾ ತನ್ನ ಕುಲಮೂಲವನ್ನು ಹೇಳಿಕೊಳ್ಳುತ್ತಾರೆ.

ಸಾಯಲಿದ್ದ ತನ್ನನ್ನು ಮತ್ತು ತನ್ನ ಅಮ್ಮನನ್ನು ಪಾರುಮಾಡಿ ಜೀವನ ದಯಪಾಲಿಸಿದ ವಿಜಯದಾಸರ ಬಗ್ಗೆ ಮೋಹನದಾಸರಿಗೆ ಅತೀವ ಪ್ರೀತಿ–ಭಕ್ತಿ–ಗೌರವ. ಅವರ ರಚನೆಗಳಲ್ಲಿ ವಿಜಯದಾಸರೆಡೆಗಿನ ಅದಮ್ಯ ಪ್ರೇಮ ಕಾಣುತ್ತದೆ.

**ವಿ ಯೆನಲು ವಿಮಲತೆಯು
ಜ ಎಂದವಗೆ ಜಯವು
ಯ ಎನಲು ಯಾಗಫಲವು
ರಾ ಎನಲು ರಾಜ್ಯವು
ಯ ಎನಲು ಯಮಭಟರು ನೋಯಿಸರು
ಪರಮ ಹರುಷವಾಯಿತು ವಿಜಯರಾಯ
ಗುರುಗಳಂಘ್ರಿಯನೆ ಕಂಡು
ತಾಯಿಯನ್ನು ಕಾಣದೆ ಕಾನನದಲ್ಲಿ ಚಿಂತಿಸಲು
ವತ್ಸ ತಾನು ಕೂಗಲು ಕಾಮಧೇನು ಒದಗಿದಂತೆ
ವಿಜಯದಾಸ ಧೀರರೆಂಬೋ
ಅಂಬುಜ ಮಿತ್ರನುದಯಿಸಲು
ಭಜಕರ ಜ್ಞಾನತಿಮಿರ
ಭರದಿ ಬಿಟ್ಟೋಡಿತು**

ಎಂದು ಪರವಶರಾಗಿ ಹಾಡುತ್ತಾರೆ.

ಅಲ್ಲದೆ, ಮತ್ತೊಂದು ಸ್ವಾರಸ್ಯಕರ ಪವಾಡ ಸದೃಶ ಘಟನೆ ಮೋಹನದಾಸರ ಜೀವನದಲ್ಲಿ ಆಗಿತ್ತು ಎಂಬ ಉಲ್ಲೇಖವಿದೆ. ಒಮ್ಮೆ ವಿಜಯದಾಸರು ತೀರ್ಥಯಾತ್ರೆಗೆ ಹೋಗುವಾಗ, ಮೋಹನದಾಸರ ಪತ್ನಿಯನ್ನು ಕರೆದು, ಅಶುಭ ಘಟಿಸಲಿದೆ, ನನ್ನ ನೆನೆ ಆಗ ಎಂದು ಹೇಳಿ ಹೊರಟುಬಿಟ್ಟರಂತೆ. ಅವರು ಹೇಳಿದಂತೆ ಇದ್ದಕ್ಕಿದ್ದಂತೆ ಮೋಹನದಾಸರು ನಿಧನರಾಗಿ ಬಿಡುತ್ತಾರೆ. ಆದರೆ ವಿಜಯದಾಸರ ಮಾತನ್ನು ನೆನೆದ ಆ ಸಾಧ್ವಿ, ಕಳೇಬರವನ್ನು ಒಯ್ಯಲು ಬಿಡದೆ, ವಿಜಯದಾಸರನ್ನು ನೆನೆದು ಪ್ರಾರ್ಥಿಸಿದಳಂತೆ. ಸ್ವಲ್ಪ ಕಾಲದ ನಂತರ, ಮೋಹನದಾಸರು ಏನು ಆಗಿಯೇ ಇಲ್ಲವೆಂಬಂತೆ ನಿದ್ರೆಯಿಂದೆದ್ದಂತೆ ಎದ್ದು ಕೂರುತ್ತಾರೆ. ವಿಜಯದಾಸರೇ ಯಮಪುರಿಗೆ ಹೋಗಿ ಮೋಹನದಾಸರನ್ನು ಕರೆತಂದರಂತೆ! ಆ ಘಟನೆಯನ್ನು ನೆನೆದು, ಅತೀವ ಭಕ್ತಿಯಿಂದ ಮೋಹನ ದಾಸರು

**ತಂದೆ ವಿಜಯರಾಯ ಈ ವೇಳೇಗೆ ಬಂದ್ಯೋ
ಹಿಂದೇಸು ಜನ್ಮವೋ ಮುಂದೇಸು ಜನ್ಮವೋ
ಒಂದೂ ತಿಳಿಯದೆಂದಿಗೂ**

ಎಂದು ಹಾಡಿ ಹೊಗಳುತ್ತಾರೆ. ವಿಜಯದಾಸರು ತಮ್ಮ ಸ್ಥಳವನ್ನು ಚೀಕಲಪರಿವಿಯಿಂದ ಚಿಪ್ಪಗಿರಿಗೆ ಬದಲಾಯಿಸಿದಾಗ ಅವರ ಹಿಂದೆಯೇ ಹೊರಟ ಮೋಹನದಾಸರು, ವಿಜಯದಾಸರ ಕೊನೆಯುಸಿರಿರುವವರೆಗೂ ಅವರ ಸೇವೆ ಮಾಡುತ್ತಾರೆ. ಅವರು ವೈಕುಂಠಯಾತ್ರೆ ಮಾಡಿದ ಮೇಲೆ, ಅವರ ಸ್ಮಾರಕವನ್ನೂ ಚಿಪ್ಪಗಿರಿಯಲ್ಲಿಯೇ ಸ್ಥಾಪಿಸುತ್ತಾರೆ. ವಿಜಯದಾಸರ ಕಟ್ಟೆ ಎಂದೇ ಅದು ಪ್ರಸಿದ್ಧವಾಗಿದೆ.

ನಂತರವೂ ಬಹುಕಾಲ ಹರಿನಾಮಸ್ಮರಣೆ ಮಾಡಿದ ಮಾಂಡವ್ಯ ಮುನಿಗಳ ಅಂಶವೆಂದು ನಂಬಲಾಗುವ ಮೋಹನದಾಸರಿಗೆ ಮಧ್ವವರದ ವಿಠಲ ಮತ್ತು ವಿರಜಿ ಪ್ರಾಣೇಶ ವಿಠಲರು ಶಿಷ್ಯರಾಗಿದ್ದರು.

ಮೋಹನದಾಸರು ತಮ್ಮ 85ನೇ ವಯಸ್ಸಿನಲ್ಲಿ 1815ರ ಜ್ಯೇಷ್ಠ ಶುದ್ಧ ಪಂಚಮಿಯಂದು ಚಿಪ್ಪಗಿರಿಯಲ್ಲಿಯೇ ದೇಹತ್ಯಾಗ ಮಾಡಿದರು. ಮೋಹನದಾಸರ ನೆನಪಿಗಾಗಿ, ವಿಜಯದಾಸರರ ಕಟ್ಟೆಯ ಪಕ್ಕದಲ್ಲಿಯೇ ಕಟ್ಟೆಯನ್ನು ಕಟ್ಟಿದ್ದಾರೆ, ಅದು ಮೋಹನದಾಸರ ಕಟ್ಟೆ ಎಂದೇ ಪ್ರಸಿದ್ಧವಾಗಿದೆ.

ಚಿಪ್ಪಗಿರಿಯಲ್ಲಿಯೇ ಮೋಹನದಾಸರ ಆರಾಧನಾ ಮಹೋತ್ಸವ ಜೂನ್‌ನಲ್ಲಿ ನಡೆಯುತ್ತದೆ.

ಕನಕದಾಸರ ಹಾಗೆ ಬ್ರಾಹ್ಮಣೇತರ ಹರಿದಾಸರಾಗಿದ್ದ ಮೋಹನ ದಾಸರಿಗೆ, ವಿಜಯದಾಸರು ಗುರುವಾಗಿ ದೊರಕಿದ್ದು ಅವರು ಹರಿದಾಸರಾಗಲು ಮೂಲಪ್ರೇರಣೆಯಾಯಿತು.

ವಿಶ್ವಕರ್ಮ ಜಯಂತಿಯ ಈ ಸಂದರ್ಭದಲ್ಲಿ ವಿಶ್ವಕರ್ಮ ಹರಿದಾಸರೊಬ್ಬರ ಬಗ್ಗೆ ತಿಳಿದದ್ದು ಸಕಾಲಿಕ ಎಂದೇ ನನ್ನ ಅನಿಸಿಕೆ.

ವಿಷ್ಣುವರ್ಧನ್ ಮೇರು ವ್ಯಕ್ತಿತ್ವ, ಭಾವಜೀವಿ

ರೀಲ್‌ನ ಬದುಕಿಗಿಂತ ರಿಯಲ್ ಬದುಕು ಶ್ರೇಷ್ಠ. ನಟನೆ ಮಾಡುವುದು ಸುಲಭ ಅದೆ ನಿಟ್ಟಿನಲ್ಲಿ ಬದುಕುವುದು ಕಷ್ಟ, ಈ ಎರಡು ದೃಷ್ಟಿಯಿಂದ ವಿಷ್ಣುವರ್ಧನ್ ಅಂದರೆ ಸಂಪತ್‌ಕುಮಾರ್ ಅವರ ನಟನೆ ನೆರಳು ನಮ್ಮನ್ನು ಸದಾ ಕಾಡುವುದು ವ್ಯಕ್ತಿ ಹಾಗೂ ಅವರ ಉದಾರತೆಯ ನೆಲೆಯಲ್ಲಿ ಬದುಕಿ ಮರೆಯಾದ ವ್ಯಕ್ತಿತ್ವದಿಂದ. ಈ ನೆವದಿಂದ ನನ್ನ ಬರಹದಲ್ಲಿ ಸೆರೆಯಾದ ಕೆಲವು ಮಾತುಗಳನ್ನು ಇಲ್ಲಿ ಮೂಡಿಸುವ ಪ್ರಯತ್ನ ಮಾಡಿದ್ದೇನೆ.

ಕನ್ನಡ ಚಲನಚಿತ್ರರಂಗದ ಮಹಾನ್ ನಟರಲ್ಲಿ ಒಬ್ಬರಾದ ಡಾ.ವಿಷ್ಣುವರ್ಧನ್ ಹುಟ್ಟಿದ್ದು 18 ಸೆಪ್ಟೆಂಬರ್ 1950 ಅಭಿಮಾನಿಗಳ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಅವರ ಮೂಲ ಹೆಸರು ಸಂಪತ್ ಕುಮಾರ್... 1972ರಲ್ಲಿ ಪುಟ್ಟಣ್ಣ ಕಣಗಾಲ್ ನಿರ್ದೇಶನದ ನಾಗರಹಾವು ಚಿತ್ರದ ಮೂಲಕ ಸಿನಿರಂಗ ಪ್ರವೇಶಿಸಿ, 220ಕ್ಕೂ ಹೆಚ್ಚು ಚಿತ್ರಗಳಲ್ಲಿ ತಮ್ಮದೇ ಆದ ವಿಶಿಷ್ಟ ಅಭಿನಯ ಶೈಲಿಯನ್ನು ತೋರಿದರು.

ಸಾಹಸ ದೃಶ್ಯಗಳಲ್ಲಿ ತೋರಿದ ನೈಪುಣ್ಯ ಮತ್ತು ಪ್ರಭಾವಿ ಸಂಭಾಷಣಾ ಶೈಲಿ ಅವರಿಗೆ ಸಾಹಸ ಸಿಂಹ ಎಂಬ ಬಿರುದನ್ನು ತಂದಿತು. 2025ನೇ ಸಾಲಿನ 'ಕರ್ನಾಟಕ ರತ್ನ' ದೊರೆತದ್ದು ಹೃದಯವಂತ ವ್ಯಕ್ತಿತ್ವಕ್ಕೆ ದಕ್ಕಿದ ಪ್ರಶಸ್ತಿ. ವಿಷ್ಣುವರ್ಧನ್ ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಸಿನಿಮಾಗಳಲ್ಲಿಯೂ ನಟಿಸಿ ಜನಪ್ರಿಯತೆ ಗಳಿಸಿದರು. ಅವರ ಪತ್ನಿ ನಟಿ ಭಾರತೀ ವಿಷ್ಣುವರ್ಧನ್. ಸಮಾಜ ಸೇವೆಯಲ್ಲಿಯೂ ಸದಾ ಮುಂಚೂಣಿಯಲ್ಲಿದ್ದರು. ಅನೇಕ ರಾಜ್ಯ ಪ್ರಶಸ್ತಿಗಳು, ಫಿಲ್ಮ್‌ಫೇರ್ ಪ್ರಶಸ್ತಿಗಳು ಹಾಗೂ ಮರಣೋತ್ತರವಾಗಿ 'ಪದ್ಮಭೂಷಣ' ಪಡೆದರು.

18 ಸೆಪ್ಟೆಂಬರ್, ನಟ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬದ ಸಂಭ್ರಮ. ಅವರು ಭೌತಿಕವಾಗಿ ಇಲ್ಲದೆ ಇದ್ದರೂ ಭಾವನಾತ್ಮಕವಾಗಿ ನಮ್ಮ ಹೃದಯ ಮಂದಿರದಿ ನೆಲೆಗೊಂಡಿದ್ದಾರೆ. ಡಾ.ವಿಷ್ಣುವರ್ಧನ್ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ವಿಷ್ಣುದಾದ ಅಭಿಮಾನಿಗಳು ನಿರ್ಧರಿಸಿದ್ದಾರೆ. ಸಾಕಷ್ಟು ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕೊಂಡಿದ್ದಾರೆ.

ತಮ್ಮ ಸಿನಿಮಾ ಮೂಲಕ ಅಭಿಮಾನಿಗಳಿಗೆ ಅದ್ಭುತವಾದ ಸಂದೇಶ ನೀಡಿ, ಅವರ ಹೃದಯದಲ್ಲಿ ಸದಾ ಹಸಿರಾಗಿರುವ ವಿಷ್ಣುವರ್ಧನ್ ಅವರನ್ನು ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ನೆನಪಿಸುವ ಒಂದು ಪ್ರಯತ್ನ...

ಸಂಪತ್‌ಕುಮಾರ್ ಆಗಿ ಚಿತ್ರರಂಗಕ್ಕೆ ಬಂದು 'ವಂಶವೃಕ್ಷ'ದಲ್ಲಿ ಪುಟ್ಟ ಪಾತ್ರ ಮಾಡಿ, 'ರಾಮಾಚಾರಿ' ಯಾಗಿ ಎದ್ದು ನಿಂತ ವಿಷ್ಣುವರ್ಧನ್ ಮತ್ತೆ ತಿರುಗಿ ನೋಡಲಿಲ್ಲ. ಇನ್ನೂರು ಚಿತ್ರಗಳ ಗಡಿ ದಾಟಿದ ವಿಷ್ಣುವರ್ಧನ್ ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ಪಾತ್ರಗಳಲ್ಲಿ ನಟಿಸಿ ಗೆದ್ದವರು. ಅಭಿಮಾನಿಗಳ ಪಾಲಿಗೆ 'ಸಾಹಸ ಸಿಂಹ', ಹೆಣ್ಮಕ್ಕಳ ಪಾಲಿಗೆ 'ಬಂಧನ'ದ ಭಗ್ನಪ್ರೇಮಿ, ಬಿಳಿಗಿರಿಯ ಬನ'ದ ಬಂಡಾಯಗಾರ, 'ಹೊಂಬಿಸಿಲು' ಚಿತ್ರದ ನಿಷ್ಪಾಪಿ, 'ಸಿಡಿದೆದ್ದ ಸಹೋದರ', 'ಬಂಗಾರದ ಜಿಂಕೆ' ಯ ಬೆನ್ನಟ್ಟಿದ ಪ್ರೇಮಿ, 'ಇಂದಿನ ರಾಮಾಯಣ'ದ ನ್ಯಾಯವಂತ, ದೆವ್ವಕ್ಕೆ ಸಡ್ಡು ಹೊಡೆದ 'ಆಪ್ತಮಿತ್ರ'– ಹೀಗೆ ವಿಷ್ಣು ಎಲ್ಲ ಪಾತ್ರಗಳಲ್ಲೂ ನಟಿಸಿ ಗೆದ್ದವರು. ಅಪಾರ ಹಾಸ್ಯಪ್ರಜ್ಞೆ, ತುಂಬು ಮಾನವೀಯತೆ, ಸರಳ–ಸಜ್ಜನಿಕೆಯ ಎಷ್ಟು 70ನೇ ಹುಟ್ಟುಹಬ್ಬ ಈ ಬಾರಿ ಹಲವು ವಿಶೇಷತೆಗಳಿಂದ ಕೂಡಿದೆ.

ಹೃದಯವಂತ ಎಂಬ ಸಿನಿಮಾ ಮಾಡಿ ನಿಜತ್ವದಲ್ಲಿ ಹೃದಯವಂತನಂತೆ ಜೀವಿಸಿ, ವಿಶಾಲ ಮನಸ್ಸಿನಿಂದ ದಾನದಲ್ಲಿ ಸೈ ಎನಿಸಿ ಬಲಗೈಲಿ ಕೊಟ್ಟದ್ದು ಎಡಗೈಗೆ ತಿಳಿಯಬಾರದು ಎಂಬಂತಿದ್ದವರು ವಿಷ್ಣು... ಯಾವತ್ತೂ ಅವರು ತಾವು ಮಾಡಿದ ಸಹಾಯದ ಕುರಿತು ಹೇಳಿಕೊಂಡವರೇ ಅಲ್ಲ, ವಿವಾದಗಳು ಅವರನ್ನು ಬೆನ್ನಟ್ಟಿ ಬಂದಾಗಲೂ ಅವರು ಮೌನಿ ಯಾಗಿದ್ದರು. ಡಾ.ಅಂಬರೀಷ್ ಮತ್ತು ಅವರ ಸ್ನೇಹ ಚಿತ್ರರಂಗಕ್ಕೊಂದು ಮಾದರಿ ಹೆಗ್ಗುರುತು. ವಿಷ್ಣುವರ್ಧನ್ ನಟಿಸಿದ ಚಿತ್ರಗಳ ಪೈಕಿ ನೆನಪಲ್ಲಿ ಉಳಿಯುವಂಥ ಚಿತ್ರಗಳ ಪಟ್ಟಿ ಸಾಕಷ್ಟು ದೊಡ್ಡದಿದೆ. 'ಮುತ್ತಿನಹಾರ' ಕನ್ನಡ ಚಿತ್ರರಂಗದಲ್ಲೇ ಒಂದು ಮೈಲಿಗಲ್ಲು 'ಬಂಧನ',



ಇಂದು ಡಾ.ವಿಷ್ಣುವರ್ಧನ್ ಹುಟ್ಟುಹಬ್ಬ

'ಆಪ್ತಮಿತ್ರ', 'ಆಪ್ತರಕ್ಷಕ'ಗಳ ನಡುವೆಯೇ ಅವರು 'ಗಂಧರ್ವಗಿರಿ'ಯಂಥ ಸಿನಿಮಾ ಮಾಡಿದವರು. 'ಹರಕೆಯ ಕುರಿ'ಯಂಥ ಅರ್ಥಪೂರ್ಣ ಚಿತ್ರದಲ್ಲಿ ನಟಿಸಿದವರು. 'ಯಜಮಾನ' ಚಿತ್ರದ ಗಳಿಕೆ ಇವತ್ತಿಗೂ ದಾಖಲೆಯಾಗಿಯೇ ಉಳಿದಿದೆ. ಕನ್ನಡದಲ್ಲಷ್ಟೇ ಅಲ್ಲದೆ, ಹಿಂದಿ, ತೆಲುಗು, ತಮಿಳು ಚಿತ್ರಗಳಲ್ಲೂ ನಟಿಸಿದ್ದ ವಿಷ್ಣುವರ್ಧನ್ ಅವರು ಯಾವತ್ತೂ ಚಿತ್ರರಂಗದ ನಾಯಕನೆಂದು ತಮ್ಮನ್ನು ಕರೆದುಕೊಂಡವರೇ ಅಲ್ಲ. "ನಾನು ತುಂಬ ಚಿಕ್ಕವನು, ನಾನು ಹಿಂದೆಯೇ ಇರಬೇಕು" ಅನ್ನುತ್ತಿದ್ದವರು ಅವರು. ಎಲ್ಲರನ್ನೂ ಮುಂದೆ ಬಿಟ್ಟುಕೊಂಡು, 'ಸ್ನೇಹಲೋಕ' ಎಂಬ ತಂಡ ಕಟ್ಟಿ ಕ್ರಿಕೆಟ್ ಪ್ರೇಮಿಗಳ ಹೃದಯಕ್ಕೆ ಲಗ್ಗೆ ಇಟ್ಟವರು ಅವರು. ಬಿರುಕು ಬಿದ್ದ ಮನಗಳಿಗೆ ಸೇತುವೆ ಸೆಲೆಯಾಗಿ ಸಮಾನ ಮನಸ್ಕರನ್ನು ಒಂದಾಗಿಸಿದ ಖ್ಯಾತಿಯೂ ಅವರದ್ದೇ. ವಿಷ್ಣುವರ್ಧನ್ ಅವರು ಕೊನೆಯ ದಿನಗಳಲ್ಲಿ ವಿಷ್ಣುವರ್ಧನ್ ಧ್ಯಾನಸ್ಥ ಸ್ಥಿತಿಯಲ್ಲಿದ್ದರು. ಆಧ್ಯಾತ್ಮ ಅವರಿಗೆ ತುಂಬ ಪ್ರಿಯವಾಗಿತ್ತು. ವಿದ್ಯಾನಂದ ಶೆಣೈ ಅವರ ಪುಸ್ತಕಗಳನ್ನು ಓದುತ್ತಿದ್ದರು.

ದೇಶಕ್ಕೇನಾದರೂ ಮಾಡಬೇಕು ಅನ್ನುವ ತುಡಿತ ಇಟ್ಟುಕೊಂಡಿದ್ದರು. ಬನ್ನಂಜೆ ಗೋವಿಂದಾಚಾರ್ಯರ ಉಪನ್ಯಾಸಗಳನ್ನು ಕೇಳುತ್ತಿದ್ದರು. 'ಎಲ್ಲದಕ್ಕೂ ಕಾರಣ ಮೇಲಿರುವ ಕಾಣದ ಆ ಶಕ್ತಿ' ಎಂದು ಹೇಳುತ್ತಿದ್ದರು. ಯಾವತ್ತೂ ಗೆಲುವು ತನ್ನದಲ್ಲ– ಜನರದ್ದು ಎನ್ನುವ ಅವರ ವಿನೀತಭಾವ ವಿನಮ್ರವೇ ಅವರ ವ್ಯಕ್ತಿತ್ವಕ್ಕೆ ಶೋಭೆ ತರುವುದಾಗಿದೆ. 'ಕೆಲವರಿಗೆ ಯೋಗ ಇರುತ್ತೆ. ಮತ್ತೆ ಕೆಲವರಿಗೆ ಯೋಗ್ಯತೆ ಇರುತ್ತೆ. ನನಗೆ ಯೋಗವಿತ್ತೇ ಹೊರತು, ಯೋಗ್ಯತೆ ಇಲ್ಲ' ಅಂತ ತಮ್ಮ ಬಗ್ಗೆ ಅತ್ಯಂತ ವಿನಯದಿಂದ ಮಾತಾಡುತ್ತಿದ್ದರು. ಏಕಾಂತ ನೀಗುವುದಕ್ಕೆ ಡೈರಿ ಬರೆಯುತ್ತಿದ್ದರು. ಮನುಷ್ಯನ ಮನೋ ವ್ಯಾಪಾರಗಳನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದ ಅವರಿಗೆ, ತಮ್ಮೆದುರು ಕೂತ ವ್ಯಕ್ತಿ ಸಭ್ಯಸ್ಥರೋ ಅಲ್ಲವೋ ಎನ್ನುವುದು ಕ್ಷಣಾರ್ಧದಲ್ಲಿ ಗೊತ್ತಾಗಿ ಬಿಡುತ್ತಿತ್ತು. ಮಮಕಾರ ಮತ್ತು ಅಹಂ ಕಾರ–ಇವೆರಡೇ ಮನುಷ್ಯನನ್ನು ಎತ್ತರಕ್ಕೆ ಏರಿಸುವ, ಅಧೋಗತಿಗೆ ಇಳಿಸುವ ಶಕ್ತಿಗಳು. ಮನುಷ್ಯ ಮನೆ ಯೊಳಗಿದ್ದಾಗ ಅವನಲ್ಲಿ ಮಮಕಾರ ತುಂಬಿರುತ್ತದೆ. ಹೊರಗೆ ಹೋದ ಕೂಡಲೇ ಅಹಂಕಾರ ಬಂದು ಬಿಡುತ್ತದೆ' ಎನ್ನುತ್ತಿದ್ದರು. ಅವರ ಈ ಬಗೆಯ ನಿಲುವು ನಮ್ಮ ಮನಸ್ಸಿಗೆ ಗಾಢವಾದ ಪರಿಮಾಣವಾಗಲು ಕಾರಣವಾದದ್ದು ಮಾತ್ರ ಸತ್ಯ, ಅವರ ನಡೆ, ಮೃದುತನದ ಹೃದಯದಿಂದ ಮೂಡುತ್ತಿದ್ದ ಮಾತುಗಳ ಗರಿಗಳು ನಮ್ಮನ್ನು ಸಲಹಿವೆ, ಕಾವು ಕೊಟ್ಟು ಬದುಕುವಂತೆ ಮಾಡಿವೆ.

ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಸಹಾಯಕ
ಪ್ರಾಧ್ಯಾಪಕ,
ಮೊ: 77958 62281

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಗುರುವಾರ 18 ಸೆಪ್ಟೆಂಬರ್ 2025



ಸಚಿವರ ಭೇಟಿ.... ಬೆಂಗಳೂರಿನ ವಿಧಾನಸೌಧದಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರನ್ನು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಭೇಟಿ ಮಾಡಿ, ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿನ ಗೊಂದಲ ಹಾಗೂ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ವಿಚಾರಗಳ ಕುರಿತು ಗಮನಹರಿಸುವಂತೆ ಮನವಿ ಸಲ್ಲಿಸಿದರು.

ಮುಡಾ ಅಕ್ರಮದಲ್ಲಿ ಭಾಗಿಯಾದವರೆಲ್ಲರ ವಿರುದ್ಧವೂ ತನಿಖೆ ಆಗಬೇಕು

ಮುಡಾ ಆಯುಕ್ತರಾಗಿದ್ದ ದಿನೇಶ್‌ಕುಮಾರ್ ಬಂಧನಕ್ಕೆ ಸಂಸದ ಯದುವೀರ್ ಒಡೆಯರ್ ಪ್ರತಿಕ್ರಿಯೆ

- ಲಿಂಗಾಯತ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್ ಎಂಬ ಹೊಸ ಜಾತಿಗಳಿಲ್ಲ
- ಹೊಸ ಜಾತಿ ಸೇರ್ಪಡೆಗೆ ನಮ್ಮ ತೀವ್ರ ವಿರೋಧವಿದೆ
- ರಾಜ್ಯ ಸರ್ಕಾರ ಏಕಪಕ್ಷೀಯ ತೀರ್ಮಾನ ಕೈಗೊಳ್ಳಬಾರದು
- ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಬಯಲಾಗಿದೆ

ಮೈಸೂರು,ಸೆ.17(ಬಿಎಲ್‌ಯು)–ಮುಡಾ ಅಕ್ರಮದಲ್ಲಿ ಭಾಗಿಯಾದವರೆಲ್ಲರ ವಿರುದ್ಧವೂ ತನಿಖೆಯಾಗಬೇಕು ಎಂದು ಸಂಸದ ಯದುವೀರ್ ಒಡೆಯರ್ ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್‌ಕುಮಾರ್ ಅವರನ್ನು ಇಡಿ ಬಂಧಿಸಿರುವ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದರು.

ಮುಡಾದಲ್ಲಿ ಅಕ್ರಮ ನಡೆದಿದೆ ಎಂದು ಈ ಮೊದಲೇ ನಾವು ಹೇಳಿದ್ದೆವು. ಅದರಂತೆ ತನಿಖೆ ನಡೆಸುತ್ತಿರುವ ಇಡಿ ಅಧಿಕಾರಿಗಳು ಈಗ ದಿನೇಶ್‌ಕುಮಾರ್ ಅವರನ್ನು ಬಂಧಿಸಿದ್ದಾರೆ. ಮುಡಾದಲ್ಲಿ ಅಕ್ರಮ ಎಸಗಿರುವ ಎಲ್ಲರ ವಿರುದ್ಧವೂ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಲಿಂಗಾಯತ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್ ಸೇರಿದಂತೆ ಹೊಸ ಜಾತಿಗಳನ್ನು ಸೇರ್ಪಡೆ ಮಾಡಲಾಗುತ್ತಿದೆ ಎಂಬ ಆರೋಪದ ಬಗ್ಗೆ ಕೂಡ ಪ್ರತಿಕ್ರಿಯೆ ನೀಡಿದ ಯದುವೀರ್ ಅವರು, ಈ ರೀತಿಯ ಹೆಸರುಗಳೇ ಇಲ್ಲ. ಹೀಗಿರುವಾಗ ಯಾವ ಆಧಾರದ ಮೇಲೆ ಕ್ರಿಶ್ಚಿಯನ್ ಧರ್ಮದಲ್ಲಿ ಹೊಸ ಜಾತಿಗಳನ್ನು ಸೇರ್ಪಡೆ ಮಾಡುತ್ತಿದ್ದಾರೊ ತಿಳಿಯದು ಎಂದರು.

ಯಾರನ್ನೊ ಮೆಚ್ಚಿಸುವ ಸಲುವಾಗಿ ಹೊಸ ಜಾತಿಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಇದಕ್ಕೆ ನಮ್ಮ ತೀವ್ರ ವಿರೋಧವಿದೆ. ಈ ವಿಚಾರವನ್ನು ನಾವು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ. ಯಾವುದೇ ಕಾರಣಕ್ಕೂ ನಾವು ಹೊಸ ಜಾತಿಗಳ ಸೇರ್ಪಡೆಯನ್ನು ಒಪ್ಪುವುದಿಲ್ಲ. ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುತ್ತಿರುವ ಬಗ್ಗೆ ಇದೇ ವೇಳೆ ಪ್ರತಿಕ್ರಿಯೆ ನೀಡಿದ ಯದುವೀರ್, ರಾಜ್ಯ ಸರ್ಕಾರ ಯಾವ ಕಾರಣಕ್ಕೆ ಇಂತಹ ನಿಲುವು ತೆಗೆದುಕೊಳ್ಳುತ್ತಿದೆಯೋ ತಿಳಿಯದು ಎಂದು ಹೇಳಿದರು.

ಸಂವಿಧಾನದ ಆಶಯದಂತೆ ನಾವು ನಡೆಯಬೇಕು. ಕಾನೂನು ವ್ಯಾಪ್ತಿ ಬಿಟ್ಟು ಏಕಪಕ್ಷೀಯ ತೀರ್ಮಾನ ಮಾಡಬಾರದು ಎಂದು ಯದುವೀರ್ ಅವರು ಸರ್ಕಾರಕ್ಕೆ ಸಲಹೆ ನೀಡಿದರು.

ಧರ್ಮಸ್ಥಳದ ಬುರುಡೆ ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಸುತ್ತಿರುವುದನ್ನು ನಾವು ಸ್ವಾಗತಿಸುತ್ತೇವೆ. ತನಿಖೆಯಿಂದ ಈಗ ಧರ್ಮಸ್ಥಳದ ವಿರುದ್ಧದ ಷಡ್ಯಂತ್ರ ಬಯಲಾಗಿದೆ ಎಂದು ತಿಳಿಸಿದರು.

ಆದರೆ ಧಾರ್ಮಿಕ ಕ್ಷೇತ್ರಕ್ಕೆ ಮಸಿ ಬಳಿಯಲು ಬಿಡಬಾರದು. ಇದು ನನ್ನ ಸ್ವಂತ ಅಭಿಪ್ರಾಯ ಮಾತ್ರವಲ್ಲದೆ ಜನ ಸಾಮಾನ್ಯರ ಅಭಿಮತ ಕೂಡ ಇದೆ ಆಗಿದೆ ಎಂದು ಯದುವೀರ್ ಹೇಳಿದರು.



ಮೈಸೂರಿನ ದೇವರಾಜ ಮೊಹಲ್ಲಾದ ಅಮೃತೇಶ್ವರ ದೇವಸ್ಥಾನದಲ್ಲಿ ಪ್ರಧಾನಿ ಮೋದಿ ಅವರಿಗೆ ಶುಭಾಶಯ ಕೋರಿ, ಹೋಮ–ಹವನ, ಪೂರ್ಣಾಹುತಿ ಸಲ್ಲಿಸಲಾಯಿತು.

ಮೋದಿ ಹುಟ್ಟುಹಬ್ಬ: ಮೈಸೂರಲ್ಲಿ ಹೋಮ–ಹವನ

ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ದೇವರಾಜ ಮೊಹಲ್ಲಾದ ಅಮೃತೇಶ್ವರ ದೇವಸ್ಥಾನದಲ್ಲಿ ಹೋಮ–ಹವನ ನಡೆಯಿತು.

ಸಂಸದ ಯದುವೀರ್, ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ ಅವರು ಪೂರ್ಣಾಹುತಿ ಅರ್ಪಿಸುವ ಸಂದರ್ಭದಲ್ಲಿ ಹಾಜರಿದ್ದರು. ಮೋದಿ ಅವರಿಗೆ ಒಳಿತಾಗಲಿ ಎಂದು ಮಹಾಯಾಗ ಹೋಮ ನಡೆಸಲಾಯಿತು. ಹೋಮದಲ್ಲಿ ಭಾಗಿಯಾಗಿದ್ದ ಬಿಜೆಪಿ ಕಾರ್ಯಕರ್ತರು ಮೋದಿ ಅವರ ಭಾವಚಿತ್ರ ಹಿಡಿದುಕೊಂಡು ಜೈಕಾರ ಹಾಕಿದರು.

ಮುಡಾ ಹಗರಣ: ಹಿಂದಿನ ಅಧ್ಯಕ್ಷರು, ಆಯುಕ್ತರು, ಇತರೆ ಅಧಿಕಾರಿಗಳು, ರಾಜಕಾರಣಿಗಳ ಬಂಧನವಾಗಬೇಕು

ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹ

ಮೈಸೂರು, ಸೆ.17(ಬಿಎಲ್‌ಯು)– ಮುಡಾ ಅಕ್ರಮದಲ್ಲಿ ಭಾಗಿಯಾಗಿರುವ ಹಿಂದಿನ ಅಧ್ಯಕ್ಷರು, ಆಯುಕ್ತರು, ಇನ್ನಿತರೆ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಬಂಧನವಾಗಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹಿಸಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಆಯುಕ್ತರಾಗಿದ್ದ ದಿನೇಶ್‌ಕುಮಾರ್ ಅವರನ್ನು ಇಡಿ ಅಧಿಕಾರಿಗಳು ಬಂಧಿಸಿರುವುದು ಸ್ವಾಗತಾರ್ಹ ಸಂಗತಿ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯಾಗುವ ಸಂಕೇತವನ್ನು ಸೂಚಿಸುವ ದಸರಾ ವೇಳೆಯಲ್ಲಿ ಮುಡಾ ಅಕ್ರಮದಲ್ಲಿ ಭಾಗಿಯಾಗಿರುವವರು ಸಿಕ್ಕಿ ಬೀಳುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಶ್ರೀವತ್ಸ ತಿಳಿಸಿದರು.

ಕೇವಲ ದಿನೇಶ್‌ಕುಮಾರ್ ಒಬ್ಬರನ್ನು ಬಂಧಿಸಿದರೆ ಸಾಲದು, ಸಾವಿರಾರು ನಿವೇಶನಗಳ ಅಕ್ರಮ ಮಂಜೂರಾತಿಯಲ್ಲಿ ಭಾಗಿಯಾದ ಎಲ್ಲರ ವಿರುದ್ಧವೂ ತನಿಖೆ ಆಗಬೇಕು. ಅಲ್ಲಿವರೆಗೆ ನಮ್ಮ ಹೋರಾಟ ಮುಂದುವರೆಯಲಿದೆ. ಕೆ.ಆರ್. ಮೊಹಲ್ಲಾದ ಗಾಡಿಚೌಕದಲ್ಲಿ ಈಗಾಗಲೇ ಒಂದು ದರ್ಗಾ ಇದೆ. ಹೀಗಿರುವಾಗ ಪಾಲಿಕೆ ಆಯುಕ್ತರು ಮತ್ತೊಂದು ದರ್ಗಾಕ್ಕೆ ಹೇಗೆ ಅವಕಾಶ ಕೊಟ್ಟರು ಎಂದು ಪ್ರಶ್ನಿಸಿದರು.

ಗಾಡಿಚೌಕದಲ್ಲಿ ದರ್ಗಾ ಇರುವ ಬಗ್ಗೆ ನಕ್ಷೆ ಸೇರಿದಂತೆ ಯಾವುದೇ ದಾಖಲಾತಿ ಇಲ್ಲ. ಹಾಗೇನಾದರೂ ಇದ್ದರೆ ಕೊಡಲಿ. ಅಲ್ಲಿ ಆಟೋಗಳನ್ನು ನಿಲ್ಲಿಸುತ್ತಾರೆ. ಬೆಂಕಿ ಹಚ್ಚಿ ನನ್ನ ವಿರುದ್ಧ ಆರೋಪ ಮಾಡಿದರೆ ಯಾರು ಹೊಣೆ ಎಂದು ಮರು ಪ್ರಶ್ನಿಸಿದ ಶ್ರೀವತ್ಸ, ಈ ಕೂಡಲೇ ಅಲ್ಲಿ ಇರುವ ಎಲ್ಲರನ್ನು ಖಾಲಿ ಮಾಡಿಸಬೇಕು. ಜೊತೆಗೆ ಅಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಎಂದು ಶ್ರೀವತ್ಸ ಒತ್ತಾಯಿಸಿದರು.

ಅಲ್ಲಿ ಕೋಮುಗಲಭೆ ಸೃಷ್ಟಿ ಆದ ಮೇಲೆ ಕ್ಷೇತ್ರದ ಶಾಸಕನಾದ ನನ್ನ ಮೇಲೆ ಹಾಕಲು ಹುನ್ನಾರ ನಡೆಯುತ್ತಿದೆ. ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನಾನು ಕ್ಷೇತ್ರದ ಶಾಸಕನಾಗಿದ್ದು, ನನ್ನ ಕ್ಷೇತ್ರದ ಯಾವುದೇ ಸ್ಥಳಕ್ಕೆ ಹೋಗಲು ಯಾರ ಅನುಮತಿಯೂ ಬೇಡ ಎಂದು ಶ್ರೀವತ್ಸ ಸ್ಪಷ್ಟಪಡಿಸಿದರು.

ಜಾತಿ ಕಾಲಂನಲ್ಲಿ ಕಮ್ಮಾರ ಎಂದು ಬರೆಸಲು ಮನವಿ

ಮೈಸೂರು, ಸೆ.17 (ಜಿಎ)–ರಾಜ್ಯ ಸರ್ಕಾರ ನಡೆಸುತ್ತಿರುವ ಜಾತಿ ಗಣತಿ ವೇಳೆ ಕಮ್ಮಾರ ಹಾಗೂ ಇತರೆ ಹೆಸರುಗಳಿಂದ ಕರೆಯಲ್ಪಡುವ ಈ ಸಮುದಾಯದವರು ಕಮ್ಮಾರ ಎಂದೇ ಬರೆಯಿಸಬೇಕೆಂದು ರಾಜ್ಯ ಕಮ್ಮಾರರ ಸಂಘದ ರಾಜ್ಯ ಖಜಾಂಚಿ ಟಿ.ಆರ್.ರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ಕಡೆ ಗೊಂದಲಕ್ಕೊಳಗಾಗಿ ವಿಶ್ವಕರ್ಮ ಎಂದು ಬರೆಯಿಸಲು ಹಲವರು ಮುಂದಾಗುತ್ತಾರೆ. ಇದು ತಪ್ಪು. ಏಕೆಂದರೆ ಕಮ್ಮಾರರೇ ಪ್ರತ್ಯೇಕ ಸಮುದಾಯದವರಾಗಿದ್ದಾರೆ. ಇದೇ ಕಾರಣದಿಂದ ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ಸೌಲಭ್ಯವೂ ದೊರೆಯುತ್ತಿಲ್ಲ ಎಂದು ವಿವರಿಸಿದರು.

ಕನ್ನಾರ, ಕಂಚಾರ, ಲೋಹಾರ, ಬೈಲು ಕಮ್ಮಾರ ಮೊದಲಾದ ಹೆಸರುಗಳಿಂದ ಕರೆಯಲ್ಪಡುವವರು ಕಮ್ಮಾರ ಎಂದೇ ಬರೆಯಿಸಬೇಕು. 9ನೇ ಕಾಲಂನಲ್ಲಿ ಕಮ್ಮಾರ ಎಂದು ಬರೆಯಿಸುವುದರಿಂದ ಮುಂದೆ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದೆ ಇರಿಸಿ ಈಡೇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಧರ್ಮ ಹಿಂದೂ ಎಂದು ನಮೂದಿಸಿ, ಉಪಜಾತಿಯ ಕಾಲಂನಲ್ಲಿ ಪ್ರದೇಶವಾರು ಕರೆಯುವ ಉಪನಾಮ ನಮೂದಿಸಬೇಕೆಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಜಿ.ಟಿ.ರಂಗಸ್ವಾಮಿ, ಎಂ.ರಮೇಶ್, ಮಂಜುನಾಥ್, ಸಿದ್ದರಾಜು, ಶೇಖರ್, ಗೋಪಾಲ್ ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ...



ಮೈಸೂರಿನ ಬನ್ನಿಮಂಟಪದ ಹಲೀಂನಗರದಲ್ಲಿ ಯುಜಿಡಿ ಮತ್ತು ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್‌ಸೇಠ್ ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಇಂಜಿನಿಯರ್ ಶೋಭಾ, ಇಂಜಿನಿಯರ್ ಆನಂದ್, ಎಇಇ ಅರ್ಚನಾ, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸೈಯದ್ ಇಕ್ಬಾಲ್, ಅವೇಜ್ ಪಾಷಾ, ಎಸ್.ಸ್ಟಾರ್ ಶಫಿ, ಅಬ್ದುಲ್ ಜಬ್ಬಾರ್, ವಸೀಮ್, ಶೌಕತ್ ಅಲಿಖಾನ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ ಮತ್ತಿತರರಿದ್ದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್‌ಗೆ ಕಡಕೊಳ ಜಗದೀಶ್ ಮೈಸೂರು ಜಿಲ್ಲಾಧ್ಯಕ್ಷ



ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷರಾಗಿ ನೇಮಕವಾದ ಕಡಕೊಳ ಜಗದೀಶ್ ಅವರನ್ನು ಮೈಸೂರಲ್ಲಿ ಮುಖಂಡರು ಅಭಿನಂದಿಸಿದರು.

ಮೈಸೂರು, ಸೆ. 17–ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷರಾಗಿ ಕಡಕೊಳ ಜಗದೀಶ್ ಅವರಿಗೆ ರಾಜ್ಯಾಧ್ಯಕ್ಷ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನೇಮಕಾತಿ ಪತ್ರ ನೀಡಿ, ಶುಭ ಕೋರಿದರು. ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ, ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮೈಸೂರು ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ವತ್ಸಲ ನಾಗರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಿಂದಿ ದಿವಸ್ ಆಚರಣೆ...



ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ದಿವಸ್ ಆಚರಿಸಲಾಯಿತು. ಈ ವೇಳೆ ಡಾ.ರೇಖಾ ಅಗರ್ವಾಲ್, ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ.ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರಶೇಖರ್, ಪ್ರಾಂಶುಪಾಲ ಸಿ.ಶಿವಪ್ಪ, ಪ್ರಣಮ್ಯ ಎಜ್ಯುಕೇಶನಲ್ ಟ್ರಸ್ಟ್‌ನ ಅಧ್ಯಕ್ಷೆ ವಿ.ಪಿ.ಸವಿತಾ ಹಾಗೂ ಬೋಧಕ–ಬೋಧಕೇತರರು ಪಾಲ್ಗೊಂಡಿದ್ದರು.

ಜಾತಿ ಕಾಲಂನಲ್ಲಿ ಶಿವಾರ್ಚಕ ಎಂದು ಬರೆಸುವಂತೆ ಮನವಿ

ಮೈಸೂರು,ಸೆ.17(ಜಿಎ)–ರಾಜ್ಯ ಸರ್ಕಾರ ನಡೆಸುವ ಜಾತಿ ಜನಗಣತಿ ಸಮೀಕ್ಷೆಯಲ್ಲಿ ಶಿವಾರ್ಚಕ ಸಮುದಾಯದವರು ಜಾತಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ ಎ–1320 ಶಿವಾರ್ಚಕ ಎಂದೇ ಬರೆಸಬೇಕು ಎಂದು ರಾಜ್ಯ ಶಿವಾರ್ಚಕ ಸಂಘದ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘ ಅಧ್ಯಕ್ಷ ಎಂ.ಮಲ್ಲಣ್ಣ ಈ ವಿಷಯ ತಿಳಿಸಿ, ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗಬಾರದು. ಧರ್ಮ ಕಾಲಂನಲ್ಲಿ ಹಿಂದೂ ಹಾಗೂ ಉಪಜಾತಿ ಕಾಲಂನಲ್ಲಿ ಯಾವುದು ಇಲ್ಲ ಎಂದು ಬರೆಸಬೇಕು. ಇದರಿಂದ ನಿಖರ ಜನಸಂಖ್ಯೆ ದೊರೆತು ಸರ್ಕಾರಿ ಸೌಲಭ್ಯ ಹೊಂದಲು ಸಹಕಾರಿಯಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಟಿ.ಎನ್.ನಾಗೇಂದ್ರ, ಪಟೇಲ್ ಸೋಮಯ್ಯ, ಜಿ.ಬಿ.ಮಧು, ನಂಜುಂಡಪ್ಪ, ಪಿ.ಮಹದೇವು, ಯಶವಂತ್ ಉಪಸ್ಥಿತರಿದ್ದರು.

ವಿವಿಧ ಶಿರಸ್ತೇದಾರ್, ಉಪತಹಸೀಲ್ದಾರ್ ವರ್ಗಾವರ್ಗಿ

ಮೈಸೂರು, ಸೆ.17(ಎಸ್‌ಪಿಎನ್)–ರಾಜ್ಯದ ವಿವಿಧ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 137 ಶಿರಸ್ತೇದಾರ್, ಉಪ ತಹಸೀಲ್ದಾರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅನುಮತಿ ಮೇರೆಗೆ ಕಂದಾಯ ಇಲಾಖೆಯ(ಸೇವೆಗಳು–1) ಅಧೀನ ಕಾರ್ಯದರ್ಶಿ ಬಿ.ಈ.ಉಮಾಮಹೇಶ್ವರಿ ವರ್ಗಾವಣೆಗೊಳಿಸಿ ಆದೇಶಿಸಿದ್ದಾರೆ. ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಆರ್.ಆರ್.ಟಿ.ಶಿರಸ್ತೇದಾರ್ ಅಸ್ಲಾಂ ಬಾಷಾ ಅವರನ್ನು ಕೆ.ಆರ್.ಪೇಟೆ ತಾಲೂಕು ಕಚೇರಿಗೆ, ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕು ಕಚೇರಿಯ ಚುನಾವಣಾ ಶಿರಸ್ತೇದಾರ್ ಎಂ.ಪದ್ಮಿನಿ ಅವರನ್ನು ಪ್ರಾದೇಶಿಕ ಆಯುಕ್ತರ ಕಚೇರಿಯ ಮೈಸೂರು ವಿಭಾಗದ ಶಿರಸ್ತೇದಾರ್, ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕು ಹೆತ್ತೂರು ನಾಡ ಕಚೇರಿ ಉಪತಹಸೀಲ್ದಾರ್ ಮೇರಿದೀಪಾ ಅವರನ್ನು ಜಾವಗಲ್ ನಾಡ ಕಚೇರಿಯ ಉಪ ತಹಸೀಲ್ದಾರ್, ಆಲೂರು ತಾಲೂಕಿನ ಕೆಂಚಮ್ಮನ ಹೊಸಕೋಟೆ ಹೋಬಳಿಯ ಉಪತಹಸೀಲ್ದಾರ್ ಮಧುಸೂದನ್ ಅವರನ್ನು ಸಕಲೇಶಪುರ ತಾಲೂಕಿನ ಯಸಳೂರು ಹೋಬಳಿಯ ಉಪತಹಸೀಲ್ದಾರ್, ಕೊಳ್ಳೇಗಾಲ ತಾಲೂಕು ಕಚೇರಿಯ ಸಾಮಾಜಿಕ ಭದ್ರತೆ ವಿಭಾಗದ ಶಿರಸ್ತೇದಾರ ಎನ್.ನಾಗಲಕ್ಷ್ಮಿ ಅವರನ್ನು ಟಿ.ನರಸೀಪುರ ತಾಲೂಕು ಕಚೇರಿ ಶಿರಸ್ತೇದಾರ್ ಹುದ್ದೆಗೆ ವರ್ಗಾಯಿಸಿದ್ದು, ಇತರರನ್ನು ಹೀಗೆ ವಿವಿಧೆಡೆಗೆ ವರ್ಗಾವಣೆ ಮಾಡಲಾಗಿದೆ.


ನಮೋ ಪಾರ್ಕ್ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ...



ಮೈಸೂರಿನ ಶಾರದಾದೇವಿನಗರದಲ್ಲಿ ನಮೋ ಪಾರ್ಕ್ ನಿರ್ಮಾಣ ಕಾಮಗಾರಿಗೆ ಸಂಸದ ಯದುವೀರ್ ಒಡೆಯರ್ ಬುಧವಾರ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ರಾಕೇಶ್‌ಭಟ್, ಮುಖಂಡರಾದ ಶ್ರೀಮತಿ ಹೆಚ್.ಜಿ.ರಾಜಮಣಿ, ರಮೇಶ್ ರಾಂಪುರೆ, ಪುಟ್ಟಸ್ವಾಮಿ, ಶ್ರೀಧರ್ ಶರ್ಮಾ, ಶಶಿಕಾಂತ್, ಅಭಿಷೇಕ್‌ಗೌಡ, ಶಿವು ಪಟೇಲ್, ರವಿನಾಯಕ, ರವಿ ಅರಸ್, ರಮಾಬಾಯಿ, ಸುಮಿತ್ರ, ಲೋಕೇಶ್‌ರೆಡ್ಡಿ, ಹಿರಿಯಣ್ಣ, ಲಕ್ಷ್ಮಿ ಜಯಶೇಖರ್, ವಿನುತಾ, ಮಂಜುಳಾ, ಕಲಾವತಿ, ತುಳಸಿ, ರಾಧಾ, ಚಂದ್ರಶೇಖರ್‌ಶೆಟ್ಟಿ, ಹೇಮಂತ್, ಬಸವಣ್ಣ, ಮಧುಶೇಖರ್, ಚಂದನ್, ಸಾಗರ್, ಸೂರ್ಯ ಇನ್ನಿತರರಿದ್ದರು.

ಮಾದಕ ವ್ಯಸನ ಕೌಟುಂಬಿಕವಾಗಿ ಮಾತ್ರವಲ್ಲ ಸಮಾಜದಿಂದಲೂ ದೂರ ಮಾಡುತ್ತದೆ

ಬಸವ ಮಾರ್ಗ ಫೌಂಡೇಷನ್‌ನ ಎಸ್.ಬಸವರಾಜು ಎಚ್ಚರಿಕೆ



ಮೈಸೂರಿನ ಮೈಕಾ ಕಾಲೇಜಿನಲ್ಲಿ ಬಸವಮಾರ್ಗ ಫೌಂಡೇಷನ್ ವತಿಯಿಂದ ಮಾದಕ ವ್ಯಸನ ಕುರಿತು ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿತ್ತು. ಬಸವ ಮಾರ್ಗ ಫೌಂಡೇಶನ್‌ನ ಎಸ್.ಬಸವರಾಜು, ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶೋಭಿತಾ, ಎಸ್.ದಿಯಾ ಉಪಸ್ಥಿತರಿದ್ದರು.

ಮೈಸೂರು, ಸೆ.17(ಎಂಕೆ)–ಮಾದಕ ವ್ಯಸನ, ವ್ಯಸನಿಯನ್ನು ಕೌಟುಂಬಿಕ ಹಾಗೂ ಸಾಮಾಜಿಕವಾಗಿ ಸಮಾಜದಿಂದ ದೂರ ಮಾಡುತ್ತದೆ ಎಂದು ಬಸವಮಾರ್ಗ ಫೌಂಡೇಷನ್‌ನ ಎಸ್.ಬಸವರಾಜು ಅಭಿಪ್ರಾಯಪಟ್ಟರು.

ಮೈಸೂರು ರಿಂಗ್ ರಸ್ತೆ ಸಮೀಪದಲ್ಲಿರುವ ಮೈಕಾ ಕಾಲೇಜಿನಲ್ಲಿ ಅಯೋಜಿಸಿದ್ದ ವ್ಯಸನ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾದಕ ವ್ಯಸನದಿಂದಾಗುವ ಪರಿಣಾಮಗಳ ಬಗ್ಗೆ ಎಲ್ಲರಿಗೂ ಅರಿವಿದೆ. ಆದರೂ ಹೆಚ್ಚಿನ ಜನರು ವ್ಯಸನಕ್ಕೆ ದಾಸರಾಗುತ್ತಿದ್ದಾರೆ. ಕ್ಷಣಿಕ ಸುಖಕ್ಕಾಗಿ ತಮ್ಮ ಪ್ರಾಣವನ್ನೇ ಬಲಿ ಕೊಡುತ್ತಿದ್ದಾರೆ. ತಾತ್ಕಾಲಿಕ ಉನ್ಮಾದ ನಮ್ಮ ಜೀವನವನ್ನು ಸಂಕಟಕ್ಕೆ ತಳ್ಳುತ್ತದೆ ಎಂದು ಎಚ್ಚರಿಸಿದರು.

ಮಾದಕ ವಸ್ತುಗಳು ಮನುಷ್ಯನ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುತ್ತವೆ. ವ್ಯಸನಿಯನ್ನಾಗಿ ಪರಿವರ್ತಿಸಿ ಕಾನೂನುಬಾಹಿರ ಮಾರ್ಗವನ್ನು ಹಿಡಿಯುವಂತೆ ಮಾಡುತ್ತದೆ. ಇದರಿಂದಾಗಿ ವ್ಯಕ್ತಿ ಸಮಾಜದಲ್ಲಿ ಅಗೌರವಕ್ಕೆ ಪಾತ್ರನಾಗುತ್ತಾನೆ. ಕೌಟುಂಬಿಕ ಕಲಹ ಹಾಗೂ ತನ್ನ ಆರೋಗ್ಯವನ್ನು ಹಾಳು ಮಾಡಿಕೊಳ್ಳುವ ಮೂಲಕ ತನ್ನ ಬದುಕನ್ನ ಅಂತಿಮಗೊಳಿಸಿಕೊಳ್ಳುತ್ತಾನೆ ಎಂದು ಬೇಸರ ವ್ಯಕ್ತಪಡಿಸಿದರು.

ಜೀವನದಲ್ಲಿ ಉತ್ತಮ ಆಲೋಚನೆಗಳಿಗೆ ತೆರೆದುಕೊಳ್ಳಬೇಕು. ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ತನ್ನ ಗುರಿಯತ್ತ ಸಾಗಲು ಪರಿಶ್ರಮಪಡಬೇಕು. ಆಗ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ನಮ್ಮ ಎಲ್ಲಾ ಶಕ್ತಿಯನ್ನು ಉತ್ತಮ ಕೆಲಸಗಳಿಗೆ ವಿನಿಯೋಗಿಸಿದಾಗ ಸಮಾಜದಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಆಯೋಜಿಸಿದ್ದ ಮಾದಕ ವ್ಯಸನ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಬಳಿಕ ವಿಜೇತರಿಗೆ ಬಹುಮಾನ ವಿತರಿಸಿ ಅಭಿನಂದಿಸಲಾಯಿತು. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶೋಭಿತಾ, ಎಸ್.ದಿಯಾ ಉಪಸ್ಥಿತರಿದ್ದರು.

ದೇಶ - ವಿದೇಶ

ಇಂಡಿಗೋ ಹೆಚ್ಚುವರಿ ನಿರ್ದೇಶಕರಾಗಿ ಅಮಿತಾಬ್ ಕಾಂತ್




ನವದೆಹಲಿ: ನಾಗರಿಕ ವಿಮಾನಯಾನ ಸಚಿವಾಲಯದಿಂದ ಭದ್ರತಾ ಅನುಮತಿ ಪಡೆದ ನಂತರ ಸೆಪ್ಟೆಂಬರ್ 15 ರಿಂದ ಜಾರಿಗೆ ಬರುವಂತೆ ಅಮಿತಾಬ್ ಕಾಂತ್ ಅವರನ್ನು ಮಂಡಳಿಯಲ್ಲಿ ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಿಸಲಾಗಿದೆ ಎಂದು ಇಂಡಿಗೋ ಬುಧವಾರ ತಿಳಿಸಿದೆ.

ಜುಲೈ 3 ರಂದು, ನೀತಿ ಆಯೋಗದ ಮಾಜಿ ಸಿಇಒ ಮತ್ತು ಭಾರತದ ಜಿ20 ಶೆರ್ಪಾ ಆಗಿದ್ದ ಅಮಿತಾಬ್ ಕಾಂತ್ ಅವರನ್ನು ಮಂಡಳಿಗೆ ನೇಮಕ ಮಾಡುವುದಾಗಿ ವಿಮಾನಯಾನ ಸಂಸ್ಥೆ ಘೋಷಿಸಿತ್ತು.

ಕಂಪನಿಯು ಸೆಪ್ಟೆಂಬರ್ 15, 2025 ರಂದು ನಾಗರಿಕ ವಿಮಾನಯಾನ ಸಚಿವಾಲಯದಿಂದ ಅಗತ್ಯವಾದ ಭದ್ರತಾ ಅನುಮತಿಯನ್ನು ಪಡೆದುಕೊಂಡಿದೆ. ಅದರಂತೆ, ಅಮಿತಾಬ್ ಕಾಂತ್ ಅವರ ನೇಮಕಾತಿ ಸೆಪ್ಟೆಂಬರ್ 15, 2025 ರಿಂದ ಜಾರಿಗೆ ಬರಲಿದೆ ಎಂದು ಇಂಡಿಗೋ ಪೋಷಕ ಸಂಸ್ಥೆ ಇಂಟರ್‌ಗ್ಲೋಬ್ ಏವಿಯೇಷನ್ ತಿಳಿಸಿದೆ.

ಕೇರಳದಲ್ಲಿ ಮೆದುಳು ತಿನ್ನುವ ಅಮೀಬಾ ಸೋಂಕಿಗೆ 19 ಜನ ಬಲಿ



ತಿರುವನಂತಪುರ: ಕೇರಳದಲ್ಲಿ ನಿಗೂಢವಾಗಿ ವ್ಯಾಪಿಸುತ್ತಿರುವ ಮೆದುಳು ತಿನ್ನುವ ಅಮೀಬಾ ಸೋಂಕಿಗೆ ಈವರೆಗೂ 19 ಮಂದಿ ಬಲಿಯಾಗಿದ್ದಾರೆ. ಹೆಚ್ಚಿನ ಮರಣ ಪ್ರಮಾಣ ಹೊಂದಿರುವ ಪ್ರಾಥಮಿಕ ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ಪ್ರಕರಣಗಳಲ್ಲಿ ಹೆಚ್ಚಳವಾದ ನಂತರ ಕೇರಳ ಆರೋಗ್ಯ ಅಧಿಕಾರಿಗಳು ಜಾಗರೂಕರಾಗಿದ್ದಾರೆ. ಈ ಸೋಂಕು ಸಾಮಾನ್ಯವಾಗಿ 'ಮೆದುಳು ತಿನ್ನುವ ಅಮೀಬಾ' ಎಂದು ಕರೆಯಲ್ಪಡುವ ನೇಗ್ಲೇರಿಯಾ ಫೌಲೇರಿಯಿಂದ ಉಂಟಾಗುತ್ತದೆ. ಈ ವರ್ಷ, ಕೇರಳದಲ್ಲಿ 61 ದೃಢಪಡಿಸಿದ PAM ಪ್ರಕರಣಗಳು ಮತ್ತು 19 ಸಾವುಗಳು ದಾಖಲಾಗಿವೆ. ಈ ಸಾವುಗಳಲ್ಲಿ ಹಲವು ಕಳೆದ ಕೆಲವು ವಾರಗಳಲ್ಲಿ ವರದಿಯಾಗಿವೆ. ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಾತನಾಡಿ, ಕೇರಳವು ಗಂಭೀರ ಸಾರ್ವಜನಿಕ ಆರೋಗ್ಯ ಸವಾಲನ್ನು ಎದುರಿಸುತ್ತಿದೆ. ಈ ಹಿಂದೆ ಕೋಝಿಕ್ಕೋಡ್ ಮತ್ತು ಮಲಪ್ಪುರಂನಂತಹ ಜಿಲ್ಲೆಗಳ ಕ್ಲಸ್ಟರ್‌ಗಳಿಗೆ ಸಂಬಂಧಿಸಿದ್ದ ಸೋಂಕುಗಳು ಈಗ ರಾಜ್ಯಾದ್ಯಂತ ವಿರಳವಾಗಿ ಕಾಣಿಸಿಕೊಳ್ಳುತ್ತಿವೆ. 3 ತಿಂಗಳ ಶಿಶುವಿನಿಂದ 91 ವರ್ಷದ ವೃದ್ಧನವರೆಗೆ ರೋಗಿಗಳು ಇದ್ದಾರೆ. ಇದು ನಮ್ಮ ಸಾಂಕ್ರಾಮಿಕ ರೋಗಶಾಸ್ತ್ರೀಯ ತನಿಖೆಗಳನ್ನು ಸಂಕೀರ್ಣಗೊಳಿಸಿದೆ ಎಂದು ಹೇಳಿದರು.

ಇಂಟರ್ನೆಟ್, ವೈಫೈ ನಿಷೇಧಿಸಿದ ತಾಲೀಬಾನ್

ಅಫ್ಘಾನಿಸ್ತಾನ: ಉತ್ತರ ಅಫ್ಘಾನಿಸ್ತಾನದ ಬಾಲ್ಖ್ ಪ್ರಾಂತ್ಯದಲ್ಲಿ ತಾಲಿಬಾನ್ ಸರ್ಕಾರ ಫೈಬರ್–ಆಪ್ಟಿಕ್ ಇಂಟರ್ನೆಟ್ ಅಥವಾ ವೈಫೈ ಅನ್ನು ನಿಷೇಧಿಸಿದೆ. ಪರಿಣಾಮವಾಗಿ, ನಾಗರಿಕರು ಇನ್ನು ಮುಂದೆ ವೈಫೈ ಬಳಸಲು ಸಾಧ್ಯವಾಗುವುದಿಲ್ಲ. ಅನೇಕ ಜನರ ಮನೆಗಳು, ವ್ಯವಹಾರಗಳು ಮತ್ತು ಸರ್ಕಾರಿ ಕಚೇರಿಗಳಲ್ಲಿ ವೈಫೈ ಅನ್ನು ದಿಢೀರ್ ಆಗಿ ಸ್ಥಗಿತಗೊಳಿಸಲಾಗಿದೆ.

ವೈಫೈಗೆ ನಿಷೇಧ ಹೇರಿದ್ದರೂ, ಮೊಬೈಲ್ ಇಂಟರ್ನೆಟ್ ಕಾರ್ಯನಿರ್ವಹಿಸುತ್ತಿದೆ. ಇದು ನಾಗರಿಕರಿಗೆ ಕೊಂಚ ಪರಿಹಾರವನ್ನು ನೀಡಿದೆ. ತಾಲಿಬಾನ್‌ನ ಸರ್ವೋಚ್ಚ ನಾಯಕ ಹಿಬತುಲ್ಲಾ ಅಖುಂಡ್‌ಜಾದಾ ವೈಫೈ ಸ್ಥಗಿತಗೊಳಿಸಲು ಆದೇಶಿಸಿದ ನಂತರ ಎಲ್ಲಾ ಕೇಬಲ್ ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ. ಅಫ್ಘಾನಿಸ್ತಾನದಲ್ಲಿ ಹುಡುಗಿಯರು ಪ್ರಪಂಚದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಶಿಕ್ಷಣ ಪಡೆಯಲು ವೈಫೈ ಒಂದು ಸಾಧನವಾಗಿತ್ತು, ಆದರೆ ಈಗ ಸರ್ಕಾರದ ಈ ನಿರ್ಧಾರವು ಅವರ ಶಿಕ್ಷಣಕ್ಕೆ ಅಡ್ಡಿಯಾಗುವ ಸಾಧ್ಯತೆಯಿದೆ. ಭಯೋತ್ಪಾದಕರು ಬಾಂಬ್ ದಾಳಿ ನಡೆಸುವುದನ್ನು ತಡೆಯಲು ಭದ್ರತಾ ಕಾಳಜಿಯನ್ನು ಉಲ್ಲೇಖಿಸಿ ತಾಲಿಬಾನ್ ಈ ಹಿಂದೆ ಧಾರ್ಮಿಕ ಹಬ್ಬಗಳ ಸಮಯದಲ್ಲಿ ಮೊಬೈಲ್ ನೆಟ್‌ವರ್ಕ್‌ಗಳನ್ನು ಸ್ಥಗಿತಗೊಳಿಸಿತ್ತು. ಈಗ ತಾಲಿಬಾನ್ ಬ್ರಾಡ್‌ಬ್ಯಾಂಡ್ ಅನ್ನು ನಿಷೇಧಿಸಿದೆ. ಮುಂದಿನ ದಿನಗಳಲ್ಲಿ ದೇಶಾದ್ಯಂತ ಈ ನಿಷೇಧವನ್ನು ವಿಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಮೋದಿ ಹುಟ್ಟುಹಬ್ಬಕ್ಕೆ ಕೊಲಂಬೊ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ



ಕೊಲಂಬೊ: ಶ್ರೀಲಂಕಾದ ಕೊಲಂಬೊದ ಬೊಹ್ರಾ ಮಸೀದಿಯಲ್ಲಿ ಭಾರತ ಪ್ರಧಾನಿ ಮೋದಿಯವರಿಗಾಗಿ ವಿಶೇಷ ಪ್ರಾರ್ಥನೆಗಳನ್ನು ನಡೆಸಲಾಯಿತು. ಇದು ಸರ್ವಧರ್ಮ ಸಮನ್ವಯತೆಯನ್ನು ಸಾರುತ್ತಿದೆ. ಮುಸ್ಲಿಂ ಸಮುದಾಯದ ಸದಸ್ಯರು ಮೋದಿಗೆ ಆರೋಗ್ಯ, ದೀರ್ಘಾಯುಷ್ಯ ಕೋರಿ ಪ್ರಾರ್ಥನೆ ಸಲ್ಲಿಸಿದ್ದು, ಭಾರತಕ್ಕೆ ಸೇವೆ ಸಲ್ಲಿಸುವಲ್ಲಿ ನಿರಂತರ ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ.

ಮೋದಿ ಅವರ 75ನೇ ಹುಟ್ಟುಹಬ್ಬದ ಪ್ರಯುಕ್ತ ಶ್ರೀಲಂಕಾದಾದ್ಯಂತ ವಿಶೇಷ ಪ್ರಾರ್ಥನೆಗಳನ್ನು ನಡೆಸಲಾಗುತ್ತಿದೆ. ಇದು ಎಲ್ಲಾ ಧರ್ಮಗಳು ಮತ್ತು ಸಮುದಾಯಗಳಲ್ಲಿ ಸದ್ಭಾವನೆಯನ್ನು ಪ್ರತಿಬಿಂಬಿಸುತ್ತದೆ. ಕೊಲಂಬೊದ ಬೊಹ್ರಾ ಸಮುದಾಯವು ಕೊಲಂಬೊದ ಹುಸೇನಿ ಮಸೀದಿಯಲ್ಲಿ ಪ್ರಾರ್ಥನೆಯನ್ನು ನಡೆಸಿದೆ. ಇದರ ಜೊತೆಗೆ ಕೊಲಂಬೊದ ಮಹಾಬೋಧಿ ಸೊಸೈಟಿಯಲ್ಲಿಯೂ ಪ್ರಾರ್ಥನೆಗಳನ್ನು ಆಯೋಜಿಸಲಾಗಿದೆ.

ದಕ್ಷಿಣ ಕೊರಿಯಾಗೆ ಗೌರಂಗಲಾಲ್ ದಾಸ್ ಭಾರತದ ನೂತನ ರಾಯಭಾರಿ



ನವದೆಹಲಿ: ಹಿರಿಯ ರಾಜತಾಂತ್ರಿಕ ಅಧಿಕಾರಿ ಗೌರಂಗ ಲಾಲ್ ದಾಸ್ ಅವರನ್ನು ಬುಧವಾರ ದಕ್ಷಿಣ ಕೊರಿಯಾಗೆ ಭಾರತದ ನೂತನ ರಾಯಭಾರಿಯಾಗಿ ನೇಮಿಸಲಾಗಿದೆ.

1999ರ ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವೆ(ಐಎಫ್‌ಎಸ್) ಅಧಿಕಾರಿಯಾಗಿರುವ ದಾಸ್, ಪ್ರಸ್ತುತ ನವದೆಹಲಿಯಲ್ಲಿರುವ ವಿದೇಶಾಂಗ ಸಚಿವಾಲಯದ(ಎಂಇಎ) ಪ್ರಧಾನ ಕಚೇರಿಯಲ್ಲಿ ನಿರ್ಣಾಯಕ ಪೂರ್ವ ಏಷ್ಯಾ ವಿಭಾಗದ ನೇತೃತ್ವ ವಹಿಸಿದ್ದಾರೆ.

ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಪೂರ್ವ ಲಡಾಖ್ ಗಡಿಯಲ್ಲಿ ಉಂಟಾದ ಬಿಕ್ಕಟ್ಟಿನ ನಂತರ ತೀವ್ರ ಒತ್ತಡಕ್ಕೆ ಸಿಲುಕಿದ್ದ ಭಾರತ ಮತ್ತು ಚೀನಾ ನಡುವಿನ ಸಂಬಂಧಗಳನ್ನು ಸುಧಾರಿಸುವಲ್ಲಿ ದಾಸ್ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರಸ್ತುತ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ದಾಸ್ ಅವರನ್ನು ಕೊರಿಯಾ ಗಣರಾಜ್ಯಕ್ಕೆ ಭಾರತದ ಮುಂದಿನ ರಾಯಭಾರಿಯಾಗಿ ನೇಮಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಅವರು ಶೀಘ್ರದಲ್ಲೇ ಈ ಹುದ್ದೆಯನ್ನು ವಹಿಸಿಕೊಳ್ಳುವ ನಿರೀಕ್ಷೆಯಿದೆ ಎಂದು ವಿದೇಶಾಂಗ ಸಚಿವಾಲಯ ಸಂಕ್ಷಿಪ್ತ ಪ್ರಕಟಣೆಯಲ್ಲಿ ತಿಳಿಸಿದೆ.

ಮದ್ದೂರು ಗಲಭೆ

ಮೂರ್‍ನಾಲ್ಕು ದಿನದಲ್ಲಿ ತನಿಖಾ ವರದಿ


ಸುದ್ದಿಗೋಷ್ಠಿಯಲ್ಲಿ ಶಾಸಕ ಕೆ.ಎಂ.ಉದಯ್ ಮಾತನಾಡಿದರು.

ಮದ್ದೂರು, ಸೆ.17– ಕೋಮು ಗಲಭೆಗೆ ಸಂಬಂಧಿಸಿದಂತೆ ಮೂರ್‍ನಾಲ್ಕು ದಿನಗಳಲ್ಲಿ ಪೊಲೀಸರ ತನಿಖಾ ವರದಿ ಬರಲಿದ್ದು, ಕಲ್ಲು ಎಸೆದ ಕಿಡಿಗೇಡಿಗಳನ್ನು ಯಾವ ಭಾಷೆಯಲ್ಲಿ ನಿಂದಿಸಿದರೂ ತಪ್ಪಲ್ಲ. ಅವರು ಕ್ಷಮೆಗೂ ಅನರ್ಹರು ಎಂದು ಶಾಸಕ ಕೆ.ಎಂ.ಉದಯ್ ಕಿಡಿಕಾರಿದರು.

ಜಿಲ್ಲೆ ಸೇರಿದಂತೆ ಇಡೀ ಮದ್ದೂರು ಶಾಂತಿ, ಸಾಮರಸ್ಯ ಸೈತ ಚಳವಳಿಗೆ ಹೆಸರಾಗಿತ್ತು ಆದರೆ ಕೆಲ ಕಿಡಿಗೇಡಿಗಳು ಮಾಡಿದ ತಪ್ಪಿಗೆ ಗಲಭೆ ಉಂಟಾಯಿತು. ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ, ಪೊಲೀಸ್ ವರಿಷ್ಠಾಧಿಕಾರಿ ಸ್ಥಳದಲ್ಲೇ ಮೊಕ್ಕಾಂ ಹೂಡಿ ಪರಿಸ್ಥಿತಿ ಹತೋಟಿಗೆ ತಂದರು. ಆದರೆ ಬಿಜೆಪಿ ಮುಖಂಡರು ಹಾಗೂ ಹಿಂದೂಪರ ಸಂಘಟನೆಗಳು ಆಗಮಿಸಿ ಕೋಮು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟರು ಎಂದು ಆರೋಪಿಸಿದರು.

ನನ್ನ ಮಗಳ ವಿದ್ಯಾಭ್ಯಾಸದ ವಿಚಾರಕ್ಕಾಗಿ ವಿದೇಶಕ್ಕೆ ಹೋಗಿದ್ದು ನಿಜ. ಆದರೆ ಕೆಲವರು ಮೋಜು ಮಸ್ತಿಗೆ ಹೋಗಿದ್ದಾರೆ ಎಂದು ಆಪಾದಿಸಿದರು. ಸೆ.7ರಂದು ನಾನು ವಿದೇಶಕ್ಕೆ ತೆರಳಿದೆ. ಆದರೆ ಅಂದು ಸಂಜೆಯೇ ಗಲಭೆ ಉಂಟಾಯಿತು. ತಮಾವಾಯ ನಿರಂತರವಾಗಿ ಪೊಲೀಸರ ಸಂಪರ್ಕದಲ್ಲಿದ್ದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾದರು ಎಂದು ಘಟನೆ ಬಗ್ಗೆ ವಿವರಿಸಿದರು.

ನಾಲ್ಕೂವರೆ ವರ್ಷಗಳಿಂದ ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ತಾಲೂಕಿನ ಪ್ರತಿ ಗ್ರಾಮಕ್ಕೆ ಕನಿಷ್ಠ 4ರಿಂದ 7 ಗಣೇಶಮೂರ್ತಿಗಳನ್ನು ಉಡುಗೊರೆಯಾಗಿ ನನ್ನ ಟ್ರಸ್ಟ್‌ನಿಂದ ಕೊಡುತ್ತಾ ಬಂದಿದ್ದೇನೆ. ಆದರೆ ಈ ಬಾರಿ ಅನಿವಾರ್ಯ ಕಾರಣಗಳಿಂದ ಗಣೇಶಮೂರ್ತಿಗಳನ್ನು ವಿತರಣೆ ಮಾಡಲು ಆಗಲಿಲ್ಲ. ಆದರೆ ಆರ್ಥಿಕ ಸಹಾಯ ಕೇಳಿ ಬಂದ ಯುವ ಪಡೆಗೆ ಟ್ರಸ್ಟ್‌ನಿಂದ ಧನ ಸಹಾಯ ಮಾಡಿದ್ದೇನೆ. ನಾನೂ ಸಹ ಹಿಂದೂವಾಗಿದ್ದು, ಘಟನೆ ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದರು.

ಮೈಸೂರು, ಶಿವಮೊಗ್ಗ ಸೇರಿದಂತೆ ಮಲೆನಾಡಿನಿಂದ ಬಂದವರೆಲ್ಲಾ ಮಂಡ್ಯ ಜಿಲ್ಲೆಯ ಜನರಿಗೆ ಬುದ್ಧಿ ಹೇಳುವ ಅವಶ್ಯಕತೆ ಇಲ್ಲ. ಇವರೆಲ್ಲರೂ ಸೇರಿ ಸಾಮರಸ್ಯಕ್ಕೆ ಹೆಸರಾದ ಜಿಲ್ಲೆಯುವರನ್ನು ಪ್ರಚೋದಿಸಿ ಮಂಗಳೂರು ಮಾಡಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಘಟನೆ ಬಗ್ಗೆ ಈಗಾಗಲೇ ಎಸ್ಪಿಯವರೊಂದಿಗೆ ಮಾತನಾಡಿದ್ದು, ಅವರು ಶೀಘ್ರದಲ್ಲೇ ವರದಿ ನೀಡುತ್ತೇನೆ ಎಂದು ಹೇಳಿದ್ದಾರೆ. ಅಲ್ಲದೆ, ಪ್ರಗತಿಪರ ಚಿಂತಕರು ಸಾಮರಸ್ಯ ನಡಿಗೆ ಮಾಡುವ ಅವಶ್ಯಕತೆ ಇಲ್ಲ. ಪೊಲೀಸರು ಈಗಾಗಲೇ ಅನುಮತಿ ಕೊಡುತ್ತಿಲ್ಲ ಎಂದು ಹೇಳಿದ್ದು, ಪೊಲೀಸರ ನಿರ್ಧಾರವನ್ನು ಸ್ವಾಗತಿಸುವುದಾಗಿ ಸ್ಪಷ್ಟಪಡಿಸಿದರು.

ಸದ್ಯದಲ್ಲೇ ರಾಮ್ ರಹೀಂ ನಗರಕ್ಕೆ ಭೇಟಿ ನೀಡಿ ಮೂಲಸೌಕರ್ಯ, ರಸ್ತೆ ವಿಸ್ತರಣೆ ಇವೆಲ್ಲವನ್ನು ಸರಿಪಡಿಸಿ ದೇವರ ಉತ್ಸವ, ಗಣಪತಿ ಮೆರವಣಿಗೆ, ಹಬ್ಬಹರಿದಿನಗಳು, ತಮಟೆ ಬಳಕೆ ಬಗ್ಗೆ ಯಾವುದೇ ನಿರ್ಬಂಧವಿಲ್ಲದಂತೆ ಕ್ರಮ ವಹಿಸಲಾಗುವುದು. ಜೊತೆಗೆ ಅಲ್ಲಿ ಸಾಮರಸ್ಯ ಸೃಷ್ಟಿಸುವುದಾಗಿ ತಿಳಿಸಿದರು.

ಗೋಷ್ಠಿಯಲ್ಲಿ ಪುರಸಭೆ ಅಧ್ಯಕ್ಷೆ ಕೋಕಿಲ , ಹರೀಶ್‌ಬಾಬು, ಸಂದರ್ಶ್, ಚಲುವರಾಜು, ಅಣ್ಣೂರು ರಾಜೀವ್, ಕದ ಲೂರು, ತಿಮ್ಮೇಗೌಡ ಇದ್ದರು.

ದೇವಾಲಯಗಳಿಗೆ ಅಡಿಪಾಯ ಹಾಕಿದವರೇ ವಿಶ್ವಕರ್ಮರು


ವಿಶ್ವಕರ್ಮ ಜಯಂತಿಯಲ್ಲಿ ಶಾಸಕ ಪಿ.ರವಿಕುಮಾರ್ ಮಾತನಾಡಿದರು.

ಮಂಡ್ಯ, ಸೆ.17–ದೇವರುಗಳಿಗೂ ಮನೆ ನಿರ್ಮಾಣ ಮಾಡಿದ ವಿಶ್ವಕರ್ಮ ಅವರನ್ನು ದೇಶದ ಮೊದಲ ಇಂಜಿನಿಯರ್ ಎನ್ನಬಹುದು ಎಂದು ಶಾಸಕ ಪಿ.ರವಿಕುಮಾರ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿ, ವಿಶ್ವಕರ್ಮರು ಇರದಿದ್ದರೆ ವಾಸವಿರಲು ಮನೆಗಳು ಇರುತ್ತಿರಲಿಲ್ಲ. ಇಂದು ಅಯೋಧ್ಯೆ ಕನ್ಯಾಕುಮಾರಿ, ಕೇದಾರನಾಥ ಇವೆಲ್ಲಾ ದೇವಾಲಯಗಳಿಗೆ ಅಡಿಪಾಯ ಹಾಕಿದವರು ಹಾಗೂ ಜಗತ್ತಿನ ಮೊದಲ ದೇವಾಲಯುವನ್ನು ನಿರ್ಮಿಸಿದವರು ವಿಶ್ವಕರ್ಮ ಎಂದರು.

ಸಮುದಾಯದ ಅಭಿವೃದ್ಧಿಗೆ ಸರ್ಕಾರ ಅವರ ಜೊತೆ ಇದೆ. ನಗರದಲ್ಲಿ ವಿಶ್ವಕರ್ಮ ಭವನಕ್ಕೆ ಸೂಕ್ತ ನಿವೇಶನ ಖರೀದಿಸಿದ್ ಸರ್ಕಾರದ ಅನುದಾನದಿಂದ ಸಮುದಾಯ ಭವನ ನಿರ್ಮಾಣ ಮಾಡಬಹುದಾಗಿದೆ. ಅದಕ್ಕೆ 5 ಲಕ್ಷ ರೂ. ಹಣ ನೀಡುವುದಾಗಿ ಭರವಸೆ ನೀಡಿದರು.

ಶಾಸಕ ಕೆ.ಎಂ.ಉದಯ್ ಮಾತನಾಡಿ ಮದ್ದೂರಿನಲ್ಲಿ ವಿಶ್ವಕರ್ಮ ಸಮುದಾಯದವರಿಗೆ ನಿವೇಶನ ನೀಡುವ ಸಲುವಾಗಿ ಸರ್ವೇ ಕೆಲಸ ನಡೆಸಲಾಗುತ್ತಿದೆ. ಶೀಘ್ರದಲ್ಲೇ ನಿವೇಶನ ಕೊಡಿಸಲಾಗುವುದು. ಒಂದು ವೃತ್ತದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರ ಪ್ರತಿಮೆ ನಿರ್ಮಾಣ ಮಾಡಲು ಚಿಂತನೆ ಮಾಡಲಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಮಾತನಾಡಿ, ವಿಶ್ವಕರ್ಮ ಭವನ ನಿರ್ಮಾಣಕ್ಕೆ ಸೈಟ್ ಖರೀದಿಸಲು ಶಾಸಕರು ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ನೀವು ಸಹ ನಿಮ್ಮ ಸಮುದಾಯದವರ ಬಳಿ ಹಣ ಸಂಗ್ರಹಣೆ ಮಾಡಿದರೆ ಶೀಘ್ರದಲ್ಲಿ ಸೈಟ್ ಖರೀದಿಸಲು ಕ್ರಮ ವಹಿಸಬಹುದು ಎಂದು ಆಶ್ವಾಸನೆ ನೀಡಿದರು. ನಂತರ ವಿಶ್ವಕರ್ಮ ಸಮುದಾಯದ ಸಾಧಕರನ್ನು ಸನ್ಮಾನಿಸಲಾಯಿತು.

ಕಿಂಗೇರಿ ವಿಶ್ವಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಯತಿರಾಜ ದಾಸರ್ ಗುರು ಪೀಠದ ಗೃಹಸ್ಥ ಪೀಠಾಧಿಪತಿ ಶ್ರೀಶ್ರೀನಿವಾಸ ನರಸಿಂಹಸ್ವಾಮಿ ಗುರೂಜೀ, ನಗರಸಭೆ ಅಧ್ಯಕ್ಷ ನಾಗೇಶ್, ನಟ, ನಿರ್ದೇಶಕ ಮದನ್ ಕುಮಾರ್, ಸಮುದಾಯದ ಜಿಲ್ಲಾಧ್ಯಕ್ಷ ಸುದರ್ಶನ್, ನಗರಸಭೆ ಸದಸ್ಯರಾದ ಶ್ರೀಧರ್, ಶಿವಪ್ರಕಾಶ್, ಡಿ.ದೇವರಾಜ್ ಅರಸ್ ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಸಂದೇಶ್, ಗಣ್ಯರಾದ ಅಮ್ಜದ್ ಪಾಷಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಣೇಶನಿಗೆ ಪೂಜೆ ಸಲ್ಲಿಸಿದ ಮುಸ್ಲಿಂ ಬಾಂಧವರು


ಶ್ರೀಗಜಪಡೆ ಯುವಕರ ಬಳಗ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮುಸ್ಲಿಂ ಬಂಧುಗಳು ವಿಶೇಷ ಪೂಜೆ ಮಾಡಿಸಿ, ಭಕ್ತಾದಿಗಳಿಗೆ ಸಿಹಿ ವಿತರಿಸಿದರು

ಕೆ.ಆರ್.ಪೇಟೆ, ಸೆ.17– ತಾಲೂಕಿನ ಹರಿಹರಪುರ ಗ್ರಾಮದಲ್ಲಿ ಶ್ರೀಗಜಪಡೆ ಯುವಕರ ಬಳಗ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಮುಸ್ಲಿಂ ಬಾಂಧವರು ಪೂಜೆ ಸಲ್ಲಿಸಿ, ಭಕ್ತರಿಗೆ ಅನ್ನದಾನ, ಸಿಹಿ ವಿತರಣೆ ಮಾಡಿದರು.

ಮಂಗಳವಾರ ಹರಿಹರಪುರ ಗ್ರಾಮದ ಮುಸ್ಲಿಂ ಮುಖಂಡರಾದ ಇರ್ಫಾನ್ ಪಾಷಾ, ಮುಸ್ತಾಕ್, ರಾಜಿಕ್, ಸಿದ್ಧಿಕ್, ಝಾಕೀರ್, ಶಫಿಕ್, ಇಮ್ರಾನ್ ಮತ್ತಿತರರು ಹಿಂದೂ ಅರ್ಚಕರ ಮೂಲಕ ಗಣೇಶನಿಗೆ ಹೂವಿನ ಅಲಂಕಾರ ಮಾಡಿಸಿ, ಹಣ್ಣು–ಕಾಯಿ, ಮೋದಕ ಅರ್ಪಿಸಿ ಪೂಜೆ ಸಲ್ಲಿಸಿದರು. ಬಳಿಕ ಭಕ್ತರಿಗೆ ಸಿಹಿ ಪ್ರಸಾದ ವಿತರಣೆ ಮಾಡಿದರು.

ಇದೇ ಸಂದರ್ಭ ಮಾತನಾಡಿದ ಇರ್ಫಾನ್ ಪಾಷಾ, ನಾವು ನಮ್ಮ ಧರ್ಮ ಶ್ರೇಷ್ಠ, ನಮ್ಮ ಜಾತಿ ಶ್ರೇಷ್ಠ ಎಂಬ ಭ್ರಮೆಯಲ್ಲಿದ್ದುಕೊಂಡು ನಮ್ಮ ನಮ್ಮಲ್ಲಿ ಪರಸ್ಪರ ದ್ವೇಷ ಅಸೂಯೆಗಳನ್ನು ಬೆಳೆಸಿಕೊಂಡಿದ್ದೇವೆ. ಇದರಿಂದ ಸಮಾಜದಲ್ಲಿ ಶಾಂತಿ–ನೆಮ್ಮದಿಗೆ ಭಂಗ ಉಂಟಾಗುತ್ತಿದ್ದು, ರಾಜಕಾರಣಿಗಳು ಇದರ ಲಾಭ ಪಡೆದುಕೊಳ್ಳಲು ಬಿಡದೇ ನಾವೇ ಎಚ್ಚರಿಕೆಯಿಂದ ಇರಬೇಕು ಎಂದು ಎಚ್ಚರಿಸಿದರು. ಗೌರಿ ಗಣೇಶ ಮೆರವಣಿಗೆಗೆ ಮುಸ್ಲಿಮರು ಪೂರ್ಣ ಸಹಕಾರ ನೀಡಬೇಕು. ಬಾಬಯ್ಯನ ಹಬ್ಬ, ಮೊಹರಂ ಹಬ್ಬ, ಈದ್ ಮಿಲಾದ್ ಹಬ್ಬಗಳಿಗೆ ಹಿಂದೂಗಳು ಸಹಕಾರ ನೀಡಬೇಕು. ಆ ಮೂಲಕ ಸಮಾಜದಲ್ಲಿ ಶಾಂತಿ–ಸೌಹಾರ್ದತೆ ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಮದ್ದೂರಿನಲ್ಲಿ ನಡೆದಂತಹ ಘಟನೆ ಮರುಕಳಿಸದಂತೆ ಎಲ್ಲಾ ಹಿಂದೂಗಳು–ಎಲ್ಲಾ ಮುಸ್ಲಿಮರು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಗಣೇಶ ಮತ್ತು ಬಾಬಯ್ಯನ ಹಬ್ಬಗಳನ್ನು ಆಚರಣೆ ಮಾಡಿಕೊಂಡು ಹೋಗುವ ಮೂಲಕ ಕೋಮು ಗಲಭೆಗಳು, ಕಲ್ಲು ತೂರಾಟಗಳು, ಲಾಠಿ ಚಾರ್ಜುಗಳು ನಡೆಯದಂತೆ ನೋಡಿಕೊಳ್ಳಬೇಕಾದ ತುರ್ತು ಅಗತ್ಯವಿದೆ ಎಂದು ಮುಸ್ಲಿಂ ಮುಖಂಡ ಇರ್ಫಾನ್ ಪಾಷಾ ಹಿಂದೂ ಮತ್ತು ಮುಸ್ಲಿಂ ಸಮುದಾಯದವರಲ್ಲಿ ಮನವಿ ಮಾಡಿದರು.

ಶಾಲೆಗಳ ಅಭಿವೃದ್ಧಿಗೆ ಸಂಘ ಸಂಸ್ಥೆಗಳು ಕೈಜೋಡಿಸಲಿ

ಭಾರತೀನಗರ, ಸೆ.17–ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರದೊಂದಿಗೆ ಸಂಘ ಸಂಸ್ಥೆಗಳು ಕೈಜೋಡಿಸಬೇಕೆಂದು ರೋಟರಿ ಭಾರತೀನಗರ ಸೆಂಟರ್ ಅಧ್ಯಕ್ಷ ಹೆಚ್.ಮರಿಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಶೆಟ್ಟಹಳ್ಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪಠ್ಯ ಪರಿಕರಗಳನ್ನು ವಿತರಿಸಿ, ಪ್ರಸ್ತುತ ದಿನದಲ್ಲಿ ಪೋಷಕರು ಖಾಸಗಿ ಶಾಲೆಗಳಿಗೆ ಮಾರುಹೋಗುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ನುರಿತ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ಸಿಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಓದಿದಂತಹ ಎಷ್ಟೋ ಮಕ್ಕಳು ಉನ್ನತ ಉದ್ಯೋಗಗಳನ್ನು ಅಲಂಕರಿಸಿದ್ದಾರೆ. ಜೊತೆಗೆ ಸರ್ಕಾರಿ ಅಧಿಕಾರಿಗಳಾಗಿದ್ದಾರೆ ಎಂದರು.

ಸರ್ಕಾರಿ ಶಾಲೆಯ ಉಳಿವಿಗಾಗಿ ಆಯಾಯ ಗ್ರಾಮದ ಯುವಕರು, ಗ್ರಾಮಸ್ಥರು ಮುಂದಾಗಬೇಕಾಗಿದೆ. ಇದರಿಂದ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ಪಡೆಯಬಹುದಾಗಿದೆ ಎಂದರು.

ಸಿ.ಎ.ಕೆರೆ ಹೋಬಳಿಯ ಕಾಡುಕೊತ್ತನಹಳ್ಳಿ, ಕರಡಕೆರೆ, ಹನುಮಂತನಗರ, ದೇವರಹಳ್ಳಿ, ಭಾರತೀನಗರ ಸೇರಿದಂತೆ ವಿವಿಧ ಶಾಲೆಗಳ ಮಕ್ಕಳಿಗೆ ಟಿಎಂಟಿ ಕಂಪನಿಯಿಂದ ಪಠ್ಯ ಪರಿಕರಗಳನ್ನು ವಿತರಣೆ ಮಾಡಲಾಯಿತು. ರೋಟರಿ ಸಂಸ್ಥೆಯ ಕಾರ್ಯದರ್ಶಿ ಪ್ರದೀಪ್, ಖಜಾಂಚಿ ಕೆಂಪೇಗೌಡ, ಶಶಿಕುಮಾರ್, ಲಾಯರ್ ಶ್ರೀನಿವಾಸ್, ಸಿದ್ದೇಗೌಡ, ನಂದೀಶ್, ಟಿಎಂಟಿ ಕಂಪನಿಯ ಸುನೀಲ್ ಕುಮಾರ್, ಪುಟ್ಟಸ್ವಾಮಿ ಇದ್ದರು.

ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಉದ್ಘಾಟನೆ


ಮಳವಳ್ಳಿ ತಾಲೂಕಿನ ಚನ್ನಪಿಳ್ಳೇ ಕೊಪ್ಪಲು ಗ್ರಾಮದ ಬಳಿ ನಂದಿನಿ ಹಾಲು ಹಾಗೂ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಉದ್ಘಾಟಿಸಿದರು. ಮನ್‌ಮುಲ್ ಎಂಡಿ ಮಂಜೇಶ್, ಉಪಾಧ್ಯಕ್ಷ ಕೃಷ್ಣೇಗೌಡ, ನಿರ್ದೇಶಕ ಆರ್.ಎನ್.ವಿಶ್ವಾಸ್, ಕೆಪಿಸಿಸಿ ಸದಸ್ಯ ಸಿದ್ದೇಗೌಡ, ಮುಖಂಡರಾದ ದೇವರಾಜು, ವಿಜಯ್, ಪುಟ್ಟಬಸವಯ್ಯ ಸೇರಿದಂತೆ ಇತರರು ಇದ್ದರು.

ಪೌರಕಾರ್ಮಿಕನ ಮೇಲೆ ಹಲ್ಲೆ, ಜಾತಿ ನಿಂದನೆ: ದೂರು

ನಾಗಮಂಗಲ, ಸೆ.17– ಪುರಸಭೆಯ ಪೌರಕಾರ್ಮಿಕ ಹಾಗೂ ಆದಿ ದ್ರಾವಿಡ ಜನಾಂಗಕ್ಕೆ ಸೇರಿದ ಟ್ರಾಕ್ಟರ್ (ಕೆಎ–54, ಎ–0658)ಡ್ರೈವರ್ ರಮೇಶ್ ಮೇಲೆ ಜಾತಿ ನಿಂದನೆ ಮಾಡಿ, ಅವರ ಮೇಲೆ ಹಲ್ಲೆ ನಡೆಸಿರುವ ಘಟನೆ ನಡೆದಿದೆ.

ಸುಮಾರು 60ಕ್ಕೂ ಹೆಚ್ಚು ಮಹಿಳಾ ಮತ್ತು ಪುರುಷ ಪೌರ ಕಾರ್ಮಿಕರು ಪಟ್ಟಣದ ಪೊಲೀಸ್ ಠಾಣೆ ಮುಂದೆ ಜಮಾಯಿಸಿ ಹಲ್ಲೆ ನಡೆಸಿದ ಖಾದರ್ ಪಾಷ ಎಂಬುವರ ಮೇಲೆ ದೂರು ದಾಖಲಿಸಿ ಕ್ರಮ ಜರುಗಿಸಬೇಕೆಂದು ಮನವಿ ಮಾಡಿದರು.

ಪೌರಕಾರ್ಮಿಕ ಡ್ರೈವರ್ ರಮೇಶ್ ಬೆಳಗ್ಗೆ 9.30 ಸಮಯದಲ್ಲಿ ಎಂದಿನಂತೆ ಮೈಸೂರು ರಸ್ತೆಯ ಅಲ್ಲಾಹ್ ಮಸೀದಿ ಪಕ್ಕದಲ್ಲಿ ಕಸ ಸಂಗ್ರಹಕ್ಕೆ ಹೋಗಿದ್ದಾರೆ. ಆ ಸಮಯದಲ್ಲಿ ಚಿಕ್ಕದೊಂದು ಚೀಲವನ್ನು ತೆಗೆದುಕೊಂಡಿಲ್ಲ ಎಂದು ಸ್ಥಳೀಯ ನಿವಾಸಿ ಖಾದರ್ ಪಾಷ ಏಕವಚನ ಪದಪ್ರಯೋಗ ಮಾಡಿ ಜಾತಿ ನಿಂದನೆ ಮಾಡುವ ಮೂಲಕ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ.

ರಮೇಶ್ ನೀಡಿದ ದೂರಿನ ಮೇರೆಗೆ ನಾಗಮಂಗಲ ಪಟ್ಟಣ ಪೊಲೀಸ್ ಠಾಣೆ ಪೊಲೀಸರು (ಕ್ರೈಂ ನಂ. 104/25, ಕಲಂ126(2), 352, 115(2) ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ.

ಹಲ್ಲೆಗೊಳಗಾದ ಪೌರಕಾರ್ಮಿಕ ನೌಕರ ರಮೇಶ್ ಮಾತನಾಡಿ ಕ್ಷುಲ್ಲಕ ಕಾರಣಕ್ಕಾಗಿ ನನ್ನ ಮೇಲೆ ಹಲ್ಲೆ ನಡೆಸಿದರು. ಜಾತಿ ನಿಂದನೆ ಮಾಡಿ ನನಗೆ ಅವಮಾನ ಮಾಡಿದ್ದಾರೆ ನನಗೆ ರಕ್ಷಣೆ ಬೇಕೆಂದು ಮನವಿ ಮಾಡಿಕೊಂಡರು. ಪಟ್ಟಣವನ್ನು ಸ್ವಚ್ಛತೆಗೊಳಿಸುವ ನಮಗೆ ರಕ್ಷಣೆ ಇಲ್ಲದಂತಾಗಿದೆ ಇದೇ ರೀತಿ ಪದೇ ಪದೇ ಪ್ರಕರಣಗಳು ನಡೆಯುತ್ತಿವೆ ದಯವಿಟ್ಟು ನಮಗೆ ರಕ್ಷಣೆ ಕೊಡಬೇಕೆಂದು ಕೆಲವು ಪೌರ ಕಾರ್ಮಿಕರು ಆಗ್ರಹಿಸಿದರು.

ಒಂದನೇ ಪುಟದಿಂದ

ಸ್ವಾಮಿ ಕಾರ್ಯ! ಸ್ವ ಕಾರ್ಯ!!

ಕೋಟ್ಯಾಂತರ ರೂ. ಮೌಲ್ಯದ ಬಿಡಿ ನಿವೇಶನಗಳನ್ನು ಹಂಚಿರುವುದಲ್ಲದೆ, 50:50ರ ಅನುಪಾತದಲ್ಲಿ ಭೂಮಾಲೀಕರಿಗೆ ಅಭಿವೃದ್ಧಿಪಡಿಸಲಾದ ಪ್ರತಿಷ್ಠಿತ ಬಡಾವಣೆಗಳಲ್ಲಿ ನಿವೇಶನ ನೀಡ ಬೇಕಾದ ಅನಿವಾರ್ಯತೆ ಬಗ್ಗೆಯೂ ವಿವರಿಸಿದ್ದಾರೆ. ಇದರ ಹಿಂದಿರುವ ವ್ಯಕ್ತಿಗಳ ಕುರಿತು ಮಾಹಿತಿ ನೀಡಿ ತಮ್ಮ ಬಳಿ ಇರುವ ದಾಖಲೆಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡಿದ್ದಾರೆ. ಬಿಡಿ ನಿವೇಶನಗಳ ಹಂಚಿಕೆಯಲ್ಲಿ ನನ್ನ ಪಾತ್ರ ಏನು ಇಲ್ಲ. ಒತ್ತಡಕ್ಕೆ ಮಣಿದು ನಾನು ಇಂತಹ ಕೆಲಸ ಮಾಡಬೇಕಾಯಿತು. ಯಾವ ಯಾವ ನಿವೇಶನಗಳಿಗೆ ಒತ್ತಡ ಬಂದಿತ್ತು ಮತ್ತು ಯಾರು ತಮ್ಮನ್ನು ದೂರವಾಣಿ ಮೂಲಕ ಸಂಪರ್ಕ ಮಾಡಿದ್ದರು ಎಂಬ ಮಾಹಿತಿಯನ್ನು, ದಿನೇಶ್‌ಅಧಿಕಾರಿಗಳ ಮುಂದಿಟ್ಟಿದ್ದಾರೆನ್ನಲಾಗಿದೆ. ಮಾಜಿ ಆಯುಕ್ತರು ನೀಡಿರುವ ಕೆಲವು ಮಾಹಿತಿ ಮತ್ತು ದಾಖಲೆಗಳನ್ನು ಕಂಡು ಇ.ಡಿ. ಅಧಿಕಾರಿಗಳೇ ಆಶ್ಚರ್ಯಚಕಿತರಾಗಿದ್ದಾರೆ. ಈ ಮಾಹಿತಿ ಆಧರಿಸಿ, ಅವುಗಳ ಕುರಿತು ತನಿಖೆಗೆ ವಿಶೇಷ ತಂಡವನ್ನೇ ರಚನೆ ಮಾಡಲಾಗಿದೆ ಎಂದು ಇಡಿ ಮೂಲಗಳು ತಿಳಿಸಿವೆ. ತಾವು ಪ್ರಾಧಿಕಾರದ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ಆ ಹುದ್ದೆಯಿಂದ ನಿರ್ಗಮಿಸುವವರೆಗೂ ಒತ್ತಡದಲ್ಲೇ ಕೆಲಸ ಮಾಡಿರುವುದಾಗಿ ದಿನೇಶ್ ಇಡಿ ಅಧಿಕಾರಿಗಳ ಮುಂದೆ ಅಳಲು ತೋಡಿಕೊಂಡಿದ್ದಾರೆ ಎನ್ನಲಾಗಿದೆ.

9 ದಿನ ಇಡಿ ಕಸ್ಟಡಿಗೆ

ಅವರು ಕೇಳಿದ ಎಲ್ಲಾ ದಾಖಲೆಗಳನ್ನೂ ನೀಡಿದ್ದು, ತನಿಖೆಗೆ ಸಂಪೂರ್ಣ ಸಹಕಾರ ನೀಡಲಾಗುತ್ತದೆ. ಈಗ ಮತ್ತೆ ಕಸ್ಟಡಿಗೆ ಕೇಳುವುದು ಸರಿಯಲ್ಲ. ಅಲ್ಲದೇ, ನಮ್ಮ ಕಕ್ಷಿದಾರರು, ಅಸ್ತಮಾ ಸೇರಿದಂತೆ ಕೆಲವು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ತಿಳಿಸಿದ್ದಲ್ಲದೇ, ದೆಹಲಿ ಮಾಜಿ ಸಿಎಂ ಕೇಜ್ರಿವಾಲ್ ಮಧ್ಯಂತರ ಜಾಮೀನು ಆದೇಶ ಉಲ್ಲೇಖಿಸಿ ದಿನೇಶ್‌ಕುಮಾರ್ ಅವರಿಗೆ ಜಾಮೀನು ನೀಡಬೇಕು ಎಂದು ಕೇಳಿಕೊಂಡರು. ಈ ವೇಳೆ ಜಡ್ಜ್, ದಿನೇಶ್‌ಕುಮಾರ್ ರಾಜಕಾರಣಿ ಅಲ್ಲ. ಮುಡಾ ಪ್ರಕರಣದಲ್ಲಿ ಈ ಅಂಶವನ್ನು ಪ್ರಸ್ತಾಪ ಮಾಡುವ ಅಗತ್ಯವಿಲ್ಲ ಎಂದರು. ವಾದ–ಪ್ರತಿವಾದ ಆಲಿಸಿದ ಕೋರ್ಟ್ ಮಧ್ಯಂತರ ಜಾಮೀನು ಅರ್ಜಿ ವಜಾಗೊಳಿಸಿತು. ಸೆ.26ರಂದು ಸಂಜೆ 5 ಗಂಟೆಗೆ ದಿನೇಶ್‌ಕುಮಾರ್ ಅವರನ್ನು ಹಾಜರುಪಡಿಸಬೇಕು ಎಂದು ಇಡಿಗೆ ಸೂಚಿಸಿತು.

ಕೇಸ್ ದಾಖಲಿಸಲು ಕೋರ್ಟ್ ಆದೇಶ

ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್‌ಗೆ ಆದೇಶ ನೀಡಿದ್ದು, ಪ್ರಕರಣದ ವಿಚಾರಣೆಯನ್ನು 2026ರ ಜನವರಿ 19ಕ್ಕೆ ಮುಂದೂಡಿದೆ. **ವಿವರ:** ಮುಡಾ ಆಯುಕ್ತ ಡಾ. ಡಿ.ಬಿ.ನಟೇಶ್ ಅವರು 50:50 ಅನುಪಾತದ ನಿವೇಶನ ಹಂಚಿಕೆಯಲ್ಲಿ ಅಕ್ರಮ ಎಸಗಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಶ್ರೀನಿವಾಸ್ ಅವರು 2022ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ದೂರು ಸಲ್ಲಿಸಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರ ಮೈಸೂರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿತ್ತು.

ಈ ವಿಚಾರವಾಗಿ ಶ್ರೀನಿವಾಸ್ ಅವರು 2022ರ ಮಾರ್ಚ್ 10ರಂದು ಸಂಜೆ ಮುಡಾ ಕಚೇರಿಗೆ ತೆರಳಿ ನಟೇಶ್ ಅವರನ್ನು ಭೇಟಿ ಮಾಡಿದರು. ಆದರೆ ಶ್ರೀನಿವಾಸ್ ತಮ್ಮ ಚೇಂಬರ್‌ಗೆ ಅತಿಕ್ರಮ ಪ್ರವೇಶ ಮಾಡಿ, ತಮ್ಮ ಮೇಲೆ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ನಟೇಶ್ ಲಕ್ಷ್ಮೀಪುರಂ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದ ಶ್ರೀನಿವಾಸ್, ಮುಡಾ ಕಚೇರಿಗೆ ತಾನು ತೆರಳಿದಾಗ ಆಯುಕ್ತ ನಟೇಶ್ ಮತ್ತಿತರರು ತನ್ನ ಮೇಲೆ ಹಲ್ಲೆ ನಡೆಸಿ ಪ್ರಾಣ ಬೆದರಿಕೆ ಹಾಕಿದ್ದಲ್ಲದೇ ಮೊಬೈಲ್ ಕಸಿದಿದ್ದಾರೆ ಎಂಬ ದೂರನ್ನು ಇ–ಮೇಲ್, ವಾಟ್ಸಪ್ ಮೂಲಕ ಮೈಸೂರು ನಗರ ಪೊಲೀಸ್ ಆಯುಕ್ತರು ಮತ್ತು ಲಕ್ಷ್ಮೀಪುರಂ ಠಾಣೆಗೆ ರವಾನಿಸಿದ್ದರು. ಆದರೆ ನಿಮ್ಮ (ಶ್ರೀನಿವಾಸ್) ವಿರುದ್ಧ ಇದೇ ವಿಚಾರವಾಗಿ ಈಗಾಗಲೇ ಎಫ್‌ಐಆರ್ ದಾಖಲಾಗಿರುವುದರಿಂದ ನಿಮ್ಮ ದೂರನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಲಕ್ಷ್ಮೀಪುರಂ ಠಾಣೆ ಪೊಲೀಸರು ಶ್ರೀನಿವಾಸ್ ಅವರಿಗೆ ಹಿಂಬರಹ ನೀಡಿದ್ದರು.

ಮಹೇಂದ್ರನ ಗಾಂಭೀರ್ಯ ನಡೆ

ಗಜಪಡೆ ಕಂಡು ಸಂಭ್ರಮಿಸಿದರು. ಮೊಬೈಲ್ ಹಾಗೂ ಕ್ಯಾಮರಾಗಳಲ್ಲಿ ಫೋಟೋ ತೆಗೆದುಕೊಂಡು ಸಂತಸಗೊಂಡರು. ಎಂದಿನಂತೆ ಬೆಂಗಾವಲು ವಾಹನ ಹಾಗೂ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಜೊತೆಗೆ ಕೇಂದ್ರ ಮೀಸಲು ಪೊಲೀಸ್ ಪಡೆಯ ವಿಶೇಷ ಘಟಕವಾದ ರ್‍ಯಾಪಿಡ್ ಆಕ್ಷನ್ ಫೋರ್ಸ್ (ಆರ್‌ಎಎಫ್) ಅಧಿಕಾರಿ, ಸಿಬ್ಬಂದಿ ಬಂದೂಕುಧಾರಿಗಳಾಗಿ ಗಜಪಡೆಗೆ ಭಾರೀ ಭದ್ರತೆ ಕಲ್ಪಿಸಿದ್ದರು. ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ಸೈಯದ್ ನದೀಮ್, ಪಶುವೈದ್ಯಾಧಿಕಾರಿ ಡಾ.ಆದರ್ಶ ಸೇರಿದಂತೆ ಮತ್ತಿತರರು ಹಾಜರಿದ್ದರು

ಕೃಷಿ ಸಾಲಮನ್ನಾ ಪರಿಶೀಲನೆ: ಸಿಎಂ ಇಂಗಿತ

ಚುರುಕುಗೊಂಡು ಈ ಬಾರಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚುವ ಸಾಧ್ಯತೆ ಇದೆ, ಇಂತಹ ಸನ್ನಿವೇಶದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ರೈತರ ನೆರವಿಗೆ ಬರುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಡಿಯೊ ಸಂವಾದದ ಮೂಲಕ ಪ್ರತಿ ಜಿಲ್ಲಾಡಳಿತದಿಂದ ಮಾಹಿತಿ ಪಡೆದಿದ್ದೇನೆ, ಜಂಟಿ ಸಮೀಕ್ಷೆ ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ಬಂದ ನಂತರ ಬೆಳೆ ನಷ್ಟ ಪ್ರಮಾಣ ದೊರೆಯಲಿದ್ದು ಪರಿಹಾರ ನೀಡಲು ಸಹಕಾರಿಯಾಗಲಿದೆ ಎಂದರು.

ನಾವು ರೈತರ ಪರ ಇದ್ದೇವೆ, ಕೇಂದ್ರ ಸರ್ಕಾರ ನಮ್ಮ ಯಾವುದೇ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ, ಕಳೆದ ವರ್ಷ ಪ್ರವಾಹ ಪರಿಹಾರವನ್ನೂ ನೀಡಲಿಲ್ಲ. ನಮ್ಮ ಬೇಡಿಕೆಗೆ ಸ್ಪಂದಿಸದಿದ್ದಾಗ ನ್ಯಾಯಾಲಯದ ಮೊರೆ ಹೋಗಿ ಪರಿಹಾರ ಪಡೆದುಕೊಳ್ಳುವ ಸ್ಥಿತಿ ನಿರ್ಮಾಣವಾಯಿತು ಎಂದರು.

ಮಾನವ–ಜಾನುವಾರು ಜೀವ ಹಾನಿಗಳಿಗೆ ಶೇ.100ರಷ್ಟು ಪರಿಹಾರ ಒದಗಿಸಿರುವ ರೀತಿಯಲ್ಲೇ ಅತಿವೃಷ್ಟಿಯಿಂದ ಬೆಳೆ ಹಾನಿ ಕುರಿತ ಜಂಟಿ ಸಮೀಕ್ಷೆ ನಂತರ ಸಮರ್ಪಕ ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಕಳೆದ ಬಾರಿಗಿಂತ ಈ ಬಾರಿ ಉತ್ತಮ ಮಳೆ ಆಗಿದೆ, ವಾಡಿಕೆಗಿಂತ ಶೇ.17ರಷ್ಟು ಮಳೆ ಹೆಚ್ಚಾಗಿದೆ, 37 ಮಾನವ ಜೀವ ಹಾನಿ ಪ್ರಕರಣಗಳು ವರದಿಯಾಗಿದ್ದು, ಪರಿಹಾರ ವಿತರಿಸಲಾಗಿದೆ. ಜಾನುವಾರು ಪ್ರಾಣ ಹಾನಿಯು 175 ಪ್ರಕರಣ ವರದಿಯಾಗಿವೆ, ಎಲ್ಲದಕ್ಕೂ ಪರಿಹಾರ ನೀಡಲಾಗಿದೆ. ಸಂಪೂರ್ಣ ಹಾಗೂ ಭಾಗಶಃ ಮನೆ ಹಾನಿ ಪ್ರಕರಣಗಳಲ್ಲೂ ಪರಿಹಾರ ಒದಗಿಸಲಾಗಿದೆ ಎಂದರು.

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನಿರಂತರ ಮಳೆಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಭಾರೀ ಮಳೆಯಿಂದಾಗಿ ಬೆಳೆ ಹಾನಿ ಜಂಟಿ ಸಮೀಕ್ಷೆಗೆ ಅಡ್ಡಿಯಾಗುತ್ತಿದೆ, ನಿಗದಿತ ಅವಧಿಯೊಳಗೆ ಸಮೀಕ್ಷೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ, ಮಳೆ ನಿಂತ ಬಳಿಕ ಎಂಟತ್ತು ದಿನಗಳಲ್ಲಿ ಸಮೀಕ್ಷೆ ಮುಗಿಯಲಿದೆ ಎಂದರು.

ಖ್ಯಾತ ಗಾಯಕರಿಂದ ಸಂಗೀತ ರಸಧಾರೆ

ಸಂಗೀತದ ಮೋಡಿಯಲ್ಲಿ ಯುವ ಜನರನ್ನು ರಂಜಿಸಲಿದ್ದಾರೆ. ಪ್ರತಿದಿನ ಸಂಜೆ 5.30ರಿಂದ ರಾತ್ರಿ 10.30 ರವರೆಗೆ ಈ ಸಂಗೀತ ಸಡಗರ ಕಳೆಗಟ್ಟಲಿದೆ. ಸೆ.23ರಂದು ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ. ಮೊದಲ ದಿನ ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತದ ಹೊನಲು ಸೂಸಲಿದೆ. ಬಳಿಕ ಖ್ಯಾತ ಗಾಯಕರ ತಂಡ 'ಲಗೋರಿ ಬ್ಯಾಂಡ್'ನಿಂದ ಸಂಗೀತದ ರಸಧಾರೆ ಹರಿಯಲಿದೆ.

ಸೆ.24ರಂದು ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕರೂ ಆದ ಗಾಯಕ ಪ್ರೀತಮ್ ಹಾಗೂ ಖ್ಯಾತ ಗಾಯಕ ಶೋರ್ ಪೊಲೀಸ್‌ನಿಂದ ಕಾರ್ಯಕ್ರಮಗಳು ನಡೆಯಲಿದ್ದು, ಅಬ್ಬರದ ಸಂಗೀತದಲ್ಲಿ ಸ್ವರರಾಗಗಳು ಮೇಳೈಸಲಿವೆ. 25ರಂದು ಬಾಲಿವುಡ್ ಹಿನ್ನೆಲೆ ಗಾಯಕ ಜುಬಿನ್ ನೌಟಿಯಲ್ ಹಾಗೂ ಖ್ಯಾತ ಗಾಯಕ ಶ್ರೀರಾಮಚಂದ್ರ ಕಾರ್ಯಕ್ರಮ ನೀಡಲಿದ್ದು, ಸಂಗೀತದ ಹೊನಲು ಸೂಸಲಿದ್ದಾರೆ.

ಸೆ.26ರಂದು ಖ್ಯಾತ ಸಂಗೀತ ನಿರ್ದೇಶಕರೂ ಆದ ಗಾಯಕ ದೇವಿಶ್ರೀ ಪ್ರಸಾದ್ (ಡಿಎಸ್‌ಪಿ) ಹಾಗೂ ಖ್ಯಾತ ಗಾಯಕ ಆಸೀಸ್ ಕೌರ್ ಅವರು ಕಾರ್ಯಕ್ರಮ ನೀಡಲಿದ್ದು, ಸೆ.27ರಂದು ಖ್ಯಾತ ಬಾಲಿವುಡ್ ಹಿನ್ನೆಲೆ ಗಾಯಕಿ ಸುನಿಧಿ ಚೌಹಾಣ್ ತಮ್ಮ ಕಂಠಸಿರಿಯಲ್ಲಿ ಯುವ ಪಡೆಯ ಎದೆಗೆ ಲಗ್ಗೆ ಇಡಲಿದ್ದಾರೆ. ಬಳಿಕ ಖ್ಯಾತ ಗಾಯಕರ ತಂಡ 'ಬೆಸ್ಟ್ ಕೆಪ್ಟ್ ಸಿಕ್ರೇಟ್' ವತಿಯಿಂದ ಕಾರ್ಯಕ್ರಮ ಯುವ ಜನರನ್ನು ಸಂಗೀತದ ಸಡಗರದಲ್ಲಿ ತೇಲಿಸಲಿದೆ.

ಟಿಕೆಟ್ ಜೊತೆಗೆ ಉಚಿತ ಪ್ರವೇಶವೂ ಇದೆ: ಯುವ ದಸರಾ ವೀಕ್ಷಣೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಇದರ ಜೊತೆಗೆ ಪ್ರತ್ಯೇಕವಾಗಿ 5 ಸಾವಿರ ಮತ್ತು 2.5 ಸಾವಿರ ರೂ. ಟಿಕೆಟ್‌ಗಳ ಆಸನ ವ್ಯವಸ್ಥೆ ಸಹ ಕಲ್ಪಿಸಲಾಗಿದೆ. 'ಬುಕ್ ಮೈಶೋ (BookMyShow)'ನಲ್ಲಿ ಟಿಕೆಟ್ ಕಾಯ್ದಿರಿಸಬಹುದು. ಸಾರ್ವಜನಿಕರ ಅನುಕೂಲಕ್ಕಾಗಿ ಮೈಸೂರು ನಗರದ ವಿವಿಧ ಕಡೆಗಳಿಂದ ಬಸ್‌ಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಯುವ ದಸರಾ ಉಪ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಆಯೋಗ ಸಜ್ಜು



ಬೆಂಗಳೂರು, ಸೆ.17– ಕರ್ನಾಟಕದಲ್ಲೂ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಗೆ ರಾಜ್ಯ ಚುನಾವಣಾ ಆಯೋಗ ಸಂಪೂರ್ಣ ಸಜ್ಜಾಗಿದೆ. ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ರಾಜ್ಯದಲ್ಲೂ ಪ್ರಕ್ರಿಯೆ ಆರಂಭವಾಗಲಿದೆ.

ಪೌರತ್ವ ಕಾಯಿದೆ ಪ್ರಕಾರ ರಾಜ್ಯದಲ್ಲಿ ಎಲ್ಲಾ ಅರ್ಹ ನಾಗರಿಕರ ಹೆಸರನ್ನು ಮತದಾರ ಪಟ್ಟಿಯಲ್ಲಿ ಸೇರಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು ಮತ್ತು ಅನರ್ಹರನ್ನು ಪಟ್ಟಿಯಿಂದ ತೆಗೆದು ಹಾಕುವುದು ಎಸ್‌ಐಆರ್‌ನ ಮುಖ್ಯ ಉದ್ದೇಶ. ಹೀಗಾಗಿ ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್‌ಐಆರ್‌ಗೆ ಸಿದ್ಧತೆ ನಡೆಸಿದ್ದು, ಸೆ.25ಕ್ಕೆ ತಯಾರಿ ಪೂರ್ಣಗೊಳ್ಳಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಬುಧವಾರ ನಡೆದ ಮಾಧ್ಯಮ ಕಾರ್ಯಾಗಾರದಲ್ಲಿ ಮಾಹಿತಿ ನೀಡಿದರು.

ರಾಜ್ಯದಲ್ಲಿ 2002ರಲ್ಲಿ ಎಸ್‌ಐಆರ್ ನಡೆದಿತ್ತು. 23 ವರ್ಷಗಳ ನಂತರ ವಿಶೇಷ ಪರಿಷ್ಕರಣೆಗೆ ನಿರ್ಧರಿಸಲಾಗಿದೆ. 2002ರ ಎಸ್‌ಐಆರ್‌ಗೆ ಸಂಬಂಧಿಸಿದ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಎರಡೂವರೆಯಿಂದ 3 ತಿಂಗಳೊಳಗೆ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಹೊಸ ಮತದಾರ ಪಟ್ಟಿ ಪ್ರಕಟಿಸಲಾಗುವುದು. ಅದರಲ್ಲಿರುವ ಮತದಾರರು ಪ್ರಸ್ತುತ ಪಟ್ಟಿಯಲ್ಲಿದ್ದಾರೆಯೇ, ಇಲ್ಲವೋ ಎಂಬುದನ್ನು ಖಚಿತಪಡಿಸಲಾಗುವುದು. ಪ್ರಕ್ರಿಯೆ ಆರಂಭವಾದ ನಂತರ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪ್ರತಿ ಮನೆ–ಮನೆಗೆ ತೆರಳಿ, ಪರಿಷ್ಕರಣೆ ಮಾಡಲಿದ್ದಾರೆ ಎಂದರು.

ರಾಜ್ಯದಲ್ಲಿಒಟ್ಟು 58 ಸಾವಿರ ಮತಗಟ್ಟೆಗಳಿವೆ. ಎಸ್‌ಐಆರ್‌ಗೆ 25 ಸಾವಿರ ಬಿಎಲ್‌ಒಗಳಿದ್ದು, ಅವರಿಗೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಪ್ರತಿ 10 ಬಿಎಲ್‌ಗಳಿಗೆ ಒಬ್ಬರಂತೆ ಮೇಲ್ವಿಚಾರಕ ಅಧಿಕಾರಿ ಇರಲಿದ್ದಾರೆ. ಹಳ್ಳಿಗಳಲ್ಲಿ ಗ್ರಾಪಂ ಮಟ್ಟದಲ್ಲಿ ಹಾಗೂ ನಗರ ಪ್ರದೇಶದ ವಾರ್ಡ್ ಮಟ್ಟದಲ್ಲಿ ಬಿಎಲ್‌ಒಗಳಿಗೆ ಸಹಾಯ ವಾಗುವಂತೆ ಕ್ಯಾಂಪ್ ಹಾಕಲಾಗುವುದು. ಬಿಎಲ್‌ಓ ಕ್ಯೂಆರ್ ಕೋಡ್ ಆಧಾರಿತ ತಂತ್ರಾಂಶ ನೀಡಲಾಗಿದ್ದು, ಸ್ಕ್ಯಾನ್ ಮಾಡಿ ಮಾಹಿತಿ ಸಂಗ್ರಹಿಸಲು ಸಹಾಯಕವಾಗಲಿದೆ ಎಂದು.

ಚುನಾವಣಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಗೌರವಧನವನ್ನು 6 ಸಾವಿರ ರೂ.ನಿಂದ 12 ಸಾವಿರಕ್ಕೆ ಹೆಚ್ಚಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಎಲ್‌ಒಗಳಿಗೆ ಹೆಚ್ಚುವರಿಯಾಗಿ 6 ಸಾವಿರ ರೂ. ನೀಡಲು ಆಯೋಗ ನಿರ್ಧರಿಸಿದೆ. ಬೂತ್ ಮಟ್ಟದಲ್ಲಿ ಪರಿಷ್ಕರಣೆಗೆ ಪ್ರತಿ ಬಿಎಲ್‌ಒಗಳಿಗೆ 30 ದಿನಗಳ ಕಾಲಾವಕಾಶವಿರಲಿದೆ ಎಂದರು.

ಬನ್ನಿಮಂಟಪ ಮೈದಾನದಲ್ಲಿ ಏರ್ ಶೋ, ಡ್ರೋನ್ ಶೋ, ಪಂಜಿನ ಕವಾಯತು ಪ್ರದರ್ಶನ

ಮೈಸೂರು,ಸೆ.17(ಪಿಎಂ)–ದಸರಾ ಪ್ರಯುಕ್ತ ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ವೈಮಾನಿಕ ಪ್ರದರ್ಶನ (ಏರ್ ಶೋ), ಡ್ರೋನ್ ಶೋ ಹಾಗೂ ಪಂಜಿನ ಕವಾಯತು ಪ್ರದರ್ಶನ ಆಯೋಜಿಸಲಾಗಿದೆ. ಸೆ.27ರಂದು ಸಂಜೆ 4ಕ್ಕೆ ವೈಮಾನಿಕ ಪ್ರದರ್ಶನ, ಸೆ.28 ಮತ್ತು 29ರಂದು ಸಂಜೆ 6ಕ್ಕೆ ಡ್ರೋನ್ ಶೋ ನಡೆಯಲಿದೆ. ಅ.1ರಂದು ಸಂಜೆ 4ಕ್ಕೆ ವೈಮಾನಿಕ ಪ್ರದರ್ಶನ ಹಾಗೂ ಪಂಜಿನ ಕವಾಯತು ಪೂರ್ವಾಭ್ಯಾಸ ಕಾರ್ಯಕ್ರಮ ನಡೆಯಲಿದ್ದು, ಅ.2ರಂದು ಸಂಜೆ 6ಕ್ಕೆ ಪಂಜಿನ ಕವಾಯತು ಪ್ರದರ್ಶನ ಜರುಗಲಿದೆ. ಬನ್ನಿಮಂಟಪ ಮೈದಾನದಲ್ಲಿ ಆಸನಗಳ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರ ಹಿತದೃಷ್ಟಿಯಿಂದ ಕಾರ್ಯಕ್ರಮ ವೀಕ್ಷಣೆಗೆ ಆಯಾ ದಿನಗಳಿಗೆ ಸೀಮಿತವಾಗಿ ಪಾಸ್‌ಗಳನ್ನು ವಿತರಿಸಲಾಗುವುದು. ಬನ್ನಿಮಂಟಪದಲ್ಲಿ ನಡೆಯುವ ಕಾರ್ಯಕ್ರಮ ಸಂಬಂಧ ಒಳಾಂಗಣ ಪ್ರಾಂಗಣಕ್ಕೆ ಪಾಸ್‌ಗಳನ್ನು ಹೊಂದಿದವರಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರ ಸುರಕ್ಷತೆ ಹಾಗೂ ಬನ್ನಿಮಂಟಪ ಮೈದಾನದ ಮಿತ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಪಾಸ್ ಇಲ್ಲದವರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ದಸರಾ ವಿಶೇಷಾಧಿಕಾರಿ, ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದುಬೈನಲ್ಲಿ ಸರ್ಜನ್ಸ್‌ನ 5ನೇ ಅಂತರರಾಷ್ಟ್ರೀಯ ಸಮ್ಮೇಳನ

ಅಪೋಲೋ ಆಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ನೈರುತ್ಯ ಶಿವತೀರ್ಥನ್ ಭಾಗಿ

ಪಿಯೋನೇರಿಂಗ್ ಸರ್ಜಿಕಲ್ ಟೆಕ್ನಿಕ್ ಕುರಿತು ವಿಚಾರ ಮಂಡನೆ



ಮೈಸೂರು,ಸೆ.17(ಪಿಎಂ)–ದುಬೈನ ರಾಫೆಲ್ಸ್ ಹೋಟೆಲ್‌ನಲ್ಲಿ ಸೆ.12 ಮತ್ತು 13ರಂದು ಆಯೋಜಿಸಿದ್ದ ಅಮೇರಿಕನ್ ಕಾಲೇಜ್ ಆಫ್ ಸರ್ಜನ್ಸ್‌ನ (ಯುಎಇ ಘಟಕ) 5ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನದ ಮೇರೆಗೆ ಭಾಗವಹಿಸಿದ್ದ ಅಪೋಲೋ ಬಿಜಿಎಸ್ ಆಸ್ಪತ್ರೆಯ ಮುಖ್ಯ ಜಿಐ ಮತ್ತು ಹೆಚ್‌ಪಿಬಿ ಶಸ್ತ್ರಚಿಕಿತ್ಸಕ ಡಾ.ನೈರುತ್ಯ ಶಿವತೀರ್ಥನ್ ಅವರು 'ಪಿಯೋನೇರಿಂಗ್ ಸರ್ಜಿಕಲ್ ಟೆಕ್ನಿಕ್' ಕುರಿತು ವಿಚಾರ ಮಂಡಿಸಿದ್ದಾರೆ.

ಸಿಂಗಲ್ ಸ್ಟೇಜ್ ಡಬಲ್ ಬೈಪಾಸ್ ಇನ್ ಕ್ರೋನಿಕ್ ಕ್ಯಾಲ್ಸಿಫಿಕ್ ಪ್ಯಾಂಕ್ರಿಯಾ ಟೈಟಿಸ್ ವಿತ್ ಪೋರ್ಟಲ್ ಬಿಲಿಯೋಪತಿ ವಿತ್ ಬಿಲಿಯರಿ ಸ್ಟ್ರಿಕ್ಚರ್ ಇನ್ ಎ ನಾನ್‌ಶಟಬಲ್ ಅನಾಟಮಿ' ಕುರಿತು ನಡೆದ ಹೆಪಟೊ ಪಿತ್ತರಸ ಶಸ್ತ್ರಚಿಕಿತ್ಸೆಯ ಗೋಷ್ಠಿಯಲ್ಲಿ ಡಾ.ನೈರುತ್ಯ ಶಿವತೀರ್ಥನ್ ವಿಚಾರ ಮಂಡಿಸಿದ್ದಾರೆ. ಈ ವಿಚಾರವು ನೂತನ ವಿಧಾನವಾಗಿದ್ದು, ಇದು ಪೋರ್ಟಲ್ ಬಿಲಿಯೋಪತಿ, ಪಿತ್ತರಸ ತೀವ್ರತರವಾಗಿ ಜಂಟಿಗೊಂಡ ದೀರ್ಘಕಾಲದ ಕ್ಯಾಲ್ಸಿಫಿಕ್ ಪ್ಯಾಂಕ್ರಿಯಾಟೈಟಿಸ್‌ನ ಸಂಕೀರ್ಣ ಪ್ರಕರಣಗಳಿಗೆ ಒಂದೇ ಹಂತದ ಶಸ್ತ್ರಚಿಕಿತ್ಸಾ ತಂತ್ರ ಒಳಗೊಂಡಿದೆ. ಈ ವಿಧಾನದ ಮೂಲಕ ಶಸ್ತ್ರಚಿಕಿತ್ಸೆಯ ಫಲಿತಾಂಶದಲ್ಲಿ ಸುಧಾರಣೆ ತರಬಹುದು. ಜೊತೆಗೆ ತೊಡಕುಗಳನ್ನು ಕಡಿಮೆ ಮಾಡಬಹುದು ಎಂದು ತಿಳಿಸಿದ್ದಾರೆ.

ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣ ವಜಾ

ಬೆಂಗಳೂರು: ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ. ನನ್ನ ವಿರುದ್ಧ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಬೇಕು ಎಂದು ಕೋರಿ ಮುನಿರತ್ನ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಈ ಪ್ರಕರಣದಲ್ಲಿ ಮುನಿರತ್ನ ಸೇರಿದಂತೆ ನಾಲ್ವರ ವಿರುದ್ಧ ವಿಶೇಷ ತನಿಖಾ ದಳ (ಎಸ್‌ಐಟಿ) ವಿಚಾರಣಾ ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಿರುವುದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿತು.

ಮೈಸೂರು ದಸರಾ ಮಹೋತ್ಸವ-2025

ಯುವ ಸಂಭ್ರಮದಲ್ಲಿ 'ಸರ್ಕಾರದ ಗ್ಯಾರಂಟಿಗಳ' ಸಡಗರ

●ಗ್ಯಾರಂಟಿಗಾಗಿಯೇ ನೃತ್ಯ ಸಂಯೋಜಿಸಿ, ನೃತ್ಯ ಪ್ರದರ್ಶಿಸಿ ಮೆಚ್ಚುಗೆ ಪಡೆದ ಯುವ ತಂಡ ●ಕರ್ನಾಟಕದ ವೈಭವಕ್ಕೆ ಸಾಕ್ಷಿಯಾದ ನೃತ್ಯರೂಪಕ





ಕೃಷಿ ಚಟುವಟಿಕೆ ವೈಶಿಷ್ಟ್ಯವನ್ನು ಅನಾವರಣಗೊಳಿಸಿದ ಡಿ.ಬಿ.ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು. ಮತ್ತೊಂದು ಚಿತ್ರದಲ್ಲಿ ವಿದ್ಯಾ ವಿಕಾಸ್ ಬಿ.ಎಡ್ ಕಾಲೇಜು ವಿದ್ಯಾರ್ಥಿಗಳಿಂದ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹೋರಾಟ ಕುರಿತಾದ ನೃತ್ಯ ಪ್ರದರ್ಶನ



ಗಮನ ಸೆಳೆದ ಸ್ಪ್ಯಾಪಿ ಡ್ಯಾನ್ಸ್



ಯಳಂದೂರಿನ ಶ್ರೀ ವೈ.ಎಂ.ಮಲ್ಲಿಕಾರ್ಜುನಸ್ವಾಮಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಕುರಿತು ವಿಶೇಷ ನೃತ್ಯ ರೂಪಕ

ಮೈಸೂರು, ಸೆ.17(ವಿವಿಹೆಚ್)– ರಾಜ್ಯದ ಬಡವರು, ಮಹಿಳೆಯರು, ವಿದ್ಯಾರ್ಥಿಗಳ ಸಬಲೀಕರಣಕ್ಕೆ ರೂಪಿಸಿದ ಮಹತ್ವಾಕಾಂಕ್ಷಿ ವಿಶೇಷ ಯೋಜನೆಯಾದ ಪಂಚ ಗ್ಯಾರಂಟಿಗಳು ದಸರಾ ಯುವ ಸಂಭ್ರಮದಲ್ಲಿ ಭರ್ಜರಿ ಪ್ರಚಾರ ಪಡೆಯುತ್ತಿವೆ. ವಿದ್ಯಾರ್ಥಿ ಸಮೂಹ ನೃತ್ಯ ಪ್ರದರ್ಶನದ ಮೂಲಕ ಇವುಗಳ ಮಹತ್ವವನ್ನು ಸಾರಿದರು.

ಮಾನಸ ಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ಬುಧವಾರ ನಡೆದ ದಸರಾ 'ಯುವ ಸಂಭ್ರಮ'ದ 8ನೇ ದಿನದ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲೆ ಯಳಂದೂರಿನ ಶ್ರೀ ವೈ.ಎಂ.ಮಲ್ಲಿಕಾರ್ಜುನ ಸ್ವಾಮಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಕುರಿತು ವಿಶೇಷ ನೃತ್ಯ ರೂಪಕ ಸಾದರಪಡಿಸಿದರು. ನೃತ್ಯದ ಕೊನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವೇಷ ಧರಿಸಿ ಬಂದ ವಿದ್ಯಾರ್ಥಿಗಳು ಯುವ ಸಮೂಹದಿಂದ ಭರ್ಜರಿ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಂಡರು.

ಇದರ ಜೊತೆಗೆ ರಾಜ್ಯದ ನಾನಾ ಭಾಗಗಳಿಂದ ಬಂದ 59 ಕಾಲೇಜು ವಿದ್ಯಾರ್ಥಿಗಳ ತಂಡ ಕರ್ನಾಟಕ ಗತ ವೈಭವ, ದೇಶಭಕ್ತಿ, ಜಾನಪದ ಸೊಗಡು, ಕರ್ನಾಟಕ ಪೊಲೀಸ್, ದೇಶದ ಸೈನಿಕರು ಯುದ್ಧ ಭೂಮಿಯಲ್ಲಿ ಎದುರಿಸುತ್ತಿರುವ ಸವಾಲುಗಳು, ಕನ್ನಡ ಸಾಹಿತ್ಯ ಪರಂಪರೆ, ಸರ್ಕಾರದ ಪಂಚ ಗ್ಯಾರಂಟಿ ಯೋಜನೆ, ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀಡಿದ ಕೊಡುಗೆಗಳು, ವಾಕಿಂಗ್ ರೋಬೋ ಡ್ಯಾನ್ಸ್, ಮಹಾಭಾರತ-ರಾಮಾಯಣದ ಪ್ರಮುಖ ಅಂಶಗಳ ಅನಾವರಣ, ಸುಗ್ಗಿಮನೆ, ಹುಲಿ ವೇಷ ನೃತ್ಯ ವೈಭವ ಸಾದರಪಡಿಸುವ ಮೂಲಕ ಪ್ರೇಕ್ಷಕ ಮಹೋದಯರನ್ನು ರಂಜಿಸುವಲ್ಲಿ ಯಶಸ್ವಿಯಾದರು.

ಚಾಮರಾಜನಗರದ ಸುವರ್ಣ ಗಂಗೋತ್ರಿ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಶಿವ ತಾಂಡವ ನೃತ್ಯ ರೂಪಕ 'ಶಿವ ಶಿವ ಶಂಕರ' ಹಾಡಿಗೆ ಭರ್ಜರಿ ಮೆಚ್ಚುಗೆ ಪಡೆದರು. ಮಂಡ್ಯ ಜಿಲ್ಲೆಯ ಸುಂಡಹಳ್ಳಿ ಕಾವೇರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ವಿದ್ಯಾರ್ಥಿನಿಯರ ಕರ್ನಾಟಕ ಪೊಲೀಸರ ಸೇವೆ ಕುರಿತ ನೃತ್ಯ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಮದ್ದೂರಿನ ಹೆಚ್.ಕೆ ವೀರಣ್ಣಗೌಡ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಮಾಯಣ ಕಥಾಹಂದರದ ನೃತ್ಯ ಪ್ರದರ್ಶನಕ್ಕೆ ಯುವ ಸಮೂಹ ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು.

ಬೆಂಗಳೂರಿನ ಮತ್ತಿಕೆರೆಯ ರಾಯಲ್ ಪಿಯು ಕಾಲೇಜು ವಿದ್ಯಾರ್ಥಿಗಳಿಂದ ಕನ್ನಡ ಜಾನಪದ ಕಲಾ ಪ್ರಕಾರಗಳು ಅನಾವರಣಗೊಂಡವು. ಗಡಿನಾಡ ಮಾದಪ್ಪನ ಹಾಡಿಗೆ ಹೆಜ್ಜೆ ಹಾಕಿದ ಈ ತಂಡ ಡೊಳ್ಳು, ಕಂಸಾಳೆ, ಪೂಜಾ-ಪಟ್ಟದ ಕುಣಿತ ಸೇರಿದಂತೆ ಎಲ್ಲಾ ಜಾನಪದ ನೃತ್ಯಗಳನ್ನು ಪ್ರದರ್ಶಿಸಿ, ಮೆಚ್ಚುಗೆ ಗಳಿಸಿದರು.

ಸ್ಪ್ಯಾಪಿ ಡ್ಯಾನ್ಸ್‌ಗೆ (ವಾಕಿಂಗ್ ರೋಬೋ ಡ್ಯಾನ್ಸ್) ಫಿದಾ ಆದ ಪ್ರೇಕ್ಷಕ: ಕುಂಟೆಬಿಲ್ಲೆ ಚಿತ್ರತಂಡ ಸ್ಪ್ಯಾಪಿ ಹೆಸರಿನ ವಿಶೇಷವಾದ ರೋಬೋ (ನಾಯಿಯ ಮಾದರಿಯ ರೋಬೋಟ್)ವನ್ನು ಪರಿಚಯಿಸಿದರು. ಈ ರೋಬೋ ಜಾಲಿ-ಜಾಲಿ ಹಾಡಿಗೆ ಸಖತ್ ಸ್ಟೆಪ್ಸ್ ಹಾಕಿತು. ಹಾಡಿನ ಬೀಟ್ಸ್‌ಗೆ ತಕ್ಕಂತೆ ಹೆಜ್ಜೆಹಾಕಿದ ರೋಬೋ ನೋಡುಗರ ಮೋಡಿ ಮಾಡಿತು. ಜಾಲಿ ನೃತ್ಯ ನೋಡಿದ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ವುಶುಪಟು ಪುಟ್ಟಪೋರಿ ಪ್ರಣತಿಗೆ ಸನ್ಮಾನ

ಮೈಸೂರಿನ ಗಾಯತ್ರಿಪುರಂನ ಪ್ರತಿಭಾವಂತ ವುಶು ಕ್ರೀಡಾಪಟು ಪ್ರಣತಿ ಜಿ. ಅವರಿಗೆ ಯುವ ಸಂಭ್ರಮದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿ, ಎಲ್ಲರಿಗೂ ದಸರಾ ಹಬ್ಬದ ಶುಭಾಶಯ ಕೋರಿದರು. ಬಳಿಕ ತಾವು ಕಲಿತಿರುವ ವಿದ್ಯೆಯ ಝಲಕ್ ಪ್ರದರ್ಶಿಸಿದರು. ಬಾಲಕಿ ಪ್ರತಿಭಾ ಪ್ರದರ್ಶನಕ್ಕೆ ಇಡೀ ಬಯಲು ರಂಗಮಂದಿರವೇ ಶಹಭಾಷ್‌ಗಿರಿ ನೀಡಿತು.

ಪ್ರಣತಿ 2025ರ ಬಟುಮಿ ಓಪನ್ ಇಂಟರ್‌ನ್ಯಾಷನಲ್ ವುಶು ಟೂರ್ನಮೆಂಟ್‌ನಲ್ಲಿ 9-11 ವರ್ಷದ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ದೇಶದ ಅತೀ ಕಿರಿಯ ಬಾಲಕಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.



ಮಳವಳ್ಳಿಯ ಶಾಂತಿ ಪದವಿಪೂರ್ವ ಕಾಲೇಜು ತಂಡದ ವತಿಯಿಂದ ಜೈ ಜವಾನ್-ಜೈ ಕಿಸಾನ್ ನೃತ್ಯ ಸಾದರಪಡಿಸಲಾಯಿತು.

ಇಂದು ಯುವ ಸಂಭ್ರಮಕ್ಕೆ ವರ್ಣರಂಜಿತ ತೆರೆ

ಮೈಸೂರು ದಸರಾ ಮಹೋತ್ಸವ-2025ರ ಅಂಗವಾಗಿ ಇದೇ ಸೆ.10 ರಿಂದ 18 ವರೆಗೆ 9 ದಿನಗಳ ಕಾಲ ಆಯೋಜಿಸಲಾಗಿರುವ 'ಯುವ ಸಂಭ್ರಮ-2025'ಕ್ಕೆ ನಾಳೆ(ಗುರುವಾರ) ಅದ್ಧೂರಿ ತೆರೆ ಬೀಳಲಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಉಪಸ್ಥಿತಿಯಲ್ಲಿ ಯುವ ಸಂಭ್ರಮ ಸಮಾರೋಪಗೊಳ್ಳಲಿದೆ.

ಅವ್ಯವಸ್ಥೆ, ಅಧ್ವಾನದ ನಡುವೆ ಸಂಭ್ರಮ

ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಆಯೋಜಿಸಿರುವ 'ಯುವ ಸಂಭ್ರಮ' ಕಾರ್ಯಕ್ರಮದಲ್ಲಿ ಅಧಿಕಾರಿ ವರ್ಗಕ್ಕೆ, ಸಮಿತಿಯವರಿಗೆ ಒಂದು ರೂಲ್ಸ್ ಆದರೆ, ಪ್ರೇಕ್ಷಕರಿಗೆ ಮತ್ತೊಂದು ರೂಲ್ಸ್. ಯುವ ಸಂಭ್ರಮ ಉಪಸಮಿತಿ ಸದಸ್ಯರ ಸ್ನೇಹಿತರು, ಕುಟುಂಬಸ್ಥರಿಗೆ, ಎಲ್ಲಕಿಂತ ಮಿಗಿಲಾಗಿ ಸರ್ಕಾರಿ ಅಧಿಕಾರಿಗಳ ಕುಟುಂಬಸ್ಥರಿಗಾಗಿಯೇ ಈ ಕಾರ್ಯಕ್ರಮ ಆಯೋಜನೆಯಾಗಿತ್ತೇನೋ ಎಂಬಂತಿತ್ತು.

ಮೀಡಿಯಾ ಗ್ಯಾಲರಿಯಲ್ಲಿ ಮಾಧ್ಯಮದವರಿಗೆ ಜಾಗವಿಲ್ಲದೇ ಪೊಲೀಸರು, ಆಯೋಜಕರ ಸ್ಥಳಾವಕಾಶಕ್ಕಾಗಿ ಮೊರೆ ಹೋಗುವ ಶೋಚನೀಯ ಸ್ಥಿತಿ ಉಂಟಾಗಿತ್ತು. ಅಧಿಕಾರಿಗಳು, ಅವರ ಕುಟುಂಬಸ್ಥರಿಗೆ ಎಲ್ಲಾ ಸೌಕರ್ಯಗಳನ್ನು ನೀಡಿ ಮಾಧ್ಯಮದವರನ್ನು ಕಡೆಗಣಿಸಿದ್ದು, ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿತ್ತು.

ಮೀಡಿಯಾ ಗ್ಯಾಲರಿಯಲ್ಲಿ ಕಾರ್ಯಕ್ರಮದ ತೀರ್ಪುಗಾರರಿಗೆ ಅನುವು ಮಾಡಿಕೊಡಲಾಗಿದ್ದು, ಅವರೊಂದಿಗೆ ಅವರ ಕುಟುಂಬಸ್ಥರು ಬಂದು ಠಿಕಾಣಿ ಹೂಡಿದ್ದರು. ಪ್ರತಿದಿನ ಗದ್ದಲಗಳ ನಡುವೆಯೇ ನಿಂತು ಸುದ್ದಿ ಮಾಡುವ ಹೀನಾಯ ಸ್ಥಿತಿ ಮಾಧ್ಯಮದವರದ್ದು. ಮತ್ತೊಂದೆಡೆ ಪೊಲೀಸರ ಕಿರಿಕಿರಿ. ಐಡಿ ತೋರಿಸಿದರೂ ಲೆಕ್ಕಿಸದೇ ತಳ್ಳಿದ್ದು, ಅಬ್ಬರಿಸಿದ್ದು ಮುಂದುವರೆಯಿತು. ದಸರಾ ಉತ್ಸವ ಆರಂಭದ ಮೊದಲೇ ಇಷ್ಟು ನಿರ್ಲಕ್ಷ್ಯ ವಹಿಸಿದರೆ, ದಸರಾ ವೇಳೆಗೆ ಮಾಧ್ಯಮದವರ ಸ್ಥಿತಿಯೇನು ಎಂಬುದು ಮತ್ತೊಂದು ಬೇಸರದ ಪ್ರಶ್ನೆಯಾಗಿದೆ.

ಯುವ ಸಂಭ್ರಮ ಉಪ ಸಮಿತಿಯಲ್ಲಿ ಅತೀ ಕಿರಿಯರು: ಯುವ ಸಂಭ್ರಮ ಉಪಸಮಿತಿಗೆ ಕಾಲೇಜು, ಸ್ನಾತಕೋತ್ತರ, ಪಿಎಚ್.ಡಿ ಪದವೀಧರರನ್ನು ಸದಸ್ಯರನ್ನಾಗಿ, ಆಡಳಿತ ಪಕ್ಷ ತಮಗೆ ಬೇಕಾದವರಿಗೆ ಸ್ಥಾನ ನೀಡಿದೆ ಇಡೀ ರಾಜ್ಯವೇ ನೋಡುವ ಮೈಸೂರು ದಸರಾ ಕಾರ್ಯಕ್ರಮಗಳಿಗೆ ಒಂದು ಘನತೆ ಇದೆ. ಅದಕ್ಕೆ ಅರ್ಹರನ್ನು ಆಯ್ಕೆ ಮಾಡದೇ ಇರುವುದು ಈ ಅವ್ಯವಸ್ಥೆಯ ಗೊಂದಲಕ್ಕೆ ಕಾರಣ. ಪ್ರಶ್ನೆ ಮಾಡುವವರನ್ನು ಹತ್ತಿಕ್ಕಲಾಗುತ್ತದೆಯೇ ಹೊರತು, ಪ್ರಶ್ನೆಗೆ ಉತ್ತರ ನೀಡುವ ಕೆಲಸ ಮಾಡುವವರು ಯಾರಿಲ್ಲ ಎಂದು ಹಲವರು ಟೀಕಿಸಿದ್ದಾರೆ.

ವೀಕ್ಷಕರ ಬೇಸರ: ಇತ್ತ ಸಂಗೀತ-ನೃತ್ಯ ನೋಡಲು ಬಂದ ಯುವಕ, ಯುವತಿಯರಿಗೂ ಅತೀವ ಬೇಸರ ತರಿಸಿದೆ. ಪೊಲೀಸರು ನಮ್ಮನ್ನು ಒಳಗೆ ಬಿಡಿ ಎಂದು ಕೇಳಿದ್ದಕ್ಕೆ ಲಾಠಿ ಎತ್ತುತ್ತಾರೆ. ಆದರೆ, ತಮಗೆ ಬೇಕಾದವರನ್ನು ಒಳಗೆ ಬಿಟ್ಟುಕೊಳ್ಳುತ್ತಾರೆ. ಇದನ್ನು ಕೇಳಲು ಯಾರಿಲ್ಲ. ನಾವು ಪ್ರಶ್ನಿಸಿದರೆ ನಮ್ಮ ಮೇಲೆ ಹರಿಹಾಯುತ್ತಾರೆ. ಅಧಿಕಾರ ದುರ್ಬಳಕೆಯಾಗುತ್ತಿದ್ದರೂ ಯಾರೂ ಮಾತನಾಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ವಾಲಿಬಾಲ್ ಕ್ರೀಡೆಯಲ್ಲೂ ಚಾಕಚಕ್ಯತೆ ಮೆರೆದ ಮಾವುತರು, ಕಾವಾಡಿಗರು




ಅರಮನೆ ಆವರಣದಲ್ಲಿ ದಸರಾ ಗಜಪಡೆಯ ಮಾವುತರು, ಕಾವಾಡಿಗಳಿಗಾಗಿ ಆಯೋಜಿಸಿದ್ದ ವಾಲಿಬಾಲ್ ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ ಬಹುಮಾನ ವಿತರಿಸುತ್ತಿರುವುದು.

ಮೈಸೂರು, ಸೆ.17(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಗಜಪಡೆಯ ಮಾವುತರು ಹಾಗೂ ಕಾವಾಡಿಗರು ಆನೆಗಳನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ಕ್ರೀಡಾ ಚಟುವಟಿಕೆಗಳಲ್ಲೂ ಸೈ ಎಂದು ತೋರ್ಪಡಿಸಿದರು.

ಅರಮನೆಯ ಆವರಣದಲ್ಲಿ ದಸರಾ ಆನೆಗಳ ಬಿಡಾರದ ಬಳಿ 'ಸಂಸದರ ಕ್ರೀಡಾ ಮಹೋತ್ಸವ'ದ ಅಂಗವಾಗಿ ಬುಧವಾರ ಮಾವುತರು, ಕಾವಾಡಿಗಳಿಗಾಗಿ ಆಯೋಜಿಸಿದ್ದ ವಾಲಿಬಾಲ್ ಕ್ರೀಡಾಕೂಟದಲ್ಲಿ ದಸರಾ ಗಜಪಡೆ ಮಾವುತರು, ಕಾವಾಡಿಗಳು ಪಾಲ್ಗೊಂಡು, ವಾಲಿಬಾಲ್ ಕ್ರೀಡೆಯಲ್ಲೂ ಚಾಕಚಕ್ಯತೆಯನ್ನು ಪ್ರದರ್ಶಿಸಿ ಗಮನ ಸೆಳೆದರು

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಫಿಟ್ ಇಂಡಿಯಾ ಮತ್ತು ಖೇಲೋ ಇಂಡಿಯಾ ಅಭಿಯಾನದ ಭಾಗವಾಗಿ 'ಸಂಸದರ ಕ್ರೀಡಾ ಮಹೋತ್ಸವ' ಶೀರ್ಷಿಕೆಯಲ್ಲಿ ನಡೆಸಿದ ವಾಲಿಬಾಲ್ ಪಂದ್ಯಾವಳಿಯಲ್ಲಿ ನಾಲ್ಕು ತಂಡಗಳಲ್ಲಿ ಸೆಣೆಸಾಡಿದರು. ದಸರಾ ಆನೆಗಳಾದ ಶ್ರೀಕಂಠ ಮತ್ತು ಭೀಮ, ಏಕಲವ್ಯ ಬಾಯ್ಸ್ ಮತ್ತು ಪ್ರಶಾಂತ ಬಾಯ್ಸ್ ತಂಡಗಳಲ್ಲಿ ಎಲ್ಲಾ ಆನೆ ಮಾವುತರು, ಕಾವಾಡಿಗಳು ಸೇರಿ ಆಟ ಪ್ರದರ್ಶಿಸುವ ಮೂಲಕ ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.



ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಂದ್ಯಾವಳಿಯ ಫೈನಲ್ ಪಂದ್ಯ ಪ್ರವೇಶಿಸಿದ್ದ ಶ್ರೀಕಂಠ ಮತ್ತು ಭೀಮ ತಂಡದ ಆಟಗಾರರನ್ನು ಪರಿಚಯಿಸಿಕೊಂಡು ಶುಭ ಕೋರಿದರು. ಅಲ್ಲದೆ, ಕ್ರೀಡಾಸ್ಫೂರ್ತಿಯಿಂದ ಆಟ ಆಡುವಂತೆ ಸಲಹೆ ನೀಡಿದರು.

ಪಂದ್ಯಾವಳಿಯಲ್ಲಿ ಎರಡು ತಂಡದ ಆಟಗಾರರು ಪೈಪೋಟಿ ಪ್ರದರ್ಶನ ನೀಡಿದರು. ಅಂತಿಮವಾಗಿ ಭೀಮ ತಂಡವನ್ನು ಮಣಿಸಿದ ಶ್ರೀಕಂಠ ತಂಡ ವಿಜಯದ ನಗೆ ಬೀರಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಆರ್‌ಎಫ್ಓ ನದೀಮ್, ವಾಲಿಬಾಲ್ ಕೋಚ್ ರವೀಂದ್ರ, ಕ್ರೀಡಾಪಟುಗಳಾದ ಮಂಜುನಾಥ್, ದರ್ಶನ್, ಸತೀಶ್, ಅನುಶ್ರೀ, ಸೋನಾಕ್ಷಿ ಗಂಗಾ, ರಾಜೇಶ್ವರಿ, ರವೀಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮಾವುತರು, ಕಾವಾಡಿಗರ ಮಕ್ಕಳಿಗೆ ಅಕ್ಷರಾಭ್ಯಾಸ



ಅರಮನೆ ಆವರಣ ಕೋಡಿ ಸೋಮೇಶ್ವರ ದೇವಾಲಯದ ಬಳಿ ಗಜಪಡೆ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಆಯೋಜಿಸಿದ್ದ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿದರು.

ಮೈಸೂರು,ಸೆ.17(ಎಂಟಿವೈ)– ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಆಯೋಜಿಸಿದ್ದ 'ಅಕ್ಷರಾಭ್ಯಾಸ' ಕಾರ್ಯಕ್ರಮಕ್ಕೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಗಜಪಡೆಯೊಂದಿಗೆ ಆಗಮಿಸಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಮಾವುತರು, ಕಾವಾಡಿಗಳ ಚಿಕ್ಕ ಮಕ್ಕಳಿಗಾಗಿ ಟ್ವಿನ್ಸ್ ಸಿಎಸ್‌ಸಿ ಸೇವಾ ಕೇಂದ್ರ, ಯುನಿಟಿ ಫೌಂಡೇಷನ್, ಗಂಧದ ಗುಡಿ ಫೌಂಡೇಷನ್ ಹಾಗೂ ಸೇವಾ ಸಂಸ್ಥೆಯ ಸಹಯೋಗದಲ್ಲಿ ಕೋಡಿ ಸೋಮೇಶ್ವರ ದೇವಾಲಯದ ಬಳಿ ಆಯೋಜಿಸಿದ್ದ ಅಕ್ಷರಾಭ್ಯಾಸದಲ್ಲಿ 5 ವರ್ಷದೊಳಗಿನ 20ಕ್ಕೂ ಹೆಚ್ಚು ಮಕ್ಕಳಿಗೆ ಶಾಸ್ತ್ರೋಕ್ತವಾಗಿ ಅಕ್ಷರಾಭ್ಯಾಸ ಮಾಡಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಲು ಬಂದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕೋಡಿ ಸೋಮೇಶ್ವರ, ಕೋಡಿ ಕಾಲಭೈರವೇಶ್ವರ ದೇವಾಲಯಕ್ಕೆ ತೆರಳಿ ದರ್ಶನ ಪಡೆದರು. ನಂತರ ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ನಡೆದ ಅಕ್ಷರಾಭ್ಯಾಸದಲ್ಲಿ ಗಣಪತಿ ಪೂಜೆ, ಸರಸ್ವತಿ ಪೂಜೆ, ಗಾಯತ್ರಿ ದೇವಿ ಪೂಜೆ ಮಾಡಲಾಯಿತು. ನಂತರ ಮಕ್ಕಳಿಗೆ ನೀಡಿದ್ದ ಎಲ್ಲಾ ಸ್ಲೇಟ್‌ಗಳ ಮೇಲೆ 'ಓಂಕಾರ' ಬರೆಯಲಾಯಿತು. ನಂತರ ಮಕ್ಕಳ ಹಣೆಗೆ ಕುಂಕುಮ ಹಚ್ಚಿ ಅ,ಆ ವರ್ಣಮಾಲೆ ಬರೆಸಲಾಯಿತು. ಇದೇ ವೇಳೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಗುವೊಂದರಿಂದ ಇ, ಈ ಅಕ್ಷರ ಬರೆಸಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕಿ ಆರ್.ಯಶೋಧ ಸಿಎಸ್‌ಸಿ ಗವರ್ನೆನ್ಸ್ ಮುಖ್ಯಸ್ಥ ಶಾಕಿಬ್ ಅಹ್ಮದ್, ಮಾಜಿ ಸೈನಿಕರೂ ಹಾಗೂ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆದ ವಿ.ಮಹೇಶ್, ದಿನಕರ್, ಆರ್ಯನ್ ಗಂಧದಗುಡಿ, ಟ್ವಿನ್ಸ್ ಸೇವಾ ಕೇಂದ್ರದ ಕೃಷ್ಣನಾಯಕ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಮಹೋತ್ಸವದಲ್ಲಿ ಕಟ್ಟೆಚ್ಚರ ವಹಿಸಿ

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಸೂಚನೆ



ಮೈಸೂರು, ಸೆ. 17 (ಆರ್‌ಕೆ)– ವಿಶ್ವಪ್ರಸಿದ್ಧ ಮೈಸೂರು ದಸರಾ ಮಹೋತ್ಸವಕ್ಕೆ ವ್ಯಾಪಕ ಬಂದೋಬಸ್ತ್ ಮಾಡಿ, ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ತೀವ್ರ ಕಟ್ಟೆಚ್ಚರ ವಹಿಸಿ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಇಂದಿಲ್ಲಿ ಅಧೀನಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಈ ಬಾರಿಯ ದಸರಾ ಮಹೋತ್ಸವದ ಭದ್ರತೆಗೆ ಕೈಗೊಂಡಿರುವ ಸಿದ್ಧತೆ ಕುರಿತಂತೆ ಅವರು ಎಸಿಪಿ ಹಾಗೂ ಮೇಲ್ಪಟ್ಟ ಪೊಲೀಸ್ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ, ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಆಯ್ಕೆ ವಿವಾದ ಹಾಗೂ ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ಸಂಬಂಧ ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ನಡೆದ ಪ್ರಕ್ಷುಬ್ಧ ಪರಿಸ್ಥಿತಿ ಹಿನ್ನೆಲೆಯಲ್ಲಿ 2025 ರ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2 ರವರೆಗೆ ನಡೆಯಲಿರುವ ನವರಾತ್ರಿ ಉತ್ಸವಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಬಂದೋಬಸ್ತ್‌ಗಾಗಿ ನಿಯೋಜನೆ ಮಾಡಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಕಟ್ಟೆಚ್ಚರ ವಹಿಸುವಂತೆಯೂ ಡಾ. ಎಂ.ಎ. ಸಲೀಂ ನಿರ್ದೇಶನ ನೀಡಿದರು.

ಚಾಮುಂಡಿಬೆಟ್ಟದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಸನ್ನಿಧಾನದಲ್ಲಿ ಸೆ. 22 ರಂದು ನಡೆಯಲಿರುವ ದಸರಾ ಮಹೋತ್ಸವದ ಉದ್ಘಾಟನೆ ವೇಳೆ ತೀವ್ರ ವಿರೋಧ ಅಥವಾ ಪ್ರತಿಭಟನೆ ನಡೆಯುವ ಸಾಧ್ಯತೆ ಇರುವುದರಿಂದ ಅಲ್ಲಿ ಎಸ್ಪಿ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಅಧಿಕ ಪೊಲೀಸ್ ಸಿಬ್ಬಂದಿಗಳನ್ನು ಸಶಸ್ತ್ರ ಪೊಲೀಸರೊಂದಿಗೆ ನಿಯೋಜಿಸಿ ಕಟ್ಟೆಚ್ಚರ ವಹಿಸಬೇಕು. ದಸರಾ ಉದ್ಘಾಟಕರು, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಸೇರಿದಂತೆ ಗಣ್ಯರು ಬಂದು ಕಾರ್ಯಕ್ರಮ ಮುಗಿಸಿ ಸುರಕ್ಷಿತವಾಗಿ ತೆರಳುವವರೆಗೆ ಎಚ್ಚರದಿಂದಿರಲು ಡಾ. ಸಲೀಂ ಅಧೀನಾಧಿಕಾರಿಗಳಿಗೆ ಸೂಚನೆ ನೀಡಿದರು.

ಅದೇ ರೀತಿ ಅ. 2 ರಂದು ನಡೆಯಲಿರುವ ವಿಶ್ವವಿಖ್ಯಾತ ವಿಜಯದಶಮಿ ಮೆರವಣಿಗೆ (ಜಂಬೂಸವಾರಿ) ವೇಳೆ ಅರಮನೆ ಆವರಣ, ಸುತ್ತಲಿನ ಪ್ರವೇಶದ್ವಾರಗಳು, ಮೆರವಣಿಗೆ ಸಾಗುವ ರಾಜಮಾರ್ಗ ಹಾಗೂ ಪಂಜಿನ ಕವಾಯತು ಪ್ರದರ್ಶನ ನಡೆಯಲಿರುವ ಬನ್ನಿಮಂಟಪದ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲೂ ಕಟ್ಟೆಚ್ಚರ ವಹಿಸಬೇಕು, ಯಾವುದೇ ಸಣ್ಣಪುಟ್ಟ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತೆ ವಹಿಸಬೇಕು ಎಂದ ಅವರು, ನಾಡಹಬ್ಬಕ್ಕೆ ಲಕ್ಷಾಂತರ ಮಂದಿ ಸೇರುವುದರಿಂದ ವಿಜಯದಶಮಿ ಮೆರವಣಿಗೆ, ಟಾರ್ಚ್‌ಲೈಟ್ ಪರೇಡ್ ಮೈದಾನ, ಚಾಮುಂಡಿಬೆಟ್ಟ, ಯುವ ದಸರಾ, ಯುವ ಸಂಭ್ರಮ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ದಸರಾ ವಸ್ತುಪ್ರದರ್ಶನ, ವೈಮಾನಿಕ ಪ್ರದರ್ಶನದಂತಹ ಕಾರ್ಯಕ್ರಮ ನಡೆಯುವ ಸ್ಥಳದಲ್ಲೂ ಮೆಟಲ್ ಡೋರ್ ಡಿಟೆಕ್ಟರ್ ಅಳವಡಿಸಿ, ಪ್ರತಿಯೊಬ್ಬರನ್ನೂ ತಪಾಸಣೆ ನಡೆಸಿ ಪ್ರವೇಶಾವಕಾಶ ನೀಡಲು ಮೈಸೂರು ನಗರ ಪೊಲೀಸ್ ಘಟಕವು ಜಿಲ್ಲಾಡಳಿತದೊಂದಿಗೆ ನಿರಂತರ ಚರ್ಚೆ ನಡೆಸುತ್ತಿದ್ದು, ದಸರಾ ಬಂದೋಬಸ್ತ್ ಯೋಜನೆಯನ್ನು ಅಂತಿಮಗೊಳಿಸಬೇಕು ಎಂದರು.

ಡಿಸಿಪಿಗಳಾದ ಆರ್.ಎನ್. ಬಿಂದುಮಣಿ, ಕೆ.ಎಸ್. ಸುಂದರ್‌ರಾಜ್, ಸಿದ್ದನಗೌಡ ಪಾಟೀಲ್, ಮೌಂಟೆಡ್ ಪೊಲೀಸ್ ಕಮಾಂಡೆಂಟ್ ಎ. ಮಾರುತಿ, ನಗರ ಸಂಚಾರ ವಿಭಾಗದ ಎಂ. ಶಿವಶಂಕರ್, ಅರಮನೆ ಭದ್ರತಾ ವಿಭಾಗದ ಚಂದ್ರಶೇಖರ್ ಸೇರಿದಂತೆ ಎಲ್ಲಾ ಉಪ ವಿಭಾಗಗಳ ಎಸಿಪಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಡಾ. ಸಲೀಂರವರು ಬೆಳಿಗ್ಗೆ 9 ಗಂಟೆಗೆ ಮೈಸೂರಿಗೆ ಆಗಮಿಸುತ್ತಿದ್ದಂತೆಯೇ ಎಸ್ಪಿ ಕಚೇರಿ ಎದುರಿನ ಡಿಜಿ ಸೂಟ್‌ನಲ್ಲಿ ಡಿಐಜಿ ಡಾ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹಾಗೂ ಎಸ್ಪಿ ಎನ್. ವಿಷ್ಣುವರ್ಧನ ಅವರು ಪುಷ್ಪಗುಚ್ಛ ನೀಡುವ ಮೂಲಕ ಬರಮಾಡಿಕೊಂಡರು. ನಂತರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪೊಲೀಸ್ ಗೌರವ ವಂದನೆ ಸಲ್ಲಿಸಲಾಯಿತು. ಮಧ್ಯಾಹ್ನದ ನಂತರ ಡಾ. ಸಲೀಂರವರು ದಕ್ಷಿಣ ವಲಯ ಡಿಐಜಿಪಿ ಕಚೇರಿಗೂ ತೆರಳಿ ಸಭೆ ನಡೆಸಿದ ಬಳಿಕ ಸಂಜೆ ಬೆಂಗಳೂರಿಗೆ ಹಿಂತಿರುಗಿದರು.

ಮಾವುತರು, ಕಾವಾಡಿಗಳ ಕುಟುಂಬಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು: ಜಗತ್ಪ್ರಸಿದ್ಧ ದಸರಾ ಹಬ್ಬದ ಅಂಗವಾಗಿ, ಕಾಂಗರೂ ಕೇರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ಫರ್ಟಿಲಿಟಿ ಸೆಂಟರ್ಸ್ ಮತ್ತು ಕ್ಲಿನಿಕ್ಸ್, ಮೈಸೂರು ಬುಧವಾರ ಅರಮನೆ ಆವರಣದಲ್ಲಿ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಗಳಿಗಾಗಿ ವಿಶೇಷ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಂಡಿತ್ತು ವೈದ್ಯರು ಮಾವುತರ ಮತ್ತು ಕಾವಾಡಿಗಳ ದಸರಾ ಪಾಲ್ಗೊಳ್ಳುವಿಕೆಗೆ ಕುಟುಂಬಗಳ ಆರೋಗ್ಯವೂ ಸಮಾನವಾಗಿ ಮುಖ್ಯ ಎಂದು ಹೇಳಿದರು.

ಈ ಶಿಬಿರವು ಮಾವುತರು ಮತ್ತು ಕಾವಾಡಿಗಳ ದಸರಾ ಕಾರ್ಯಕ್ರಮಗಳಲ್ಲಿ ನೀಡುವ ಅಮೂಲ್ಯ ಸೇವೆಯನ್ನು ಗೌರವಿಸುವುದರ ಜೊತೆಗೆ, ಅವರ ಪತ್ನಿಯರು ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡುವ ಉದ್ದೇಶ ಹೊಂದಿತ್ತು. ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ, ಸಂಪೂರ್ಣ ರಕ್ತ ಗಣನೆ (CBC) ಸೇರಿದಂತೆ ಹಲವು ತಪಾಸಣೆಗಳು ನಡೆದವು. ಮಹಿಳೆಯರ ಆರೋಗ್ಯಕ್ಕೆ ವಿಶೇಷ ಆದ್ಯತೆ ನೀಡಿ ತಾಯ್ತನ ಮತ್ತು ಪ್ರಜನನ ಆರೈಕೆಗೆ ಮಾರ್ಗದರ್ಶನ ನೀಡಲಾಯಿತು. ಮಕ್ಕಳಿಗೆ ಪೋಷಣಾ ಸ್ಥಿತಿ, ಬೆಳವಣಿಗೆ ಹಾಗೂ ಬುದ್ಧಿಮತ್ತೆ ಕುರಿತು ಸಮಗ್ರ ಪರೀಕ್ಷೆಗಳನ್ನು ಕೈಗೊಳ್ಳಲಾಯಿತು. ತಜ್ಞ ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿ ಹಾಗೂ ಸ್ವಯಂಸೇವಕರ ತಂಡವು ತಪಾಸಣೆಗಳ ಜೊತೆಗೆ ಮುನ್ನೆಚ್ಚರಿಕಾ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ, ಪಾಲ್ಗೊಂಡವರಿಗೆ ಪೌಷ್ಟಿಕ ಆಹಾರ, ಉತ್ತಮ ಜೀವನಶೈಲಿ ಮತ್ತು ರೋಗಗಳ ತ್ವರಿತ ಪತ್ತೆಯ ಮಹತ್ವವನ್ನು ತಿಳಿಸಿದರು.

ಸ್ತ್ರೀರೋಗ ತಜ್ಞೆ ಡಾ. ಪೂಜಾ.ಡಿ ಅವರು, ಹೆಚ್ಚಿನ ಮಹಿಳೆಯರು ಉತ್ತಮ ಆರೋಗ್ಯದಲ್ಲಿದ್ದಾರೆ. ದೈನಂದಿನ ಶಾರೀರಿಕ ಚಟುವಟಿಕೆ ಮತ್ತು ಕಡಿಮೆ ಜಂಕ್ ಫುಡ್ ಸೇವನೆಯೇ ಇದಕ್ಕೆ ಪ್ರಮುಖ ಕಾರಣ ಎಂದರು.

ಬಾಲರೋಗ ತಜ್ಞೆ ಡಾ. ಸಾಯಿ ಮನಸ್ವಿನಿ.ಕೆ ಅವರು, ಎತ್ತರ, ತೂಕ ಮತ್ತು ರಕ್ತಹೀನತೆ ತಪಾಸಣೆಗಳಲ್ಲಿ ಮಕ್ಕಳ ಆರೋಗ್ಯ ಉತ್ತಮವಾಗಿದೆ. ಮಕ್ಕಳು ಚುರುಕು ಹಾಗೂ ಆರೋಗ್ಯಕರವಾಗಿದ್ದಾರೆ ಎಂದು ಹೇಳಿದರು.

ಲಾಂಗ್ ಸಮೇತ ಬೈಕ್ ಸವಾರಿ: ಓರ್ವನ ಬಂಧನ



ಲಾಂಗ್ ಹಿಡಿದು ಬೈಕ್‌ನಲ್ಲಿ ಹೆಲ್ಮೆಟ್ ಇಲ್ಲದೆ ಮೂವರ ಸವಾರಿ

ಕುಶಾಲನಗರ, ಸೆ.17–ಬೈಕ್‌ನಲ್ಲಿ ಹೆಲ್ಮೆಟ್ ಇಲ್ಲದೆ ಮೂವರು ಸವಾರಿ ಮಾಡಿದ್ದಲ್ಲದೆ ಸಾರ್ವಜನಿಕವಾಗಿ ಲಾಂಗ್ ಹಿಡಿದು ಅಕ್ರಮವಾಗಿ ಸಂಚರಿಸುತ್ತಿದ್ದ ಮೂವರಲ್ಲಿ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ

ಮರೂರು ಗ್ರಾಮದ ಸೂರ್ಯ, ಚಿಕ್ಕ ಅಳುವಾರದ ಪುನೀತ್, ಹೆಬ್ಬಾಲೆಯ ಶ್ರೀಧರ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಒಂದೇ ಬೈಕ್‌ನಲ್ಲಿ ಹೆಲ್ಮೆಟ್ ಧರಿಸದೆ ತ್ರಿಬಲ್ ರೈಡಿಂಗ್ ಮಾಡಿದ್ದಲ್ಲದೇ ಇದೇ ವೇಳೆ ಲಾಂಗ್ ಪ್ರದರ್ಶನ ಮಾಡುವ ಮೂಲಕ ಈ ಯುವಕರು ಉದ್ದಟತನ ತೋರಿದ್ದಲ್ಲದೆ ಇದೇ ವಿಡಿಯೋವನ್ನು ರೀಲ್ಸ್ ಮೂಲಕ ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟಿದ್ದರು. ಸಾರ್ವಜನಿಕವಾಗಿ ಮಾರಕಾಸ್ತ್ರ ಪ್ರದರ್ಶನ ಮಾಡಿದ ವೀಡಿಯೋ ಸೋಶಿಯಲ್ ಮೀಡಿಯದಲ್ಲಿ ಶೇರ್ ಆಗಿತ್ತು. ಗ್ರಾಮಾಂತರ ಪೊಲೀಸರು ಮೂವರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲು ಮಾಡಿಕೊಂಡು ಪುನೀತ್ ಎಂಬಾತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ತಲೆಮರೆಸಿಕೊಂಡಿರುವ ಶ್ರೀಧರ್‌ಮತ್ತು ಸೂರ್ಯರ ಶೋಧನೆಯಲ್ಲಿ ತೊಡಗಿದ್ದಾರೆ.

ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ಮೂಲಕ ಅಗತ್ಯ ನೆರವು



ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ವಿತರಿಸಿದರು.

ಮಡಿಕೇರಿ, ಸೆ.17–ಸಮಾಜದ ವಿವಿಧ ಸ್ತರಗಳ 101 ವರ್ಗಗಳನ್ನು ಗುರುತಿಸಿ ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಅಸಂಘಟಿತರಿಗೆ ಕಾರ್ಮಿಕ ಇಲಾಖೆಯ 'ಸ್ಮಾರ್ಟ್ ಕಾರ್ಡ್'ಗಳ ಅಗತ್ಯ ನೆರವನ್ನು ಒದಗಿಸುವ ಮೂಲಕ ನಿಮ್ಮ ಸಂಕಷ್ಟಗಳಿಗೆ ನಾವಿದ್ದೇವೆಂದು ಸ್ಪಷ್ಟಪಡಿಸಿ ರುವ ರಾಜ್ಯ ಸರ್ಕಾರದ ಪ್ರಯತ್ನ ರಾಷ್ಟ್ರದ ಇತರ ಯಾವುದೇ ರಾಜ್ಯಗಳಲ್ಲಿ ಕಾಣುವುದಿಲ್ಲ ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಸಮರ್ಥಿಸಿಕೊಂಡಿದ್ದಾರೆ.

ನಗರದ ಕ್ರಿಸ್ಟಲ್ ಹಾಲ್‌ನಲ್ಲಿ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿ ಉದ್ಘಾಟಿಸಿ ರಾಜ್ಯದ ಕಾಂಗ್ರೆಸ್ ಸರ್ಕಾರ ಅಸಂಘಟಿತರಿಗೆ ನೆರವನ್ನು ಒದಗಿಸುವ 'ಗಿಗ್ ಬಿಲ್', 'ಸಿನಿ ಬಿಲ್' ಮತ್ತು 'ಟ್ರಾನ್ಸ್ ಪೋರ್ಟ್ ಬಿಲ್'ಗಳನ್ನು ಜಾರಿಗೆ ತಂದಿದೆ. ಗಿಗ್ ಬಿಲ್ ಮೂಲಕ ಇದೇ ಮೊದಲ ಬಾರಿಗೆ ಆನ್‌ಲೈನ್ ಪ್ಲಾಟ್ ಫಾರ್ಮ್ ಮೂಲಕ ಕಾರ್ಯ ನಿರ್ವಹಿಸುವವರನ್ನು ಅಸಂಘಟಿತ ವಲಯಕ್ಕೆ ಒಳಪಡಿಸಲಾಗಿದೆ ಎಂದರು.

ಸಿನಿ ಬಿಲ್ ಮೂಲಕ ಸಿನಿಮಾ, ನಾಟಕ ಕ್ಷೇತ್ರಗಳಲ್ಲಿ ತೆರೆ ಮರೆಯಲ್ಲಿ ಕಾರ್ಯ ನಿರ್ವಹಿಸುವವರನ್ನು ಹಾಗೂ ಟ್ರಾನ್ಸ್ ಪೋರ್ಟ್ ಬಿಲ್ ಮೂಲಕ ಆಟೋ ಚಾಲಕರು, ಕ್ಲೀನರ್‌ಗಳು, ಗ್ಯಾರೇಜ್‌ಗಳಲ್ಲಿ ಕಾರ್ಯ ನಿರ್ವಹಿಸುವವರು, ವೆಲ್ಡರ್‌ಗಳು ಸೇರಿದಂತೆ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸುವವರನ್ನು ಗುರುತಿಸಲಾಗಿದೆ. ಈ ಎಲ್ಲಾ ವಿಭಾಗಗಳಲ್ಲಿ ತೊಡಗಿಸಿಕೊಂಡಿರುವವರು ಕಾರ್ಮಿಕ ಇಲಾಖೆಯಲ್ಲಿ ಹೆಸರು ನೋಂದಾಯಿಸಿ ಸೌಲಭ್ಯವನ್ನು ಹೊಂದಿಕೊಳ್ಳಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ಕಾರ್ಮಿಕ ಇಲಾಖೆಯ ಮೂಲಕ ಅನುಷ್ಠಾನಕ್ಕೆ ತಂದಿರುವ 'ಸ್ಮಾರ್ಟ್ ಕಾರ್ಡ್' ಎನ್ನುವುದು ಅಸಂಘಟಿತ ಕಾರ್ಮಿಕರಿಗೆ ನೀಡುತ್ತಿರುವ 'ಗ್ಯಾರಂಟಿ' ಆಗಿದೆ ಎಂದು ತಿಳಿಸಿದರು. ಸರ್ಕಾರದ ವಿವಿಧ ಯೋಜನೆಗಳಿಂದ ಸೌಲಭ್ಯಗಳನ್ನು ಪಡೆದವರು, ಸರ್ಕಾರದ ಪ್ರಯತ್ನಗಳನ್ನು ಬೆಂಬಲಿಸಿ ಇತರರಿಗೂ ತಿಳಿ ಹೇಳಬೇಕೆಂದರು.

ಸಭಾಧ್ಯಕ್ಷತೆ ವಹಿಸಿದ್ದ ಶಾಸಕ ಡಾ. ಮಂತರ್ ಗೌಡ ಮಾತನಾಡಿ, ತೋಟಗಳಲ್ಲಿನ ಲೈನ್ ಮನೆಯಲ್ಲಿ ಬದುಕು ಸಾಗಿಸುತ್ತಿರುವ ಕಾರ್ಮಿಕರಿಗೆ, 60 ವರ್ಷಗಳ ಬಳಿಕ ನೆಲ ಇಲ್ಲದಂತಹ ಸ್ಥಿತಿಯಲ್ಲಿ 13ರಿಂದ 15 ಸಾವಿರ ಮಂದಿ ಇದ್ದಾರೆ. ಸರ್ಕಾರದ ಈ ಯಾವುದೇ ಯೋಜನೆಗಳಿಗೆ ಚಿಕ್ಕಾಸನ್ನು ಕಾರ್ಮಿಕರು ಕೊಡುವ ಅಗತ್ಯವಿಲ್ಲ. ಹಣ ಪಡೆಯುವ ಪ್ರಯತ್ನಗಳು ನಡೆದರೆ ಅದನ್ನು ತಮ್ಮ ಗಮನಕ್ಕೆ ತಂದರೆ ಕ್ರಮ ಜರುಗಿಸುವುದಾಗಿ ಸ್ಪಷ್ಟಪಡಿಸಿದರು. ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ಮೆಹರೋಜ್ ಖಾನ್ ಮಾತನಾಡಿ, ಸರ್ಕಾರದ ಪಂಚ ಗ್ಯಾರಂಟಿಗಳ ಫಲವಾಗಿ ಇಂದು ರಾಜ್ಯವು ಮಹಿಳಾ ಉದ್ಯಮೀಕರಣದಲ್ಲಿ ರಾಷ್ಟ್ರಕ್ಕೆ ಪ್ರಥಮ ಸ್ಥಾನದನ್ನು ಪಡೆದಿದೆ ಎಂದರು.

ಇದೇ ಸಂದರ್ಭ ವಿವಿಧ ಅಸಂಘಟಿತ ವರ್ಗಗಳಿಗೆ ಸೇರಿದವರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ಮತ್ತು ನೆರವನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ, ಕಾರ್ಮಿಕ ಆಯುಕ್ತ ಡಾ. ಹೆಚ್. ಎನ್.ಗೋಪಾಲಕೃಷ್ಣ, ಹಾಸನ ಪ್ರಾದೇಶಿಕ ವಿಭಾಗದ ಹೆಚ್.ಎಲ್. ಗುರುಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಎಡಿಸಿ ಐಶ್ವರ್ಯ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಜಂಟಿ ಕಾರ್ಮಿಕ ಆಯುಕ್ತ ಡಾ.ಎಸ್.ಬಿ. ರವಿ ಕುಮಾರ್, ಲಿಡ್ಕರ್ ಸಂಸ್ಥೆಯ ಪ್ರಮುಖರಾದ ಮುಂಡ್ರಂಗಿ ನಾಗರಾಜು, ರಾಜೀವ್ ಗಾಂಧಿ ವಿವಿಯ ಸೆನೆಟ್ ಸದಸ್ಯ ಶ್ರೀನಿವಾಸ್ ಇತರರು ಪಾಲ್ಗೊಂಡಿದ್ದರು.

ಕೊಡವ ಭಾಷೆ ಎಂದು ನಮೂದಿಸಲು ಮನವಿ



ಕೊಡವ ಭಾಷಿಕ ಸಮುದಾಯಗಳ ಕೂಟದ ಸಭೆ ನಡೆಯಿತು

ಮಡಿಕೇರಿ, ಸೆ.17–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಸೆ.22ರಿಂದ ಅ.7ರವರೆಗೆ ನಡೆಸುವ ಜಾತಿ ಜನಗಣತಿಯ ಸಂದರ್ಭ ಕೊಡವ ಭಾಷಿಕ ಜನಾಂಗದವರು ಧರ್ಮವನ್ನು ಹಿಂದೂ, ಜಾತಿಯನ್ನು ಸರ್ಕಾರದ ಜಾತಿವಾರು ಪಟ್ಟಿಯಲ್ಲಿ ಈಗಾಲೇ ಗುರುತಿಸಲ್ಪಟ್ಟಿರುವ ತಮ್ಮ ಜಾತಿಯ ಹೆಸರನ್ನು ಮತ್ತು ಭಾಷೆ ಕಾಲಂನಲ್ಲಿ ಕೊಡವ ಭಾಷೆ ಎಂದು ನಿಖರ ಮಾಹಿತಿ ನೀಡುವಂತೆ ಕೊಡವ ಭಾಷಿಕ ಸಮುದಾಯಗಳ ಕೂಟ ಮನವಿ ಮಾಡಿದೆ.

ವಿರಾಜಪೇಟೆಯಲ್ಲಿ ನಡೆದ ಕೊಡವ ಭಾಷಿಕ ಸಮುದಾಯಗಳ ಕೂಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೂಟದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ ಅವರು ಜಾತಿ ಜನಗಣತಿ ಸಂದರ್ಭ ನಿಖರ ಮಾಹಿತಿ ನೀಡಿ ಸಹಕರಿಸುವಂತೆ ತಿಳಿಸಿದರು.

ಗಣತಿದಾರರು ಮನೆಗೆ ಭೇಟಿ ನೀಡಿದಾಗ ಶೈಕ್ಷಣಿಕ, ಉದ್ಯೋಗ, ಆರ್ಥಿಕ, ಸಾಮಾಜಿಕ ಮತ್ತಿತರ ಮಾಹಿತಿಯನ್ನು ಯಾವುದೇ ತಪ್ಪಿಲ್ಲದೆ ಸ್ಪಷ್ಟವಾಗಿ ನೀಡಬೇಕು. ಸರಿಯಾದ ಮಾಹಿತಿ ನೀಡುವುದರಿಂದ ಮುಂದಿನ ದಿನಗಳಲ್ಲಿ ಮೀಸಲಾತಿ ಸೇರಿದಂತೆ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗಲಿದೆ. ಕೊಡವ ಭಾಷಿಕ 21 ಸಮುದಾಯಗಳ ಜನಾಂಗ ಬಾಂಧವರು ಕಡ್ಡಾಯವಾಗಿ ಪಾಲ್ಗೊಂಡು ಸರ್ಕಾರದ ಜೊತೆ ಕೈಜೋಡಿಸಿ ಸಮರ್ಪಕ ಮಾಹಿತಿಯನ್ನು ನೀಡಿ ಯಶಸ್ವಿಗೊಳಿಸುವಂತೆ ಕೋರಿದರು.

ಕೊಡವ ಭಾಷಿಕ ಸಮುದಾಯಗಳ ಕೂಟದ ಗೌರವ ಕಾರ್ಯದರ್ಶಿ ಕೂಡಂಡ ಸಾಬಾ ಸುಬ್ರಮಣಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಪೊನ್ನೀರ ಗಗನ್ ಸೇರಿದಂತೆ ಕೊಡವ ಭಾಷಿಕ ಸಮುದಾಯಗಳ ಪ್ರಮುಖರು ಉಪಸ್ಥಿತರಿದ್ದರು.

ಗೋಹತ್ಯೆಗೈದ ಕಟುಕರಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹ



ಗೋಹತ್ಯೆಗೈದ ಕಟುಕರಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹಿಸಿ ಹಿಂದೂ ಜಾಗರಣ ವೇದಿಕೆ ಡಿವೈಎಸ್ಪಿಯವರಿಗೆ ಮನವಿ ಸಲ್ಲಿಸಿತು

ವಿರಾಜಪೇಟೆ, ಸೆ.17– ಜಿಲ್ಲೆಯ ನಾನಾ ಭಾಗಗಳಲ್ಲಿ ಗೋವುಗಳ ಕಳವು ಮತ್ತು ಮಾಂಸಕ್ಕಾಗಿ ಘೋರವಾಗಿ ಹತ್ಯೆಗೈಯುತ್ತಿರುವ ಘಟನೆಗಳಿಗೆ ಸಂಬಂಧಿಸಿದಂತೆ ಪೊಲೀಸರು ಕಠಿಣ ಕಾನೂನು ತೆಗೆದುಕೊಳ್ಳುವಂತೆ ಹಿಂದೂ ಜಾಗರಣ ವೇದಿಕೆ ಆಗ್ರಹಿಸಿದೆ

ಹಿಂದೂ ಜಾಗರಣ ವೇದಿಕೆ ತಾಲೂಕು ಘಟಕದ ವತಿಯಿಂದ ಮೈತಾಡಿ ಗ್ರಾಮದ ಭೀಮಯ್ಯ ಎಂಬುವರ ಗರ್ಭದ ಹಸುಗಳನ್ನು ಕಳತನ ಮಾಡಿ ಹತ್ಯೆ ಮಾಡಿರುವ ಘಟನೆಯನ್ನು ಖಂಡಿಸಿ ತಪ್ಪಿತಸ್ತ ವ್ಯಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಉಪ ವಿಭಾಗ ಡಿವೈಎಸ್ಪಿ ಎಸ್. ಮಹೇಶ್ ಕುಮಾರ್ ಅವರಿಗೆ ಸಂಘಟನೆಯ ವತಿಯಿಂದ ಮನವಿ ಪತ್ರ ಸಲ್ಲಿಸಲಾಯಿತು. ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಹ ಸಂಯೋಜಕ್ ಯೋಗೇಶ್ ಬಿ.ಎನ್ ಬಿಟ್ಟಂಗಾಲ ಗೋವನ್ನು ಹಿಂದೂ ಧರ್ಮದಲ್ಲಿ ಪೂಜನೀಯ ಭಾವದಿಂದ ಪೂಜಿಸುತ್ತಿದ್ದು ಕೆಲ ವ್ಯಕ್ತಿಗಳು ಹಣದಾಸೆಗೆ ಗೋವುಗಳನ್ನು ಕಳ್ಳತನ ಮಾಡಿ ಹತ್ಯೆ ಮಾಡುತ್ತಿರುವುದು ನಡೆಯುತ್ತಾ ಬಂದಿದೆ.

ಮೈತಾಡಿ ಗ್ರಾಮದ ಕೃಷಿಕರಾಗಿರುವ ಭೀಮಯ್ಯ ಅವರ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಎರಡು (ಗರ್ಭ ಧರಿಸಿದ್ದ) ಗೋವುಗಳನ್ನು ಕಳ್ಳತನ ಮಾಡಿ ಹತ್ಯೆ ಮಾಡಿ ಮಾಂಸ ಮಾರಾಟ ಮಾಡಿರುವುದು ಘೋರ ಅಪರಾದವಾಗಿದೆ. ಅಲ್ಲದೆ ಹತ್ಯೆಗೈದ ಗೋವಿನ ತ್ಯಾಜ್ಯ ಅವಶೇಷಗಳನ್ನು ಹಾಲುಗುಂದ ಗ್ರಾಮ ಎಲಿಂಗಾಡ್ ಹೊಳೆಯ ತುಟಕ್ಕೆ ಎಸೆದು ಪರಾರಿಯಾಗಿದ್ದಾರೆ. ಜಾನುವಾರುಗಳನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ವ್ಯಕ್ತಿಗೆ ಹಾಗೂ ಹಸುಗಳನ್ನು ಕಳೆದುಕೊಂಡ ಸಂತ್ರಸ್ತ ವ್ಯಕ್ತಿಗಳಿಗೆ ಸಹಾಯಧನ ನೀಡುವಂತೆ ಸರ್ಕಾರವನ್ನು ಒತ್ತಾಯ ಮಾಡುತ್ತದೆ ಎಂದರು.

ಉಪ ವಿಭಾಗ ಡಿವೈಎಸ್ಪಿ ಎಸ್ ಮಹೇಶ್ ಕುಮಾರ್ ಅವರು ಗೋವುಗಳನ್ನು ಕಳ್ಳತನ ಮಾಡಿ ಸಾಗಣಿಕೆ ಮಾಡುವವರ ವಿರುದ್ಧ ಕಾನೂನಿನಂತೆ ಕ್ರಮ ಜರುಗಿಸಲಾಗುತ್ತದೆ. ಪ್ರಕರಣಗಳಿಗೆ ಸಂಬಂಧಿಸಿ ಕೆಲವರನ್ನು ಬಂಧಿಸಿ ಪ್ರಕರಣ ದಾಖಲಿಸಲಾಗಿದೆ. ಮಂಗಳೂರು, ಪುತ್ತೂರು, ಸನಿಹದ ಕೇರಳ ರಾಜ್ಯದಲ್ಲಿ ಕೆಲವು ಆರೋಪಿಗಳನ್ನು ಬಂಧಿಸಲಾಗಿದ್ದು. ಗೋವು ಕಳ್ಳರ ಬಗ್ಗೆ ಸ್ಥಳೀಯರು ಎಚ್ಚರ ವಹಿಸಿ ಇಲಾಖೆಗೆ ಮಾಹಿತಿ ನೀಡವಂತಾಗಬೇಕು ಎಂದರು.

ಸಂತ್ರಸ್ಥ ಭೀಮಯ್ಯ, ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಮಿತಿ ಸದಸ್ಯ ಗಣೇಶ್ ಬಿಟ್ಟಂಗಾಲ, ತಾಲೂಕು ಸಂಯೋಜಕರಾದ ಅನೀಲ್ ಸಿದ್ದಾಪುರ, ಮಣಿ ಅಯ್ಯಪ್ಪ ಪ್ರಸ್ನಾ, ಅಮ್ಮತ್ತಿ, ಗೋ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಅಜಯ್ ರಾವ್ ಹಾಜರಿದ್ದರು.

ಬೀದಿ ಬದಿ ವ್ಯಾಪಾರಿಗಳ ವಿಭಾಗದ ಜಿಲ್ಲಾಧ್ಯಕ್ಷರ ನೇಮಕ



ಕಾರ್ಮಿಕ ಸಚಿವ ಸಂತೋಷ್ ಲಾಡ್ ಎಸ್.ಆದಂ ಅವರಿಗೆ ನೇಮಕಾತಿ ಪತ್ರವನ್ನು ನೀಡಿದರು.

ಕುಶಾಲನಗರ, ಸೆ.17– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಬೀದಿ ಬದಿ ವ್ಯಾಪಾರಿಗಳ ವಿಭಾಗದ ಜಿಲ್ಲಾಧ್ಯಕ್ಷರಾಗಿ ಇಲ್ಲಿನ ಇಂದಿರಾ ಬಡಾವಣೆ ನಿವಾಸಿ ಎಸ್.ಆದಂ ಅವರಿಗೆ ಬುಧವಾರ ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇಮಕಾತಿ ಪತ್ರವನ್ನು ನೀಡಿದರು. ಶಾಸಕರ ಶಿಫಾರಸ್ಸಿನ ಮೇರೆಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಬೀದಿ ಬದಿ ವ್ಯಾಪಾರಿಗಳ ವಿಭಾಗದ ರಾಜ್ಯಾಧ್ಯಕ್ಷ ಡಾ.ಸಿ.ಇ.ರಂಗಸ್ವಾಮಿ ಎಸ್.ಆದಂ ಅವರನ್ನು ನೇಮಕ ಮಾಡಿದ್ದು, ಬೀದಿ ಬದಿ ವ್ಯಾಪಾರಿಗಳನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪಕ್ಷವನ್ನು ಬಲವರ್ಧನೆಗೊಳಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪದಾಧಿಕಾರಿಗಳಿಗೆ ಆದೇಶ ಪತ್ರ ನೀಡಿ ಶುಭ ಹಾರೈಸಿದರು. ಈ ಸಂದರ್ಭ ಶಾಸಕರಾದ ಡಾ. ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಗ್ಯಾರಂಟಿ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷ ಮೆರೋಜ್ ಖಾನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಸೇರಿದಂತೆ ಪಕ್ಷದ ಮುಖಂಡರು, ವಿವಿಧ ಘಟಕಗಳ ಅಧ್ಯಕ್ಷರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕುಂಜಿಲ ಪಯ್ ನರಿ ದಫ್ ತಂಡ ಪ್ರಥಮ



ಮದದೇ ಮದೀನ ಮಿಲಾದ್ ಬೃಹತ್ ಸಮಾವೇಶ ರ್‍ಯಾಲಿಯಲ್ಲಿ ಕುಂಜಿಲ ಯುವಕರ ದಫ್ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನವನ್ನು ತಮ್ಮದಾಗಿಸಿಕೊಂಡಿತು. ಶಾಸಕ ಎ.ಎಸ್.ಪೊನ್ನಣ್ಣ ಬಹುಮಾನ ವಿತರಿಸಿದರು. ತಂಡದ ತರಬೇತುಗಾರ ಪಯ್ಯಡಿ ರಶೀದ್ ಉಸ್ತಾದ್, ನಾಯಕ ರಝುಕ್ ಅಲಿ (ಜಜ್ಜು),ಮತ್ತು ಪಯ್ ನರಿ ಸುನ್ನಿ ಮುಸ್ಲಿಂ ಜಮಾಅತ್ತಿನ ಅಧ್ಯಕ್ಷರಾದ ಸೌಕತ್ ಅಲಿ ಮಕ್ಕಿ , ಖಲೀಲ್ ಮತ್ತು ಅಝುರುದ್ದೀನ್ ಉಪಸ್ಥಿತರಿದ್ದರು.

ನಿಂತಿದ್ದ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ: ಬಾಲಕಿ ಸಾವು

ಕೊಳ್ಳೇಗಾಲ, ಸೆ.17–ಜವರಾಯ ಯಾವುದೇ ರೂಪದಲ್ಲಾದರೂ ಬರಬಹುದು ಎಂಬುದಕ್ಕೆ ತಾಲೂಕಿನ ಚಿಲಕವಾಡಿ ಬಳಿ ಬುಧವಾರ ಬೆಳ್ಳಂಬೆಳಗ್ಗೆ ನಡೆದ ಅಪಘಾತ ಪ್ರಕರಣ ದ್ಯೋತಕವಾಗಿದೆ



ಹರ್ಷಿತಾ

ಕಬ್ಬು ತುಂಬಲು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ನಾಲ್ಕು ವರ್ಷದ ಬಾಲಕಿ ಅಸುನೀಗಿದ್ದಾಳೆ. ತಾಲೂಕಿನ ಗುಂಡೇಗಾಲ ಗ್ರಾಮದ ನಂಜುಂಡಸ್ವಾಮಿ ಹಾಗೂ ಕಾವ್ಯ ದಂಪತಿಗಳ ಪುತ್ರಿ ಹರ್ಷಿತಾ(4) ಮೃತ ದುರ್ದೈವಿ ಮಗುವಾಗಿದೆ. ಈಕೆಯ ಪೋಷಕರು ಮೈಸೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದು ನಿನ್ನೆ ಗ್ರಾಮಕ್ಕೆ ಬಂದಿದ್ದು, ಬುಧವಾರ ಬೆಳಗಿನ ಜಾವ ಮೈಸೂರಿಗೆ ತೆರಳುವ ವೇಳೆ ಈ ಅವಘಡ ಸಂಭವಿಸಿದೆ

ತಾಲೂಕಿನ ಚಿಲಕವಾಡಿ ಗ್ರಾಮಕ್ಕೆ ಸಮೀಪದಲ್ಲಿ ಕಬ್ಬು ತುಂಬಲು ರಸ್ತೆಯ ಮಧ್ಯದಲ್ಲೆ ಟ್ರ್ಯಾಕ್ಟರ್‌ವೊಂದು ನಿಂತಿತ್ತು ಗುಂಡೇಗಾಲದಿಂದ ಬಂದ ಬೈಕ್ ಸವಾರನಿಗೆ ನಿಯಂತ್ರಣ ತಪ್ಪಿ ರಸ್ತೆ ಮಧ್ಯ ನಿಂತಿದ್ದ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಮಗು ಸೇರಿ ಮೂವರು ಗಾಯಗೊಂಡರು ತಕ್ಷಣ ತೀವ್ರ ಗಾಯಗೊಂಡ ಮಗುವನ್ನು ಜಿಲ್ಲಾಸ್ಪತ್ರೆಗೆ ಸಾಗಿಸುವ ವೇಳೆ ಮಗು ಮಾರ್ಗಮಧ್ಯೆ ಮೃತಪಟ್ಟಿದೆ. ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ಕಾವ್ಯ, ನಂಜುಂಡನಾಯಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಪ್ರಾಥಮಿಕ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಘಟನೆ ನಡೆದ ತಕ್ಷಣ ಚಾಲಕ ಟ್ರ್ಯಾಕ್ಟರ್ ಸಮೇತ ಚಾಲಕ ಪರಾರಿಯಾಗಿದ್ದು ಪರಾರಿಯಾದ ವಾಹನದ ಸಂಖ್ಯೆ, ಹಾಗೂ ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಮಾಂಬಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಲಾರಿ–ಗೂಡ್ಸ್ ಆಟೋ ಡಿಕ್ಕಿ : ಇಬ್ಬರ ಸಾವು



ಕಬ್ಬಿನ ಲಾರಿಗೆ ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಟೊಮ್ಯಾಟೊ ಬಾಕ್ಸ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಯಳಂದೂರು.ಸೆ.17(ವಿ.ಎನ್)– ಹೆದ್ದಾರಿ ಬದಿ ನಿಂತಿದ್ದ ಕಬ್ಬಿನ ಲಾರಿಗೆ ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಸೇರಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಮದ್ದೂರು ಸಮೀಪದ ಎಳೆಪಿಳ್ಳಾರಿ ಬಳಿ ಇಂದು ಬೆಳಗ್ಗೆ ಸಂಭವಿಸಿದೆ.

ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಮದ ಸುಮಂತ್(22), ನಿತಿನ್ ಕುಮಾರ್(16) ಮೃತ ದುರ್ದೈವಿಗಳು. ಇವರು ಗೂಡ್ಸ್ ಆಟೋದಲ್ಲಿ ಟೊಮ್ಯಾಟೋ ತುಂಬಿಕೊಂಡು ಕೊಳ್ಳೇಗಾಲ ಕಡೆ ತೆರಳುತ್ತಿದ್ದಾಗ ಎಳೆಪಿಳ್ಳಾರಿ ಬಳಿ ಕಬ್ಬು ತುಂಬಿಸಿಕೊಂಡು ಕಾರ್ಖಾನೆಗೆ ತೆರಳಲು ರಸ್ತೆ ಬದಿ ನಿಂತಿದ್ದ ಲಾರಿಗೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಆಟೋದಲ್ಲಿದ್ದ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದು ಆಟೋದಲ್ಲಿದ್ದ ಟೊಮ್ಯಾಟೊ ಬಾಕ್ಸ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ವಿಷಯ ತಿಳಿದು ಸ್ಥಳಕ್ಕೆ ಯಳಂದೂರು ಠಾಣೆ ಪೊಲೀಸರು ತೆರಳಿ ಪರಿಶೀಲಿಸಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ, ಲಾರಿ ಹಾಗೂ ಆಟೋವನ್ನು ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನಪರ ಕಾರ್ಯದೊಂದಿಗೆ ಮೋದಿ ಹುಟ್ಟುಹಬ್ಬ ಆಚರಣೆ



ಮಾಜಿ ಸಚಿವ ಎನ್. ಮಹೇಶ್ ತಮ್ಮ ಕಿವಿ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿದರು.

ಚಾಮರಾಜನಗರ, ಸೆ.17– ಜಿಲ್ಲಾ ಬಿಜೆಪಿ ವತಿಯಿಂದ ನಗರದಲ್ಲಿ ವಿವಿಧ ಸೇವಾ ಕಾರ್ಯಗಳೊಂದಿಗೆ ಪ್ರಧಾನ ಮಂತ್ರಿ ನರೇಂದ್ರಮೋದಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಮೊದಲಿಗೆ ಬಿಜೆಪಿ ಮುಖಂಡರು ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ನಗರದ ಮಾರಿಗುಡಿ ಮುಂಭಾಗ ಆಯೋಜಿಸಿದ್ದ ಬೃಹತ್ ಆರೋಗ್ಯ ಶಿಬಿರಕ್ಕೆ ಮತ್ತು ಸ್ವದೇಶಿ ಉತ್ಪನ್ನ ವಸ್ತು ಪ್ರದರ್ಶನಕ್ಕೆ ಪಕ್ಷದ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಚಾಲನೆ ನೀಡಿದರು.

ಆರೋಗ್ಯ ಶಿಬಿರ, ರಕ್ತದಾನ, ಕಣ್ಣಿನ ತಪಾಸಣೆ ಶಿಬಿರ, ಕಿವಿ, ಮೂಗು, ಗಂಟಲು ತಪಾಸಣಾ ಶಿಬಿರ ಯಶಸ್ವಿಯಾಯಿತು. ಶಿಬಿರದಲ್ಲಿ 480 ಮಂದಿ ಆರೋಗ್ಯ ತಪಾಸಣೆ, 140 ಇಎನ್‌ಟಿ ಪರೀಕ್ಷೆ 120 ಮಂದಿ ಕಣ್ಣಿನ ತಪಾಸಣೆ ಮಾಡಿಸಿಕೊಂಡರು. 52 ಮಂದಿ ರಕ್ತದಾನ ಮಾಡಿದರು. 300 ಮಕ್ಕಳಿಗೆ ಸ್ವೆಟರ್, 80 ಮಂದಿ ಬೀದಿ ವ್ಯಾಪಾರಿಗಳಿಗೆ ಛತ್ರಿ, 12 ಮಂದಿ ದಿವ್ಯಾಂಗರಿಗೆ ವೀಲ್‌ಚೇರ್ ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ ದೇಶದ ಪ್ರಧಾನಮಂತ್ರಿಗಳಾದ ನರೇಂದ್ರಮೋದಿಯವರು 75ನೇ ವಸಂತಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿರಂಜನ್‌ಕುಮಾರ್ ಅವರ ನೇತೃತ್ವದಲ್ಲಿ ನಾವೆಲ್ಲರೂ, ಚಾಮರಾಜೇಶ್ವರ ದೇವಸ್ಥಾನದಲ್ಲಿ ಶ್ರದ್ದೆ, ಭಕ್ತಿಯಿಂದ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ನಿರಂಜನ್‌ಕುಮಾರ್ ಮಾತನಾಡಿ, ದೇಶಕ್ಕೆ ಮೋದಿ ನಾಯಕತ್ವ ಬಹಳ ಅವಶ್ಯಕವಾಗಿದೆ. ಅವರು ದೇಶದ ಪ್ರಧಾನಿಯಾದ ಮೇಲೆ ಅಭಿವೃದ್ಧಿಗೆ ಪೂರಕವಾಗಿದೆ ಅವರ ಜನಪರ ಚಾಮರಾಜೇಶ್ವರಸ್ವಾಮಿ ಕಾರ್ಯಕ್ರಮಗಳು ಮೋದಿ ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕ ಎಸ್.ಬಾಲರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭಾ ಅಧ್ಯಕ್ಷ ಸುರೇಶ್, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜ್, ರಾಷ್ಟ್ರೀಯ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚೂಡಾಧ್ಯಕ್ಷ ಮಾಜಿ ಅಧ್ಯಕ್ಷರಾದ ಆರ್.ಸುಂದರ್, ಬಾಲಸುಬ್ರಹ್ಮಣ್ಯಂ, ಕುಲಗಾಣ ಶಾಂತಮೂರ್ತಿ, ಮುಖಂಡರಾದ ಮಂಗಲ ಶಿವಕುಮಾರ್, ಡಾ.ಎ.ಆರ್.ಬಾಬು, ಮಂಜುನಾಥ ಪ್ರಸನ್ನ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಹನೂರು ವೆಂಕಟೇಶ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಕೂಸಣ್ಣ, ಜಿಲ್ಲಾ ಮಾಧ್ಯಮ ವಕ್ತಾರರಾದ ವೀರೇಂದ್ರ, ರಾಮಸಮುದ್ರ ಶಿವಣ್ಣ, ಮಂಜುನಾಥ್, ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಲೋಕೇಶ್, ಹನೂರು ಮಂಡಲ ಅಧ್ಯಕ್ಷ ವೃಷಬೇಂದ್ರ ಸ್ವಾಮಿ, ಗುಂಡ್ಲುಪೇಟೆ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಯಳಂದೂರು ಮಂಡಲ ಅಧ್ಯಕ್ಷ ಅನಿಲ್, ಇತರರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಸೆ.19ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಹರದನಹಳ್ಳಿ ವ್ಯಾಪ್ತಿಯ ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ನಂಜದೇವನಪುರ, ಕಲ್ಪುರ, ದೇವಲಾಪುರ, ತಮ್ಮಡಹಳ್ಳಿ, ಎನ್‌ಜೆವೈ ಹಾಗೂ ಬೇಗೂರು ವ್ಯಾಪ್ತಿಯ ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬೆಳಚಲವಾಡಿ, ನಿಟ್ರೆ, ಅಗತಗೌಡನಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪಕೋಡ ಮಾರುವ ಮೂಲಕ ಯುವ ಕಾಂಗ್ರೆಸ್ ವ್ಯಂಗ್ಯಾಚರಣೆ



ಯುವ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪಕೋಡ ಮಾರುವ ಮೂಲಕ ನರೇಂದ್ರಮೋದಿ ಹುಟ್ಟುಹಬ್ಬವನ್ನು ಆಚರಿಸಿತು.

ಚಾಮರಾಜನಗರ: ನಿರುದ್ಯೋಗ ಸಮಸ್ಯೆಗೆ ನರೇಂದ್ರಮೋದಿ ಹುಟ್ಟುಹಬ್ಬದ ದಿನವನ್ನು ಯುವ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪಕೋಡ ಮಾರುವ ಮೂಲಕ ಆಚರಿಸಿತು.

ನಗರದ ಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ತಳ್ಳುಗಾಡಿಯಲ್ಲಿ ತರಕಾರಿ, ಚಹಾ, ಪಕೋಡ ತಯಾರಿಸಿ ಮಾರುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಯೋಗೇಂದ್ರ ಮಾತನಾಡಿ ನಮ್ಮ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್‌ಭಾನು, ಪ್ರಧಾನ ಕಾರ್ಯದರ್ಶಿ ನಿಗಮ್ ಭಂಡಾರಿ ಹಾಗೂ ರಾಜ್ಯಾಧ್ಯಕ್ಷ ಮಂಜುನಾಥ್ ಅವರ ಆದೇಶದ ಮೇರೆಗೆ ದೇಶಾದ್ಯಂತ ರಾಷ್ಟ್ರೀಯ ನಿರುದ್ಯೋಗ ದಿನಾಚರಣೆ ಆಚರಣೆ ಮಾಡಲಾಗುತ್ತಿದೆ. ದೇಶದ ಪ್ರಧಾನಿ ಮೋದಿ ಅವರು ಹುಟ್ಟುಹಬ್ಬದ ದಿನವನ್ನು ಅಂತಾರಾಷ್ಟ್ರೀಯ ನಿರುದ್ಯೋಗ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತಿದೆ. ದೇಶ ದಲ್ಲಿ ನರೇಂದ್ರಮೋದಿ ನೇತೃತ್ವ ಸರ್ಕಾರ ಆಡಳಿತಕ್ಕೆ ಬಂದು 11 ನೇ ವರ್ಷಗಳೇ ಕಳೆದಿದೆ. ಈ ಅವಧಿಯಲ್ಲಿ ಹೆಚ್ಚು ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗಿದೆ ಎಂದರು.

ಕೇಂದ್ರ ಸರ್ಕಾರ ನಿರುದ್ಯೋಗ ಸಮಸ್ಯೆ ಬಗೆಹರಿಸಿದ್ದರೆ ದೇಶಾದ್ಯಂತ ಯುವ ಕಾಂಗ್ರೆಸ್ ಬೀದಿಗಿಳಿದು ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಸೈಯದ್ ಇಸ್ಮಾಯಿಲ್, ಚಂದನ, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ನಾಗೇಂದ್ರ, ಅಕ್ಷಯ್, ದರ್ಶನ, ಉಪಾಧ್ಯಕ್ಷ ನೂರ್‌ಅಹಮದ್, ಅನಂತ್, ಬ್ಲಾಕ್ ಅಧ್ಯಕ್ಷ ಶ್ರೀನಿವಾಸ್, ಉಸ್ಮಾನ್, ಸಂಜಯ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವಿಶ್ವ ನಂಜುಂಡ, ಸಚಿನ್, ಪದಾಧಿಕಾರಿಗಳಾದ ಶಶಾಂಕ್, ನವೀನ್, ಸಂಜಯ್, ಕಾರ್ತಿಕ, ಮಹದೇವ ಪ್ರಸಾದ್, ಜುನೇದ್ ಭಾಗವಹಿಸಿದ್ದರು.

ಗುಂಡ್ಲುಪೇಟೆಯಲ್ಲೂ ಮೋದಿ ಹುಟ್ಟುಹಬ್ಬ ಆಚರಣೆ



ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಪ್ರಧಾನಿ ಮೋದಿ ಬೃಹತ್ ಕಟೌಟ್ ನಿಲ್ಲಿಸಿ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡುವುದರೊಂದಿಗೆ ಮೋದಿಜಿ ಹುಟ್ಟುಹಬ್ಬವನ್ನು ಆಚರಿಸಿದರು.

ಗುಂಡ್ಲುಪೇಟೆ: ಪಟ್ಟಣದಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪ್ರಧಾನಮಂತ್ರಿ ನರೇಂದ್ರಮೋದಿಯವರ 75ನೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ವಿಶ್ವಗುರು ಬಸವೇಶ್ವರ ವೃತ್ತದಲ್ಲಿ ಮಾಜಿ ಶಾಸಕ ಹಾಗೂ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಮತ್ತು ಮಂಡಲಾಧ್ಯಕ್ಷ ಚನ್ನಂಜಯ್ಯನ ಹುಂಡಿ ಮಹದೇವ ಪ್ರಸಾದ್ ನೇತೃತ್ವದಲ್ಲಿ ಬೃಹತ್ ಕಟೌಟ್ ನಿರ್ಮಿಸಿ ಪಟಾಕಿ ಸಿಡಿಸಿ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡುವುದರೊಂದಿಗೆ ಮೋದಿಜಿ ಹುಟ್ಟುಹಬ್ಬವನ್ನು ಆಚರಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಮಾತನಾಡಿ, ದೇಶ ಕಂಡ ಅಪ್ರತಿಮ ದೇಶಭಕ್ತ ಹಾಗೂ ಉತ್ತಮ ಆಡಳಿತಗಾರರಾದ ನರೇಂದ್ರ ಮೋದಿಜಿ ಅವರು ಭಾರತವನ್ನು ವಿಶ್ವಗುರುವಾಗಿಸಿ ಜನಪರ ಕಾಳಜಿಯೊಂದಿಗೆ ಎಲ್ಲರ ವಿಕಾಸಕ್ಕೆ ಹಗಲಿರುಳು ದುಡಿಯುತ್ತಿದ್ದಾರೆ ಅವರಿಗೆ ದೇವರು ದೀರ್ಘಾಯುಷ್ಯ ಮತ್ತು ಆರೋಗ್ಯವನ್ನು ನೀಡಲಿ ಎಂದರು.

ಮಂಡಲಾಧ್ಯಕ್ಷ ಚನ್ನಂಜಯ್ಯನಹುಂಡಿ ಮಹದೇವಪ್ರಸಾದ್ ಮಾತನಾಡಿ, ದೇಶದ ಸುಭದ್ರತೆಗೆ ಮೋದಿಜಿಯವರು ತೆಗೆದುಕೊಂಡ ನಿಲುವುಗಳು ಭಾರತೀಯರಿಗೆ ಹೆಮ್ಮೆಯನ್ನು ತರಿಸುತ್ತದೆ. ಇಂತಹ ಪ್ರಧಾನ ಮಂತ್ರಿಯನ್ನು ಪಡೆದ ನಾವು ಧನ್ಯರು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡರಾದ ಹಂಗಳ ಮಹದೇವಪ್ಪ, ಹುಂಡೀಪುರ ಮಲ್ಲಿಕಾರ್ಜುನಸ್ವಾಮಿ, ಪುರಸಭಾ ಸದಸ್ಯ ನಾಗೇಶ್, ಮಂಜುನಾಥ್ ಸೇರಿದಂತೆ ಬಿಜೆಪಿಯ ವಿವಿಧ ಘಟಕದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಗುರುವಾರ 18 ಸೆಪ್ಟೆಂಬರ್ 2025

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

ಮನೆ ಮಾರಾಟಕ್ಕಿದೆ
50x75
ಹಳೆ ಮನೆ, ಪೂರ್ವ ದಿಕ್ಕು ಮೆಡ್‌ಪ್ಲಸ್ ಮೆಡಿಕಲ್ ಪಕ್ಕ, ಸೇಂಟ್ ಮೇರಿಸ್ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು
8105577324, 9341982565

ತಕ್ಷಣ ಬೇಕಾಗಿದ್ದಾರೆ
ನೆಕ್ಸಸ್ ಸೆಂಟರ್ ಸಿಟಿ ಮಾಲ್ (Nexus Centre city Mall, Nazarbad) ಮೈಸೂರಿನಲ್ಲಿರುವ ಜಾಕಿ (Jockey Exclusive Store) ಶೋರೂಂನಲ್ಲಿ ಕೆಲಸ ಮಾಡಲು ಯುವಕ–ಯುವತಿಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
8431588337
ವಯಸ್ಸಿನ ಮಿತಿ : 20 ರಿಂದ 25 ವರ್ಷ
ವೇತನ : 12 ರಿಂದ 13 ಸಾವಿರ
ವಿದ್ಯಾರ್ಹತೆ : PUC ಮೇಲ್ಪಟ್ಟು

ಬೇಕಾಗಿದ್ದಾರೆ
ಚಿಕನ್ ಅಂಗಡಿಯಲ್ಲಿ ಕೆಲಸ ಮಾಡಲು ಕೆಲಸಗಾರರು, ಕಟಿಂಗ್ ಮತ್ತು ಕ್ಲೀನಿಂಗ್‌ಗೆ ಹುಡುಗರು ಬೇಕಾಗಿದ್ದಾರೆ
ಸಂಪರ್ಕಿಸಿ : ವಿನಿ ಚಿಕನ್ಸ್
ನಂ. 1063/88, 7ನೇ ಮೇನ್, ಸಿವೇಜ್ ಫಾರಂ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು
ಮೊ.: 81050 19403 / 77953 17054

We are in need of staff for
1. Grinding ; 2. Waiters (should read English).
3. Stall in charge (male or female candidates) (should read English), (with basic skills & knowledge about restaurant is must).
4. Captain post (full time or part time) (should know English). (Male & female candidates are welcome.
UDUPI RAJ BHAVANS (Pure Veg Restaurant)
Address - No. 819, Devaraja Mohalla, Ring Road, Vijaynagar 4th Stage- 570030 (available on Google map)
Mob: 8867872569

SITES WANTED
@ Nagawala, Yelawala Anand Sagara, Nithyanandasagara Paramananda Sagara & Mysore Surroundings
Quick Reg
Contact:
9342125252

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಮನೆ ಮಾರಾಟಕ್ಕಿದೆ
20 x 30 ವಿಸ್ತೀರ್ಣದ ಹೊಸದಾಗಿ ನಿರ್ಮಿಸಲಾಗಿರುವ 3 BHK duplex ವಿನಾಯಕ ಲೇಔಟ್. ಇಲವಾಲದ ಬಳಿ ಬೆಲೆ : 67 ಲಕ್ಷ
ಸಂಪರ್ಕಿಸಿ :
9538562007

Nypunya School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಆರ್.ಟಿ.ನಗರ ಮತ್ತು ದಟ್ಟಗಳ್ಳಿ, ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ: 9606959451
ಶಾಲಾ ವಾಹನ ಚಲಾಯಿಸಲು ಹೆವಿ ಲೈಸನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ : 7022849856
ಶಾಲೆಯಲ್ಲಿ ಕೆಲಸ ಮಾಡಲು ಪುರುಷ/ ಮಹಿಳಾ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
(ಕೆಲಸದ ಅವಧಿ 8 ಗಂಟೆಗಳು) ಸಂಪರ್ಕ ಸಂಖ್ಯೆ: 7204632092 ಆಸಕ್ತರು ಒಂದು ವಾರದೊಳಗೆ ನೀಡಲಾದ ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ.

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

SITE FOR SALE
1) 60x70 N/E Corner Suvarna Nagar
2) 48x64 E/F
Near Rainbow Public School, Bogadi Road.
Mob: 8050821108

ಹೊಸ ಮನೆ ಮಾರಾಟಕ್ಕಿದೆ
ಹುಣಸೂರಿನ ಸೋಮನಹಳ್ಳಿಯ ಹೊಸ ಬಡಾವಣೆಯಲ್ಲಿ 2 BHK ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ:
Mob : 8971015729

ಬೇಕಾಗಿದ್ದಾರೆ
ಶಾಲೆಯ ಗೋಶಾಲೆಯಲ್ಲಿ ಹಸು ನೋಡಿಕೊಳ್ಳುವವರು. ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ
7760033678
9964586817

WANTED
Accountant
Tata Ace Driver
94480 67939
97395 69260

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಸಮೀಪದ ಮನೆಗೆ ಅಡುಗೆ ಮಾಡುವ ಮಹಿಳೆ ಬೇಕು ಕೆಲಸದ ಸಮಯ: ಬೆಳಿಗ್ಗೆ 7ರಿಂದ ಬೆಳಗ್ಗೆ 8.30, ಕರೆ/ವಾಟ್ಸಾಪ್
9845176247

Telecom Layout MUDA Approved
40x60 East Face Site @ Rs. 62 Lac
2.5 kms from St. Joseph's Central School Near Huyilalu, Before Yelwala, Off Hunsur Road, Mysore
Call -99649 23399

CHANGE OF NAME
I Farooq Mirza, S/o. Mahamood Mirza, residing at # 34/A, MIG, Badamakan Layout, N.R. Mohalla, Mysore-570007, Karnataka, India do hereby state on oath that in my Passport No. R-457009, my name has been wrongly mentioned as Farooq Mirza Mahamood Mirza. Hence I do swear that my correct name is FAROOQ MIRZA vide affidavi: sworn in before NotaryL.N. Rajendran dated 15 Sept 2025.
Sd/- Farooq Mirza

HOUSE FOR SALE (30X40)
New 3 BHK Independent House, East Face Door @ Lalithadri Nagar Near Ring Road, Behind Indian Oil Petrol Bunk
MOBILE
9110696752, 9663452259

ಬೇಕಾಗಿದ್ದಾರೆ
ಮೈಸೂರಿನ Zoo ಹತ್ತಿರ ದಿನಸಿ ಡೋರ ಡಿಲಿವರಿ ಮಾಡಲು Ape ಆಟೋ ಓಡಿಸುವ ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
9886664687

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ 10,000 (24 CT)
Mob: 9108146123

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ : 15000/-
7899754149

MUDA ALLOTED SITE FOR SALE
Site No. 2676, Devanuru 3rd Stage N.R Mohalla, Mysore
(Brokers Excuse)
Call:
8867669967 / 8147095179

ಶ್ರೀ ಮಣಿಕಂಠ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7022059340

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8660486818

SITES for SALE
JP Nagar Ring Road
20x30 - 22 Lakhs
30x40 - 42 Lakhs
Near Gurur Bus Stop, 1.5 Kms from JP Nagar Ring Road, Mysore. DTCP approved
(Corporation limits with E Katha)
8660105902

ವಿಶ್ವದೇವ ವೈದಿಕ ಭವನ
ದಿನಾಂಕ 8/9/25ರಿಂದ21/9/25ರವರೆಗೆ ಪಿತೃಪಕ್ಷ ಮಹಾಲಯ ಅಮಾವಾಸ್ಯೆ ಇರುವುದರಿಂದ ಆಸಕ್ತ ಬ್ರಾಹ್ಮಣ ಬಂಧುಗಳು ಬ್ರಾಹ್ಮಣ, ಪುರೋಹಿತರು, ಬ್ರಾಂಬ್ರು, ಶುಚಿ ರುಚಿಯಾದ ಅಡಿಗೆಯೊಂದಿಗೆ.
9ನೆ ದಿನದಿಂದ 14ನೆ ದಿನದ ವೈಕುಂಠದವರೆಗು ಒಂದೆ ಜಾಗದಲ್ಲಿ ಪೂರ್ವ. ಅಪರ ಕರ್ಮಾದಿಗಳನ್ನು ಮಾಡಲಾಗುತ್ತದೆ ಸಂಪರ್ಕಿಸಿ
8088799540/ 8861998817

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು ಸ್ಥಳ : ಕೊಳ್ಳೇಗಾಲ
(2) ಹೆಬ್ಬಾಳ್ ಇಂಡಸ್ಟ್ರೀಯಲ್ ಏರಿಯಾ
(3) ಮೈಸೂರು ಸಿಟಿ ಸುತ್ತಮುತ್ತ
2) ಹೌಸ್ ಕೀಪರ್(ಮಹಿಳೆ)
ಸ್ಥಳ : ವಿಜಯನಗರ, 2ನೇ ಹಂತ
3) ಹೌಸ್ ಕೀಪರ್(ಪುರುಷ, ರಾತ್ರಿ ಪಾಳಿ)
ಸ್ಥಳ : ವಿಜಯನಗರ ಎರಡನೇ ಹಂತ
9686422400, 9242406261

ಪ್ರವಾಸ
6 ದಿನಗಳ ಶ್ರೀಲಂಕಾ ಪ್ರವಾಸ 3–10–2025
6 ದಿನಗಳ ದುಬೈ ಪ್ರವಾಸ 24–10–2025
ಸುವರ್ಣ ಯಾತ್ರಾ
9480843945 / 9019462508

ಡಿಸೈನರ್ ಬೇಕಾಗಿದ್ದಾರೆ
ಕೋರಲ್ ಡ್ರಾ, ಫೋಟೋ ಷಾಪ್ ಬಲ್ಲವರು ಸಂಪರ್ಕಿಸಿ:
6366596282, 9980608548

ಸುವರ್ಣ ಯಾತ್ರಾ
4 ದಿನಗಳ ಕಾಶಿ ಪ್ರವಾಸ 4–10–2025
7 ದಿನಗಳ ಕೇರಳ ಪ್ರವಾಸ 3–10–2025
4 ದಿನಗಳ ಮಧ್ಯ ಪ್ರದೇಶ ಪ್ರವಾಸ 29–10–25
3 ದಿನಗಳ ಕಾಮಾಖ್ಯ ಪ್ರವಾಸ 29–10–25
10 ದಿನಗಳ ಮಧ್ಯ ಪ್ರದೇಶ ಮತ್ತು ಗುಜರಾತ್ ಪ್ರವಾಸ 3/11/25
9 ದಿನಗಳ ರಾಜಸ್ಥಾನ ಪ್ರವಾಸ 10/11/25
9019462508 / 9480843945

ತಂತಿ ಕಂಬದ ಬೇಲಿ ಹಾಕಲು ಮತ್ತು ಗ್ರಾವಲ್, ಕೆಮ್ಮಣ್ಣು, ಜೆಸಿಬಿ ವರ್ಕ್, ಟಿಪ್ಪರ್ ಬೇಕಾದಲ್ಲಿ ಹಾಗೂ ಸೈಟ್ & ಜಮೀನು ಲೆವಲ್ ಮಾಡಿಕೊಡಲು ಸಂಪರ್ಕಿಸಿ:
Shankar, 7259407518

ವಾರ್ಷಿಕ ಮಹಾಸಭೆ
ಪಡಕಿ ಗೃಹ ನಿರ್ಮಾಣ ಸಹಕಾರ ಸಂಘ (ನಿ) 2024–25ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 20–9–2025ನೇ ಶನಿವಾರ ಬೆಳಿಗ್ಗೆ 10–30 ಗಂಟೆಗೆ "ಹೋಟೆಲ್ ಹರಿ ಗೋವಿಂದಾಸ್", 822/ಎ, ವಾಣಿ ವಿಲಾಸ ರಸ್ತೆ, ಸಿದ್ದಪ್ಪ ವೃತ್ತ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ, ಮೈಸೂರು–570 004 ಇಲ್ಲಿ ನಡೆಯಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ
ಸಹಿ/– ಅಧ್ಯಕ್ಷರು
ದೂರವಾಣಿ ಸಂಖ್ಯೆ: 0821-2430991

WANTED OFFICE ASSISTANT / BUSINESS DEVELOPMENT EXECUTIVE FOR HEALTHCARE
AT MYSORE OFFICE FOR OFFICE ASSISTANT MALE OR FEMALE & FOR MYSORE / MANDYA BUSINESS DEVELOPMENT EXECUTIVE / FRESH OR HAVING SALES & SUPPLY EXPERIENCE IN / HEALTHCARE / SURGICAL / PHARMA OR MEDICAL DEVICES, FULL OR PART TIME PERSON CAN ALSO APPLY. SEND CV TO myfamilycustomercare@gmail.com
PH - 888-464-5218

WALK IN INTERVIEW
Social and English Teacher for High School (Qualified with experience)
Security family (accommodation free) Driver cum Office staff (Experience with any degree)
Place near yelwala
Contact:
7204284724, 8722963130

ಅಭಿನವ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು
ನಂ. 92/ಎ, ಆಲನಹಳ್ಳಿ–2 ನಜರ್‌ಬಾದ್ ಮೊಹಲ್ಲಾ, ಬನ್ನೂರು ಮುಖ್ಯ ರಸ್ತೆ, ಮೈಸೂರು–28
ಪ್ರಕಟಣೆ
ಮೈಸೂರಿನ ಸುತ್ತಮುತ್ತ ಇರುವ ಮಾನ್ಯ ಭೂ ಅಭಿವೃದ್ಧಿದಾರರಲ್ಲಿ ನಮ್ಮ ಸಂಘವು ಮನವಿ ಮಾಡುವುದೇನೆಂದರೆ, ನಮ್ಮ ಸಂಘಕ್ಕೆ ತುರ್ತಾಗಿ ಮೈಸೂರಿನ ಸುತ್ತಮುತ್ತಲಿನ 18 ಕಿ.ಮೀಟರ್ ವ್ಯಾಪ್ತಿಯ ಒಳಗಡೆ, ಬನ್ನೂರು ರಸ್ತೆ, ಟಿ. ನರಸೀಪುರ ರಸ್ತೆ ಹಾಗೂ ಬೋಗಾದಿ ರಸ್ತೆಗಳಲ್ಲಿ ಬರುವಂತೆ ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ಸಂಘಕ್ಕೆ ಕೊಡುವ ಆಸಕ್ತಿಯುಳ್ಳ ಭೂ ಅಭಿವೃದ್ಧಿದಾರರು ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಿ:
Mob: 9449129606, 9606357541

ಬೇಕಾಗಿದ್ದಾರೆ
INSTA Courier ಕಂಪನಿಗೆ ಡೆಲಿವರಿ ಮಾಡಲು ಯುವಕ / ಯುವತಿಯರು (18K-35K)
(ಸ್ಥಳ: ಇಲವಾಲ ಹೋಬಳಿ).
9538501859, 9019123643

ಕೆಲಸಕ್ಕೆ ಬೇಕಾಗಿದ್ದಾರೆ
ವೈನ್‌ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯೋಮಿತಿ 22–35.
ಮೈಸೂರಿನವರಿಗೆ ಆದ್ಯತೆ.
8310449772, 0821-3584976

ಶ್ರೀ ಗಜಾನನ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927

WANTED
Boys / Retired Person For Pomplets distribution (No travelling)
Salary: Rs. 7000 per month.
Mob: 8310008208

WANTED FEMALE OFFICE ASSISTANT
To our Auditor Office (Preferable to Hebbal Surrounding Area)
Education : PUC + Computer knowledge Essentials
Contact Nagaraje Gowda Auditor & Tax Consultant No 240, 2nd Floor, Vijayanagar Railway Colony Main Road, Near Surya Bekary Hebbal, Mysore - 570016
Mob : 9740285064

ತಕ್ಷಣ ಬೇಕಾಗಿದ್ದಾರೆ
ಕೂರ್ಗಳ್ಳಿ, ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20000+ W/o (8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819, 9620777819

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
6361056646, 7676844160

FOR SALE
1. 20x30 Old Houses @ Kuvempunagar, RK Nagar
2. 20x30 New Duplex House Near Utthanahalli, MUDA Approved
3. 30x40, 40x60@ Srinagar, Shardha Layout, JP Nagar
4. 30x40 Sites Near RT Nagar BSNL Layout @ Just 22 Lakhs
Newly Constructing Apartments. Commercial Properties Available.
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಕೂರ್ಗಳ್ಳಿ ಪಕ್ಕದ ಕಾರ್ಖಾನೆಗೆ ITI ಆದವರು, 50 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ಸ್, ಜಯಲಕ್ಷ್ಮೀಪುರಂ, ಹಿನಕಲ್, ಬನ್ನಿಮಂಟಪ, ರೇಸ್‌ಕೋರ್ಸ್ ಪಕ್ಕ ಮತ್ತು ಹೆಬ್ಬಾಳ್.
9900481819, 9972945905

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಶಾಲೆಗೆ ಆಫೀಸ್ ಅಸಿಸ್ಟೆಂಟ್ ಹಾಗೂ ಸೆಕ್ಯೂರಿಟಿ ಕೆಲಸ ನಿರ್ವಹಿಸಲು ಜನ ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಈ ಕೆಳಗಿನ ದೂರ ವಾಣಿಯನ್ನು ಸಂಪರ್ಕಿಸತಕ್ಕದ್ದು.
Mob: 7760830850

ಮನೆ ಭೋಗ್ಯಕ್ಕೆ ಇದೆ
2 BHK, (30X40, (GROUND FLOOR), ರಾಜೀವ್‌ನಗರ, ರಿಂಗ್ ರಸ್ತೆ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ, ಮೈಸೂರು.
8762101799, 8431946515

ಬೇಕಾಗಿದ್ದಾರೆ
ಅಂಬಾರಿ ರೆಸ್ಟೋರೆಂಟ್‌ಗೆ ಜೆ.ಕೆ. ಟೈರ್ಸ್, ರೇಡಿಯಲ್ ಪ್ಲಾಂಟ್ ಎದುರು, ಹೆಬ್ಬಾಳ್, ಮೈಸೂರು ಸಪ್ಲೈಯರ್ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ ತಿಂಗಳಿಗೆ 16,000/– ರೂಗಳು
9611415014, 9591408601

SITE FOR SALE
30x40
Judicial Layout, near Christ Public School, Dattagalli
(Brokers Excuse)
Mob: 8660951678

ಬೇಕಾಗಿದ್ದಾರೆ
ಟಾಟಾ ಏಸ್ ಡ್ರೈವರ್
ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು
ಹೆಲ್ಪರ್ ಹುಡುಗರು ಬೇಕಾಗಿದ್ದಾರೆ
ಆಕರ್ಷಕ ಸಂಬಳ
ಅಶೋಕ ರೋಡ್, ಮೈಸೂರು
Call: 95382 22384
0821-4267800

ಸಂಪು ಮತ್ತು ಟ್ಯಾಂಕ್
ಸೋಲಾರ್ ಸರ್ವೀಸ್
Mob: 8197383645

ವಾರ್ಷಿಕ ಮಹಾಸಭೆ
ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 24–9–2025ರ ಬುಧವಾರದಂದು ಬೆಳಿಗ್ಗೆ 10.30ರ ಸಮಯಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಶಿವಣ್ಣ ಗೌಡರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ರಸ್ತೆ, 1ನೇ ಹಂತ, ವಿಜಯನಗರ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ ಆದ್ದರಿಂದ ಸಂಘದ ಸದಸ್ಯರುಗಳೆಲ್ಲರೂ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತಿದ್ದೇವೆ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಕಾರ್ಯದರ್ಶಿ

ಡ್ರೈವರ್ ಬೇಕಾಗಿದ್ದಾರೆ
ನಾಲ್ಕು ಚಕ್ರದ ಗೂಡ್ಸ್ ವಾಹನ ಚಲಾಯಿಸಲು ಡಿಎಲ್ ಹೊಂದಿರುವ ಅಭ್ಯರ್ಥಿಗಳು (ಫರ್ನಿಚರ್ ಮತ್ತು ಮ್ಯಾಟ್ರೆಸ್ ಡೆಲಿವರಿಗೆ). ವಯೋಮಿತಿ: 18 ರಿಂದ 40 ವರ್ಷ. ಸಂಬಳ: 18,000.
ESI & PF ಸೌಲಭ್ಯವಿರುತ್ತದೆ.
Mob: 8884551387

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಸಸ್ಯಾಹಾರಿ ಹೋಟೆಲ್‌ಗೆ ಬೇಕಾಗಿದ್ದಾರೆ
* ಸೌತ್ ಇಂಡಿಯನ್ ಭಟ್ಟರು
* ದೋಸೆ ಭಟ್ಟರು
* ಕೌಂಟರ್ ಬಾಯ್ಸ್
ಊಟ, ವಸತಿ ಇರುತ್ತದೆ.
Mob: 9241734399

ಮೊಬೈಲ್ ಶಾಪ್‌ಗೆ ಬೇಕಾಗಿದ್ದಾರೆ
ಅನುಭವವುಳ್ಳ ಮೊಬೈಲ್ ಟೆಕ್ನಿಷಿಯನ್ ಬೇಕಾಗಿದ್ದಾರೆ.
ಊಟ, ವಸತಿ ಇರುತ್ತದೆ.
Mob: 9241734399



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ತಕ್ಷಣ ಬೇಕಾಗಿದ್ದಾರೆ
Sri Sapthagiri Builders & Developers, Mysuru, Hebbal 1st Stage,
Tele Callers - 02
Basic Salary 10k + Insentive (earn upto 17k +)
9591828444, 9731667555

ಹೋಟೆಲ್‌ಗೆ ಬೇಕಾಗಿದ್ದಾರೆ
ಮಾಂಸಾಹಾರಿ ಅಡುಗೆ ಭಟ್ಟರು/ ಅಸಿಸ್ಟೆಂಟ್ ಭಟ್ಟರು ಬೇಕಾಗಿದ್ದಾರೆ.
9901646655

Wanted
Wanted Teachers for higher primary School. English-1, Kannada-1, Mathematics-1, Computer 1, Teachers Immediatly contact
8197057626
9845390377

HOUSES & OFFICE SPACE FOR RENT
@ SARASWATHIPURAM KUVEMPUNAGAR & SURROUNDINGS
S.S. PROPERTY SERVICES (OPP KUVEMPU SCHOOL) S.S. PURAM, MYSORE
Call:
9342125252, 0821-2489111

ಬೇಕಾಗಿದ್ದಾರೆ
ಚಿಕನ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವ ಇರುವ ಹುಡುಗರು ಬೇಕಾಗಿದ್ದಾರೆ. ಅಂಗಡಿಯಲ್ಲಿ ಉಳಿದುಕೊಳ್ಳುವವರಿಗೆ ಮೊದಲ ಆದ್ಯತೆ
7406992205

ಬೇಕಾಗಿದ್ದಾರೆ
ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ S/Sup, S/Guard, L/Guard, ಬೇಕಾಗಿದ್ದಾರೆ. ಮೈಸೂರು : ಸೆಕ್ಯೂರಿಟಿ ಗಾರ್ಡ್ – 20000 ವೇತನ ಮದ್ದೂರು : ಗೆಜ್ಜಲಗೆರೆ ಇಂಡಸ್ಟ್ರಿಯಲ್‌ಗೆ S/Sup, S/Guard, L/Guard, ಬೇಕಾಗಿದ್ದಾರೆ. ತಿಂಗಳ ವೇತನ –18,000/– 26 ದಿನಕ್ಕೆ, ವಿದ್ಯಾರ್ಹತೆ : S.S.L.C, PUC, ವಯಸ್ಸು : 25 ರಿಂದ 35 ವರ್ಷ
Ph:9731414467

SITE FOR SALE
30x50 S/F
KBL Wood Rose, Shanthaveri Gopalgowda Nagara
9972958878

Marketing Executive ಬೇಕಾಗಿದ್ದಾರೆ.
Salary 10000-15000
2 years Experience
9900251990
Product, Interior Work, Curtain, Mosquito Screen

ಲ್ಯಾಂಡ್ ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಅರಸನಕೆರೆ ಗ್ರಾಮದ ಪಕ್ಕದಲ್ಲಿರುವ 1/ 2 ಎಕರೆ(20 ಕುಂಟೆ) ಗ್ರಾಮ ಠಾಣಾ ಸೈಟು ಆಗುವ ಜಾಗ 1 ಕುಂಟೆಗೆ 3 ಲಕ್ಷ ನೆಗೋಷಿಬಲ್ ಆಗುತ್ತದೆ ಲೀಗಲ್ ಡಾಕ್ಯುಮೆಂಟ್ ನೋಂದಣಿಗೆ ರೆಡಿ ಇದೆ. ಸಂಪರ್ಕಿಸಿ
9342124023

PGಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ, ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ, ವಸತಿ ಇರುತ್ತದೆ.
9535744143, 9986622769

ವಾರ್ಷಿಕ ಮಹಾಸಭೆ
ಪಡಕಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮೈಸೂರು 2024–25ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 20–09–2025ನೇ ಶನಿವಾರ ಬೆಳಗ್ಗೆ 12.00 ಗಂಟೆಗೆ "ಹೋಟೆಲ್ ಹರಿ ಗೋವಿಂದಾಸ್" # 822/ಎ, ವಾಣಿ ವಿಲಾಸ ರಸ್ತೆ, ಸಿದ್ದಪ್ಪ ವೃತ್ತ, ಚಾಮರಾಜ ಮೊಹಲ್ಲಾ, ಲಕ್ಷ್ಮೀಪುರಂ, ಮೈಸೂರು–570004 ಇಲ್ಲಿ ನಡೆಯಲ್ಲಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಹಾಜರಾಗಬೇಕಾಗಿ ವಿನಂತಿ.
ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ
ಸಹಿ/– ಅಧ್ಯಕ್ಷರು
ದೂರವಾಣಿ ಸಂಖ್ಯೆ: 0821-2524154

ಮನೆ ಕಟ್ಟಿಸುವವರ ಗಮನಕ್ಕೆ
ಚದುರಡಿಗೆ 1900/- ರಂತೆ ಉತ್ತಮ ಗುಣಮಟ್ಟವುಳ್ಳ ಸಾಮಗ್ರಿಗಳನ್ನು ಬಳಸಿ ನಿಮ್ಮ ಕನಸಿನ ಮನೆಯನ್ನು ಕಟ್ಟಿಕೊಡಲಾಗುವುದು. ಸಾಲದ ಸೌಲಭ್ಯ ಮಾಡಿಕೊಡಲಾಗುತ್ತದೆ.
S.R. Constructions
ದಿವಾನ್ಸ್ ರಸ್ತೆ, ಮೈಸೂರು–570024
ಸಂಪರ್ಕಿಸಿ:
6364281689

NEWLY OPENING FLEX PRINTING SHOP REQUIRE
Position Available:
Graphic Designer Male-1, Female-1 Nos, Corel Draw, Photoshop, Minimum 1 year Experience required.
Flex Printing Machine Operator -1, LED Board Maker -1, Salary best in industry, Interested Candidate send your resume
Mob: 7204935087/7306811538

CHANGE OF NAME
I RANI NANDISH.R.S W/O NANDISH. S, RESIDENT OF NO 85/A, A&B BLOCK, NAVILU ROAD, KUVEMPUNAGAR, R.K.NAGAR, MYSURU-570022(K.S), HAVE CHANGED MY NAME FROM RANI NANDISH R.S TO RANI.R.S, SWORN BEFORE NOTARY DATED 18-9-2025 BY MY OWN WILL & WISH
Sd/- Rani R.S

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೂಲ ಸ್ಥಾನೇಶ್ವರ ಹಾಗೂ ಗಣಪತಿ ದೇವಾಲಯಗಳಲ್ಲಿ ಸ್ವಚ್ಛತಾ ಕಾರ್ಯ

ತಿ.ನರಸೀಪುರದಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ

● ದೇಶದ ಗಡಿ ಬಲಿಷ್ಠಗೊಳಿಸಿದ ಮೋದಿ: ಮಾಜಿ ಎಂಎಲ್‌ಸಿ ಸಿ.ರಮೇಶ್ ● ಮೋದಿ ಆಡಳಿತ ದೇಶಕ್ಕೆ ಅನಿವಾರ್ಯ: ವರುಣ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ

ತಿ.ನರಸೀಪುರ, ಸೆ.17– ಪಟ್ಟಣದ ಮೂಲ ಸ್ಥಾನೇಶ್ವರ ಹಾಗೂ ಗಣಪತಿ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಮೂಲಕ ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಮುಖಂಡರು ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ದೇಶದ ಗಡಿ ಬಲಿಷ್ಠಗೊಳಿಸಿದ ಮೋದಿ: ದೇಶದ ಮುಂದಿನ ಭವಿಷ್ಯಕ್ಕಾಗಿ ಆರ್ಥಿಕ ಭದ್ರ ಬುನಾದಿ ಮತ್ತು ದೇಶದ ಗಡಿ ಬಲಿಷ್ಠಗೊಳಿಸಿದ ಪ್ರಧಾನಿ ಮೋದಿ ಅತ್ಯುತ್ತಮವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ತಿಳಿಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ವತಿಯಿಂದ ಪ್ರಧಾನಿ ಮೋದಿ ಜನ್ಮದಿನದ ಅಂಗವಾಗಿ ಇತಿಹಾಸ ಪ್ರಸಿದ್ಧ ಮೂಲ ಸ್ಥಾನೇಶ್ವರ ದೇವಾಲಯ ಸ್ವಚ್ಛಗೊಳಿಸಿ ಮಾತನಾಡಿದ ಅವರು, ದೇಶದ ಪ್ರಧಾನಿಯಾಗಲು ಅರ್ಹತೆ ಇರುವ ಏಕೈಕ ವ್ಯಕ್ತಿ ಎಂದರೆ ಅದು ನರೇಂದ್ರ ಮೋದಿ ಎಂದರು.

ಪ್ರಧಾನಿ ಎಂದಾಕ್ಷಣ ಮೋದಿ ಅವರ ಭಾವಚಿತ್ರ ಕಣ್ಮುಂದೆ ಬಂದು ಹೋಗುತ್ತದೆ. ಪ್ರಧಾನಿಯಾಗಿ ನರೇಂದ್ರ ಮೋದಿ ಅವರನ್ನು ಮಾತ್ರ





ಪ್ರಧಾನಿ ಮೋದಿ ಜನ್ಮದಿನ ಹಿನ್ನೆಲೆಯಲ್ಲಿ ತಿ.ನರಸೀಪುರ, ವರುಣ ಬಿಜೆಪಿ ಕಾರ್ಯಕರ್ತರು ಪಟ್ಟಣದ ಮೂಲಸ್ಥಾನೇಶ್ವರ ಹಾಗೂ ಗಣಪತಿ ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡರು.

ಕಲ್ಪಿಸಿಕೊಳ್ಳಲು ಸಾಧ್ಯವೇ ಹೊರತು ಬೇರಾವ ವ್ಯಕ್ತಿಯನ್ನು ಆ ಜಾಗದಲ್ಲಿ ಕಲ್ಪಿಸಿಕೊಳ್ಳಲಾಗದು. ಹಾಗಾಗಿ ಮುಂದಿನ ಬಾರಿಯೂ ಅವರೇ ನಮ್ಮ ದೇಶದ ಪ್ರಧಾನ ಮಂತ್ರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಅವರು ಪ್ರಧಾನಿಯಾಗುವುದನ್ನು ತಪ್ಪಿಸಲು ಇಂಡಿಯಾ ಸೇರಿದಂತೆ ಯಾವುದೇ ಒಕ್ಕೂಟದಿಂದಲೂ ಸಾಧ್ಯವಿಲ್ಲ ಎಂದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿದರು. ಕ್ಷೇತ್ರಾಧ್ಯಕ್ಷ ಶಿವಕುಮಾರ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ್, ಪುಟ್ಟಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಜಯರಾಮೇಗೌಡ, ಮೂಗೂರು ಸಿದ್ದರಾಜು, ಮಾಜಿ ಪುರಸಭಾ ಸದಸ್ಯ ಎನ್.ಲೋಕೇಶ್, ಟೌನ್ ಅಧ್ಯಕ್ಷ ನಂಜುಂಡಸ್ವಾಮಿ, ಎಸ್ಸಿ ಮೋರ್ಚಾ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ಕಾರ್ ಮಲ್ಲಪ್ಪ, ಕಾರ್ಯಾಲಯ ಕಾರ್ಯದರ್ಶಿ ರಾಜಶೇಖರ್, ಟೌನ್ ಕಾರ್ಯದರ್ಶಿ ರಮೇಶ್, ಬೂತ್ ಅಧ್ಯಕ್ಷ ದರ್ಶನ್, ಮಹದೇವ್, ರಮೇಶ್, ಜಿಲ್ಲಾ ಮುಖಂಡರಾದ ಮಹದೇವ ಶೆಟ್ಟಿ ಸೇರಿದಂತೆ ಇತರರಿದ್ದರು.

ಮೋದಿ ಆಡಳಿತ ದೇಶಕ್ಕೆ ಅನಿವಾರ್ಯ: ಪ್ರಧಾನಿ ಮೋದಿ ಅವರ ಆಡಳಿತ ದೇಶಕ್ಕೆ ಅನಿವಾರ್ಯ ಎಂದು ವರುಣ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದ ಸುತ್ತಮುತ್ತಲ ಆವರಣವನ್ನು ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರೊಂದಿಗೆ ಸ್ವಚ್ಛಗೊಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಹುಟ್ಟುಹಬ್ಬ ಆಚರಿಸಿ ಮಾತನಾಡಿದ ಅವರು, ದೇಶದ ಹೆಮ್ಮೆಯ ಪ್ರಧಾನಿ ಮೋದಿ ಅವರು ಜಗತ್ತಿನಲ್ಲೇ ಅತ್ಯುತ್ತಮ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮೋದಿಯವರ ದಕ್ಷ ಆಡಳಿತಕ್ಕೆ ಪ್ರಪಂಚದ ಅನೇಕ ರಾಷ್ಟ್ರಗಳು ಮೆಚ್ಚುಗೆ ವ್ಯಕ್ತಪಡಿಸಿವೆ. ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾ ಸೇರಿದಂತೆ ಅನೇಕ ದೇಶದ ಗಣ್ಯರು ಮೋದಿ ಆಡಳಿತಕ್ಕೆ ಮನ ಸೋತಿದ್ದಾರೆ. ಇಂತಹ ದಕ್ಷ ಹಾಗೂ ರಾಜಕೀಯ ನಿಪುಣ, ಚಾಣಾಕ್ಷ ಆಡಳಿತಗಾರರ ಅಡಿ ವಾಸ ಮಾಡುವುದು ದೇಶದ ಪ್ರತಿಯೊಬ್ಬ ಪ್ರಜೆಯ ಪುಣ್ಯವಾಗಿದ್ದು, ದೇಶದ ಪ್ರಗತಿಗೆ ಶ್ರಮಿಸಲು ಮೋದಿಯಂತಹ ನೂರಾರು ನಾಯಕರು ನಮ್ಮ ನೆಲದಲ್ಲಿ ಜನ್ಮ ತಾಳಬೇಕು ಎಂದರು.

ಪ್ರಧಾನಿ ಮೋದಿ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ಇಂದಿನಿಂದ ಆರಂಭಗೊಂಡಿರುವ ವಿವಿಧ ಸೇವಾ ಕಾರ್ಯಕ್ರಮಗಳು ಅ.2ವರೆಗೂ ನಿರಂತರವಾಗಿ ನಡೆಯಲಿದೆ. ಭೈರಾಪುರ ಶಕ್ತಿ ಕೇಂದ್ರದಿಂದ ಆರಂಭಗೊಂಡಿರುವ ಸೇವಾ ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರು ದೇವಸ್ಥಾನ, ಸ್ಮಶಾನಗಳ ಸ್ವಚ್ಛತೆ ಕಾರ್ಯದಲ್ಲಿ ನಿರತರಾಗಲಿದ್ದಾರೆ. ರಕ್ತದಾನ ಶಿಬಿರ ಕೂಡ ಆಯೋಜಿಸಲಾಗುತ್ತಿದೆ ಎಂದರು.

ಈ ವೇಳೆ ಪ್ರಧಾನ ಕಾರ್ಯದರ್ಶಿ ಅಲಗೂಡು ವೆಂಕಟರಮಣಶೆಟ್ಟಿ, ಕೆಇಬಿ ಸಿದ್ದಲಿಂಗಸ್ವಾಮಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಂದೀಶ್, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಹೆಳವರಹುಂಡಿ ಮಹೇಶ್, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಸುರೇಶ್, ಭುವನ್, ಸಂತೋಷ್, ಸೋಮಶೇಖರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮಿ, ಮಂಜುನಾಥ್, ಸುರೇಶ್, ಪ್ರಭು, ಆಟೋ ಮೂರ್ತಿ ಮತ್ತಿತರರಿದ್ದರು.

ಮೋದಿ ಹುಟ್ಟುಹಬ್ಬ: ಬೃಹತ್ ಆರೋಗ್ಯ, ರಕ್ತದಾನ ಶಿಬಿರ



ಹುಣಸೂರಲ್ಲಿ ರಕ್ತದಾನ ಶಿಬಿರ ನಡೆಯಿತು.

ಹುಣಸೂರು, ಸೆ.17– ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹುಣಸೂರು ಬ್ಲಡ್ ಸೆಂಟರ್, ಮೈಸೂರಿನ ಜೀವಧಾರ ಸಂಸ್ಥೆ, ಹುಣಸೂರು ಗ್ರಾಮಾಂತರ ಮತ್ತು ನಗರ ಮಂಡಲದ ಬಿಜೆಪಿ ವತಿಯಿಂದ ಬೃಹತ್ ಆರೋಗ್ಯ, ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ 160 ಮಂದಿ ಪರೀಕ್ಷೆಗೆ ಒಳಪಟ್ಟು ಚಿಕಿತ್ಸೆ ಪಡೆದರು. 37 ಮಂದಿ ರಕ್ತದಾನ ಮಾಡಿದರು. ಈ ವೇಳೆ ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಂತರಾಜು, ನಗರ ಮಂಡಲ ಅಧ್ಯಕ್ಷ ನಾರಾಯಣ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಉಪಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ರಮೇಶ್ ಕುಮಾರ್, ಮಂಜುನಾಥ್, ಸೋಮಶೇಖರ್, ನಾಗಣ್ಣಗೌಡ, ಸತೀಶ್ ಕುಮಾರ್, ಪ್ರಫುಲ್ ಮಲ್ಲಾಡಿ, ಕಮಲಮ್ಮ, ಯಶೋದಮ್ಮ, ವೆಂಕಟಮ್ಮ, ಪ್ರಸನ್ನ, ರಾಮಚಂದ್ರು, ಶಿವಕುಮಾರ್, ಮಧು, ರವಿ, ನಂಜುಂಡ ಇತರರಿದ್ದರು.

ಅಂತರಸಂತೆ ಡೇರಿಗೆ 7 ಲಕ್ಷ ರೂ. ನಿವ್ವಳ ಲಾಭ

ಮೈಮುಲ್ ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್ ಮಾಹಿತಿ

ಹೆಚ್.ಡಿ.ಕೋಟೆ, ಸೆ.17– ನಿತ್ಯ 1200 ಲೀಟರ್ ಹಾಲು ಸಂಗ್ರಹಿಸುವ ಮೂಲಕ ಅಂತರಸಂತೆ ಹಾಲು ಉತ್ಪಾದಕರ ಸಹಕಾರ ಸಂಘ 7 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಮೈಮುಲ್ ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್ ತಿಳಿಸಿದರು.

ತಾಲೂಕಿನ ಅಂತರಸಂತೆ ಡೇರಿ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಯಲ್ಲಿ ಮಾತನಾಡಿದ ಅವರು, ಕೊಟ್ಟಿಗೆ ಹಾಗೂ ವೈಯಕ್ತಿಕ ನೈರ್ಮಲ್ಯ, ಪಾತ್ರೆಗಳ ಸ್ವಚ್ಛತೆಯಿಂದ ಶುದ್ಧ ಹಾಲು ಉತ್ಪಾದನೆ ಮಾಡುವ ಮೂಲಕ ಹಾಲಿನ ಜೈವಿಕ ಗುಣಮಟ್ಟ ಕಾಪಾಡುವುದು. ವೈಜ್ಞಾನಿಕವಾಗಿ ರಾಸುಗಳ ನಿರ್ವಹಣೆ ಹಾಗೂ ಸಮತೋಲನ ಪಶು ಆಹಾರ, ಖನಿಜ ಮಿಶ್ರಣ ಬಳಕೆಯಿಂದ ಹಾಲಿನ ಗುಣಮಟ್ಟ ಹಾಗೂ ಇಳುವರಿ ಹೆಚ್ಚಿಸಲು ಸಲಹೆ ನೀಡಿದರು.



ಸಭೆಯಲ್ಲಿ ಹಾಲು ಉತ್ಪಾದಕರಿಗೆ ಹಾಲಿನ ಕ್ಯಾನ್‌ಗಳನ್ನು ವಿತರಿಸಲಾಯಿತು.

ಮೈಮುಲ್ ವತಿಯಿಂದ ಹಾಲು ಉತ್ಪಾದಕರಿಗೆ ಉಚಿತ ವಿಮೆ ಸೌಲಭ್ಯ, ರಿಯಾಯಿತಿ ದರದಲ್ಲಿ ರಾಸುಗಳಿಗೆ ವಿಮೆ, ರಬ್ಬರ್ ಮ್ಯಾಟ್, ಮೇವು ಕತ್ತರಿಸುವ ಯಂತ್ರ, ಹಾಲು ಕರೆಯುವ ಯಂತ್ರ ಮತ್ತು ಹಾಲು ಉತ್ಪಾದಕರ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ನೀಡುತ್ತಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

ಇದೇ ವೇಳೆ ಪ್ರಗತಿಪರ ಹಾಲು ಉತ್ಪಾದಕರಿಗೆ ಹಾಲಿನ ಕ್ಯಾನ್ ವಿತರಿಸಲಾಯಿತು.

ಸಭೆಯಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಸಂಘದ ಅಧ್ಯಕ್ಷ ಎ.ಪಿ. ನಾಗರಾಜು, ಹಿರಿಯ ಸಹಕಾರಿಗಳಾದ ಬಸವರಾಜಪ್ಪ, ಸಿಇಓ ಶ್ರೀಧರ, ಉಪಾಧ್ಯಕ್ಷ ಕರಿಯಯ್ಯ, ಶ್ಯಾಮ್ ಸುಂದರ್, ಎ.ಎನ್. ಮಂಜುನಾಥ್, ಎ.ಎನ್.ರವೀಂದ್ರ, ಅರುಣ್ ಗೋಪಾಲ್, ಎ.ಆರ್.ಅರವಿಂದ್, ತಿಮ್ಮನಾಯಕ, ಪ್ರಮಿಳಾ, ಬೇಬಿ, ಸಂಘದ ಸದಸ್ಯರು, ಹಾಲು ಉತ್ಪಾದಕರು ಹಾಜರಿದ್ದರು.

ಪಿ.ಪಟ್ಟಣದಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ



ಪಿರಿಯಾಪಟ್ಟಣದ ಬಿಜೆಪಿ ಕಚೇರಿಯಲ್ಲಿ ಕಲಾವಿದ ರಾಮೇಗೌಡ, ವಿದ್ಯಾರ್ಥಿನಿ ಉಮ್ಮೆ ಕುಲ್ಸುಮ್, ಪೌರ ಕಾರ್ಮಿಕರಾದ ರಾಜೇಶ್ವರಿ, ಮಂಜುಳಾ, ಮಹೇಶ್ ಹಾಗೂ ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ, ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಟಿ.ರಮೇಶ್, ತಾಲೂಕು ಘಟಕದ ಮಾಜಿ ಅಧ್ಯಕ್ಷರಾದ ಎಂ.ಎಂ.ರಾಜೇಗೌಡ, ಆರ್.ಟಿ.ಸತೀಶ್, ಮುಖಂಡರಾದ ಲೋಕಪಾಲಯ್ಯ, ಚನ್ನಬಸವರಾಜು, ರವಿ, ಪ್ರಕಾಶ್, ಸತೀಶ್, ಅರುಣ್ ರಾಜ, ರಮ್ಯಾ, ಮೀನಾಕ್ಷಿ, ಗಾಯಿತ್ರಿ, ಸುಬ್ಬಣ್ಣ ಸೇರಿದಂತೆ ಹಲವು ಪದಾಧಿಕಾರಿಗಳು ಇದ್ದರು.

ಮಿನಿ ಗ್ಯಾಲಕ್ಸಿ ಹಾಲಿನ ಕೇಂದ್ರ ಉದ್ಘಾಟನೆ

ತಿ.ನರಸೀಪುರ, ಸೆ.17– ಪಟ್ಟಣದಲ್ಲಿ 3 ಸಾವಿರ ಲೀಟರ್ ಹಾಲು ಸಂಗ್ರಹಿಸಿಡುವ ಕೋಲ್ಡ್ ಸ್ಟೋರೇಜ್ ತೆರೆಯಲಾಗಿದ್ದು, ಗ್ರಾಹಕರಿಗೆ ಹಾಲು ಮಾರಾಟ ಮಾಡುವ ನಂದಿನಿ ಬೂತ್ ಕೇಂದ್ರದ ಏಜೆಂಟರು ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ಪಟ್ಟಣದಲ್ಲಿ ನೂತನ ನಂದಿನಿ ಮಿನಿ ಗ್ಯಾಲಕ್ಸಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂದು ರಾಜ್ಯದ ವಿವಿಧೆಡೆ ಏಕಕಾಲಕ್ಕೆ 500 ನಂದಿನಿ ಗ್ಯಾಲಕ್ಸಿ ಕೇಂದ್ರಗಳನ್ನು ಉದ್ಘಾಟಿಸುತ್ತಿದ್ದು, ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ 20 ಕೇಂದ್ರಗಳು ಉದ್ಘಾಟನೆಯಾಗುತ್ತಿವೆ. ತಿ.ನರಸೀಪುರದಲ್ಲಿ ಇದೇ ಮೊದಲ ಬಾರಿಗೆ 3 ಸಾವಿರ ಲೀಟರ್ ಹಾಲು ಸಂಗ್ರಹಿಸುವ ಕೋಲ್ಡ್ ಸ್ಟೋರೇಜ್ ಅನ್ನು ತೆರೆಯಲಾಗುತ್ತಿದ್ದು, ಇದರಿಂದ ಗ್ರಾಹಕರಿಗೆ ಎಲ್ಲಾ ನಂದಿನಿ ಕೇಂದ್ರಗಳಲ್ಲಿ ಸದಾ ಕಾಲ ಹಾಲು ದೊರೆಯಲಿದೆ. ಹಾಲು ಮಾರಾಟ ಮಾಡುವ



ಮಿನಿ ಗ್ಯಾಲಕ್ಸಿ ಹಾಲಿನ ಕೇಂದ್ರವನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ಏಜೆಂಟರು ಇದರ ಸದುಪಯೋಗಕ್ಕೆ ಮುಂದಾಗಬೇಕು. ಒಕ್ಕೂಟದಿಂದ ಹಾಲು ಬರದೇ ಇದ್ದ ಸಂದರ್ಭ ಈ ಕೇಂದ್ರದಿಂದ ಹಾಲು ಖರೀದಿ ಮಾಡಿ ಗ್ರಾಹಕರಿಗೆ ನೀಡುವಂತೆ ತಿಳಿಸಿದರು.

ನಂದಿನಿ ಮೇಲೆ ಕಾಳಜಿ ಹೊಂದಿರುವ ಸಿದ್ದರಾಮಯ್ಯ: ಸಿಎಂ ಸಿದ್ದರಾಮಯ್ಯನವರು ರೈತರ ಮೇಲಿನ ಕಾಳಜಿಯಿಂದ ರಾಜ್ಯದಲ್ಲಿ 500 ಮಾರಾಟ ಮಳಿಗೆಗಳಿಗೆ ಚಾಲನೆ ನೀಡಿದ್ದಾರೆ. ರೈತರ ಹಿತದೃಷ್ಟಿಯಿಂದ ರೈತರದ್ದೇ ಸಂಸ್ಥೆಯಾಗಿರುವ ನಂದಿನಿ ಹೆಮ್ಮರವಾಗಿ ಬೆಳೆಯಬೇಕೆಂಬುದು ಅವರ ಏಕೈಕ ಉದ್ದೇಶವಾಗಿದೆ. ರಾಜ್ಯದಲ್ಲಿ ಬೇರೆ ಬ್ರ್ಯಾಂಡ್ ಹಾಲುಗಳಿಗೆ ಅವಕಾಶ ಮಾಡಿಕೊಡಬಾರದೆನ್ನುವ ಕಾರಣದಿಂದ ನಂದಿನಿ ಬಗ್ಗೆ ಅಪಾರ ಕಾಳಜಿ ವಹಿಸಿದ್ದಾರೆ. ರೈತರಿಗೆ ಒಳ್ಳೆಯದಾಗಬೇಕು. ಅವರು ಹೈನುಗಾರಿಕೆಯಿಂದ ಹೆಚ್ಚು ಲಾಭಗಳಿಸಬೇಕೆಂಬ ದೃಷ್ಟಿಯಿಂದ ಲೀಟರ್ ಹಾಲಿಗೆ 4 ರೂ.ಗಳನ್ನು ಹೆಚ್ಚಿಸಿ ಆ ಹಣ ನೇರವಾಗಿ ರೈತರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ ಎಂದರು.

ಮದ್ದೂರ ಲಿಂಗಯ್ಯನ ಹುಂಡಿ ಶೂನ್ಯ ಪೀಠದ ಮಠಾಧ್ಯಕ್ಷ ಗೌರಿಶಂಕರ ಸ್ವಾಮೀಜಿ ನೂತನ ನಂದಿನಿ ಮಿನಿ ಗ್ಯಾಲಕ್ಸಿ ಕೇಂದ್ರಕ್ಕೆ ಭೇಟಿ ನೀಡಿ ಶುಭ ಕೋರಿದರು. ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್, ನಂದಿನಿ ಮಿನಿ ಗ್ಯಾಲಕ್ಸಿ ಮಾಲೀಕ ಪರಶಿವಮೂರ್ತಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಮಹದೇವಸ್ವಾಮಿ, ಸಹಕಾರ ಸಂಘ ನಿರ್ದೇಶಕ ಡೈರಿ ಗುರುಮೂರ್ತಿ, ಎಂಎಲ್ ಹುಂಡಿ ಪ್ರಭುಸ್ವಾಮಿ, ಸುಜ್ಜಲೂರು ಚಿಕ್ಕಮಾದಪ್ಪ, ಕೆಬ್ಬೆಹುಂಡಿ ಶಿವಕುಮಾರ್, ಪಿಎಸಿಎಸ್ ಅಧ್ಯಕ್ಷ ಹೆಳವರಹುಂಡಿ ನಟರಾಜು, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವ ಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಬೆನಕನಹಳ್ಳಿ ವಿಜಯ್ ಕುಮಾರ್, ಹೋಟೆಲ್ ರಾಜಣ್ಣ ಕುಮಾರ್, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಚಂದ್ರಧರ, ರವಿ, ನಾಗಭೂಷಣ್, ಸೋಸಲೆ ಗಿರಿ, ಮಲ್ಲೇಶ್, ಜಿ.ಎಲ್.ಉಮೇಶ್ ಇತರರಿದ್ದರು.

ಕಲೆ, ವಾಸ್ತುಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ

ತಹಸೀಲ್ದಾರ್ ಮೋಹನಕುಮಾರಿ ಬಣ್ಣನೆ

ಸರಗೂರು, ಸೆ.17– ಕಲೆ, ವಾಸ್ತುಶಿಲ್ಪಕ್ಕೆ ವಿಶ್ವಕರ್ಮ ಸಮುದಾಯದ ಕೊಡುಗೆ ಅಪಾರ. ವಿಶ್ವಕರ್ಮ ಸಮಾಜ ಸಂಘಟಿತರಾಗಿ ಒಗ್ಗೂಡಿದಾಗ ಮಾತ್ರ ಸರ್ಕಾರದ ವಿವಿಧ ಯೋಜನೆಗಳ ಸದ್ಬಳಕೆ ಸಾಧ್ಯವಾಗಲಿದೆ ಎಂದು ತಹಸೀಲ್ದಾರ್ ಮೋಹನಕುಮಾರಿ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಬುಧವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ವಿಶ್ವಕರ್ಮ ಸಮಾಜದಿಂದ ನಡೆದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಸಮುದಾಯ ಶಿಕ್ಷಣ ಪಡೆಯುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಸಮುದಾಯದವರಿಗೆ ಕಲೆ ರಕ್ತಗತವಾಗಿ ಬಂದಿದೆ. ಇಂತಹ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಿದೆ. ಈ ಬಗ್ಗೆ ಸಮುದಾಯದವರಿಗೆ ಮಾಹಿತಿ ಕೊರತೆ ಇದೆ. ಹೀಗಾಗಿ



ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿದರು.

ಅಧಿಕಾರಿಗಳು ಮಾಹಿತಿ ನೀಡಬೇಕು ಎಂದರು.

ವಿಶ್ವಕರ್ಮ ಸಮಾಜದ ಅಧ್ಯಕ್ಷ ನಟರಾಜು ಮಾತನಾಡಿ, ಸಮಾಜದ ಅಭಿವೃದ್ಧಿಗೆ ವಿಶ್ವಕರ್ಮ ಸಮುದಾಯದ ಕೊಡುಗೆ ಅಪಾರ. ಸಮುದಾಯವಿಲ್ಲದೆ ಸಮಾಜ ಕಟ್ಟಲು ಸಾಧ್ಯವಿಲ್ಲ. ವಿಗ್ರಹಗಳ ಕೆತ್ತನೆ, ಮರಗೆಲಸ, ವ್ಯವಸಾಯಕ್ಕೆ ಅಗತ್ಯ ನೇಗಿಲು, ಮದುವೆ ಸಂದರ್ಭ ಮಾಂಗಲ್ಯ, ಹೀಗೆ ಹತ್ತು ಹಲವು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದರು.

ಜೆಎಸ್‌ಎಸ್ ಶಾಲಾ ಶಿಕ್ಷಕ ಸಿದ್ದಲಿಂಗಸ್ವಾಮಿ ಉಪನ್ಯಾಸ ನೀಡಿದರು. ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಜಿ.ರವಿಕುಮಾರ್ ಮಾತನಾಡಿದರು. ಪಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ಬ್ರಾಹ್ಮಣ ಸಮಾಜದ ಅಧ್ಯಕ್ಷ ಎಸ್.ಎ.ಸಾಂಬಮೂರ್ತಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಶಂಭುಲಿಂಗನಾಯಕ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಎಎಸ್‌ಐ ಶ್ರೀಕಂಠಸ್ವಾಮಿ, ವಿಶ್ವಕರ್ಮ ಸಮಾಜದ ಟೌನ್ ಅಧ್ಯಕ್ಷ ನಟರಾಜ್, ಕಾರ್ಯದರ್ಶಿ ಮಂಜುನಾಥ್, ಸಂತೋಷ್, ನಿವೃತ್ತ ಪಿಡಿಓ ನಿಂಗಾಚಾರ್, ಬಿ.ಡಿ.ದಾಸಚಾರಿ, ಎಸ್.ವಿ.ಕೃಷ್ಣಚಾರ್, ಕಾಳಸ್ವಾಮಿ, ಗೋವಿಂದರಾಜು, ರಾಮುಸ್ವಾಮಿ, ವಿಶ್ವಕರ್ಮ ಸೇವಾಬಳಗದ ಅಧ್ಯಕ್ಷ ಲೋಕೇಶ್ ಸೇರಿದಂತೆ ಇನ್ನಿತರರಿದ್ದರು.

ಗಾಗೇನಹಳ್ಳಿಯಲ್ಲಿ ರೈತ ಸಂಘದ ಗ್ರಾಮ ಶಾಖೆ ಉದ್ಘಾಟನೆ

ಹುಣಸೂರು, ಸೆ.17– ತಾಲೂಕಿನ ಗಾಗೇನಹಳ್ಳಿ ಗ್ರಾಮದಲ್ಲಿ ರೈತ ಸಂಘದ ಗ್ರಾಮ ಶಾಖೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 45 ವರ್ಷಗಳ ಇತಿಹಾಸವಿರುವ ರೈತ ಸಂಘ ಗ್ರಾಮೀಣ ಭಾಗದಲ್ಲಿ ಬಲಿಷ್ಠವಾಗಿ ಹೋರಾಟ ಮಾಡಬೇಕಾಗಿದ್ದು, ಪ್ರಸ್ತುತ ರೈತರಿಗೆ ಹೋರಾಟದ ಬೆಂಬಲ ಹಾಗೂ ಪ್ರೋತ್ಸಾಹಿಸುವ ಮನಸ್ಸುಗಳು ಕಡಿಮೆಯಾಗುತ್ತಿದೆ. ಈ ಕಾರಣದಿಂದ ರೈತರು ಹೋರಾಟ ಮತ್ತು ಸಂಘಟನೆಯತ್ತ ಹೆಚ್ಚು ಒಲವು ತೋರುವ ಮೂಲಕ ರೈತರ ಅಸ್ತಿತ್ವವನ್ನು ಗಟ್ಟಿಗೊಳಿಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ



ಕಾರ್ಯಕ್ರಮದಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿದರು.

ಮಾತನಾಡಿದ ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ, ಪ್ರಸ್ತುತ ರೈತ ಹೋರಾಟದ ಹಿನ್ನೆಲೆ ಅರ್ಥ ಮಾಡಿಕೊಳ್ಳದೇ ಹಸಿರು ಶಾಲನ್ನು ಧರಿಸಿಕೊಂಡು ದಂಧೆ ಮಾಡುತ್ತಿರುವವರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದರು.

ತಾಲೂಕು ಪ್ರಧಾನ ಕಾರ್ಯದರ್ಶಿ ರಾಮೇಗೌಡ ಮಾತನಾಡಿದರು. ಮುಖಂಡರಾದ ಬಸವರಾಜೇಗೌಡ, ಸೋಮಶೇಖರ್, ಪೈಲ್ವಾನ್ ಸೋಮಣ್ಣ, ರಾಮಕೃಷ್ಣೇಗೌಡ, ನಟೇಶ್, ಬಲರಾವ್, ಮಹೇಶ್ ಹಾಜರಿದ್ದರು. ಗ್ರಾಮ ಶಾಖೆ ಅಧ್ಯಕ್ಷರಾಗಿ ಮಹದೇವು, ಗೌರವಾಧ್ಯಕ್ಷ ಸಿದ್ದೇಗೌಡ, ಉಪಾಧ್ಯಕ್ಷ ಶೇಖರ್, ಮಹದೇವು, ಪ್ರಧಾನ ಕಾರ್ಯದರ್ಶಿ ಸುರೇಶ್, ಖಜಾಂಚಿ ಮಂಜು ಸೇರಿದಂತೆ 35 ಸದಸ್ಯರನ್ನು ನೇಮಕ ಮಾಡಲಾಯಿತು.

ಭೇರ್ಯ ಗ್ರಾಪಂನಲ್ಲಿ ವಿಶ್ವಕರ್ಮ ಜಯಂತಿ

ಭೇರ್ಯ, ಸೆ.17– ವಿಶ್ವಕರ್ಮ ಸಮಾಜ ಜಗತ್ತಿಗೆ ಅನನ್ಯ ಕೊಡುಗೆ ನೀಡಿದ ಸಮಾಜ. ಕೃಷಿಗೆ ಪೂರಕವಾದ ಸಾಮಾಗ್ರಿಗಳನ್ನು ಒದಗಿಸುವ ವಿಶ್ವಕರ್ಮ ಸಮಾಜ ರೈತರ ಬೆನ್ನೆಲುಬು ಆಗಿದ್ದಾರೆ ಎಂದು ಪಿಡಿಓ ಮಮತ ತಿಳಿಸಿದರು.

ಇಲ್ಲಿನ ಗ್ರಾಪಂ ಕಚೇರಿಯಲ್ಲಿ ನಡೆದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದ ಅವರು, ಪಂಚ ಕುಲಕಸುಬುಗಳನ್ನು ನಿರ್ವಹಿಸಲು ಯುವ ಸಮೂಹ ಮುಂದೆ ಬರುತ್ತಿಲ್ಲ. ಇದರಿಂದಾಗಿ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗುತ್ತಿದೆ. ಕುಲ ಕಸುಬು ನಶಿಸಿದರೆ ಸಮಾಜಕ್ಕೆ ದೊಡ್ಡ ನಷ್ಟ ಉಂಟಾಗಲಿದೆ. ಹೀಗಾಗಿ ಕುಲ ಕಸುಬುಗಳಿಗೆ ಪೂರಕವಾದ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಕುಶಲಕರ್ಮಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಇದಕ್ಕಾಗಿ ಸಮುದಾಯದ ಮುಖಂಡರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರಕಿಸಲು ಪೋಷಕರಿಗೆ ಮನವಿ ಮಾಡಿ ಎಂದು ಸಲಹೆ ನೀಡಿದರು.

ವಿಶ್ವಕರ್ಮ ಸಮಾಜದ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಜಾರಿ ತಂದಿದೆ. ನಿಗಮ ಮಂಡಳಿ, ಸಹಾಯ ಧನದಲ್ಲಿ ಸಾಲ ಸೌಲಭ್ಯ, ವಿದ್ಯಾರ್ಥಿ ವೇತನ, ಮನೆಗಳನ್ನು ನೀಡುವ ಮುಖಾಂತರ ವಿಶ್ವಕರ್ಮ ಸಮಾಜವನ್ನು ಗುರುತಿಸಿದೆ ಎಂದರು.

ಸಮುದಾಯದ ಮುಖಂಡ ಪ್ರಸನ್ನಕುಮಾರ್, ಮುಖಂಡರಾದ ದೇವರಾಜಚಾರ್, ಪ್ರಸನ್ನಕುಮಾರ್, ನಾರಾಯಣಚಾರ್, ವಿಜಯ್, ನಾಗಣ್ಣಚಾರ್, ಗಣೇಶಚಾರ್, ಅರುಣ್, ರಾಚಪ್ಪಾಜಿ, ಚಂದ್ರು, ಸಂಜಯ್, ಗಣೇಶ, ಸೋಮಚಾರ್, ಕೃಷ್ಣಾಚಾರ್, ಪ್ರಶಾಂತ್, ನವೀನ, ರಮೇಶಚಾರ್, ನಾಗರಾಜ, ಮಂಜು ಆಚಾರ್, ಗ್ರಾಪಂ ಲೆಕ್ಕ ಸಹಾಯಕಿ ಬಿ.ಎಸ್.ಅಶ್ವಿನಿ, ಡಿಇಓ ಜಯಂತ್, ಬಿಲ್ ಕಲೆಕ್ಟರ್ ಕುಮಾರ್ ಸೇರಿದಂತೆ ಅನೇಕರು ಇದ್ದರು.



ಭೇರ್ಯ ಗ್ರಾಪಂನಲ್ಲಿ ವಿಶ್ವಕರ್ಮ ಜಯಂತಿ ಆಚರಿಸಲಾಯಿತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ವಿಶ್ವಕರ್ಮರು ಜಗತ್ತಿನ ಪ್ರಥಮ ವಾಸ್ತುಶಿಲ್ಪ ಕಲೆಗಾರರು

ವಿಶ್ವಕರ್ಮ ತಾಲೂಕು ಅಧ್ಯಕ್ಷ ಚಂದ್ರು ಅಭಿಪ್ರಾಯ

ನಂಜನಗೂಡು, ಸೆ.17– ವಿಶ್ವಕರ್ಮರು ಜಗತ್ತಿನ ಪ್ರಥಮ ವಾಸ್ತುಶಿಲ್ಪ ಕಲೆಗಾರರಾಗಿದ್ದು, ಅವರ ಕೊಡುಗೆಗಳು ಸೂರ್ಯ, ಚಂದ್ರ ಇರುವವರೆಗೂ ಅಮರ ಎಂದು ವಿಶ್ವಕರ್ಮ ತಾಲೂಕು ಅಧ್ಯಕ್ಷ ಚಂದ್ರು ಅಭಿಪ್ರಾಯಪಟ್ಟರು.

ಬುಧವಾರ ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದ ಅವರು, ಕಲೆಯನ್ನೇ ಉಸಿರಾಗಿಸಿಕೊಂಡಿರುವ ವಿಶ್ವಕರ್ಮ ಸಮುದಾಯದವರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದಾರೆ. ಸಮುದಾಯದವರಿಗೆ ಸಾಲ ಸೌಲಭ್ಯ ದೊರಕುತ್ತಿಲ್ಲ. ಜೊತೆಗೆ ಶೈಕ್ಷಣಿಕವಾಗಿ ಯಾವುದೇ ಸವಲತ್ತು ದೊರಕುತ್ತಿಲ್ಲ. ಆದ್ದರಿಂದ ಸಮುದಾಯದ ಜನರು ಸಮಾಜದ ಮುಖ್ಯವಾಹಿನಿಗೆ ಬರುವ ಸಲುವಾಗಿ ಸಂಘಟಿತರಾಗುವ ಜೊತೆಗೆ ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿಸಬೇಕು ಎಂದು ಸಲಹೆ ನೀಡಿದರು.



ನಂಜನಗೂಡಿನಲ್ಲಿ ವಿಶ್ವಕರ್ಮ ಜಯಂತಿ ಆಚರಿಸಲಾಯಿತು.

ಯುವ ಮುಖಂಡ ವಿನಯ್ ಮಾತನಾಡಿ, ರಾಜ್ಯದಲ್ಲಿ 35 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ವಿಶ್ವಕರ್ಮ ಸಮುದಾಯದ ಜನರು ನಂಜನಗೂಡು ಮತ್ತು ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 25 ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದರೂ ಶ್ರೇಷ್ಠ ದಾರ್ಶನಿಕ ವಿಶ್ವಕರ್ಮರ ಜಯಂತಿಯಲ್ಲಿ ಯಾವೊಬ್ಬ ಚುನಾಯಿತ ಜನಪ್ರತಿನಿಧಿಯೂ ಭಾಗಿಯಾಗದಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ವರ್ಷ ಹಾಗೂ ಕಲಾ ಸೇವೆಯಲ್ಲಿ ಉತ್ತಮ ಸಾಧನೆ ಮಾಡಿರುವ ಮಲ್ಲಿಕಾರ್ಜುನ ಆಚಾರ್ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಶಿರಸ್ತೇದಾರ್ ರಾಜು, ಮಹದೇವ ಪ್ರಸಾದ್, ಶ್ರೀವಿಶ್ವಕರ್ಮ ಸಂಘದ ಸಹ ಕಾರ್ಯದರ್ಶಿ ರಾಜು, ಸ್ವಾಮಿ, ಪುರುಷೋತ್ತಮ್, ವಾಗೀಶ್, ಸೋಮಣ್ಣ, ಸುರೇಶ್, ವಿನಯ್, ಸಿದ್ದರಾಜು, ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪುಟ್ಟಣ್ಣ, ಗುರುಸ್ವಾಮಿ, ರಮೇಶ, ಸೇರಿದಂತೆ ಇತರರಿದ್ದರು.

ರಾಜ್ಯದಲ್ಲಿ ನಡೆಯೋದು ಜಾತಿ ಅಲ್ಲ ಆರ್ಥಿಕ, ಸಾಮಾಜಿಕ ಸಮೀಕ್ಷೆ

- ರಾಜ್ಯದಲ್ಲಿ 1,820 ಜಾತಿಗಳಿವೆ
- ಕ್ರಿಶ್ಚಿಯನ್‌ಗೆ ಮತಾಂತರಗೊಂಡ 50 ಉಪ ಜಾತಿಗಳಿವೆ
- ಕುರುಬ ಸಮುದಾಯದ ಎಲ್ಲರನ್ನೂ ಎಸ್‌ಟಿಗೆ ಸೇರಿಸಲ್ಲ
- ಬಿಜೆಪಿ ನಾಯಕರಿಂದ ರಾಜಭವನದ ದುರ್ಬಳಕೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸ್ಪಷ್ಟನೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಸೆ.17(ಬಿಎಲ್‌ಯು)– ರಾಜ್ಯದಲ್ಲಿ ಸೆಪ್ಟೆಂಬರ್ 22 ರಿಂದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆ ನಡೆಯುತ್ತಿದೆಯೇ ಹೊರತು ಜಾತಿ ಸಮೀಕ್ಷೆಯಲ್ಲ. ಆದರೆ ಈ ಬಗ್ಗೆ ಜನರಿಗೆ ತಪ್ಪು ಮಾಹಿತಿ ನೀಡುತ್ತಿರುವ ಬಿಜೆಪಿ ನಾಯಕರು ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕಾಂತರಾಜು ಆಯೋಗ ಸಮೀಕ್ಷೆ ನಡೆಸುವಾಗ ಕೂಡ ವಿರೋಧ ಮಾಡಿದ್ದರು. ಈಗ ನಡೆಯುವ ಸಮೀಕ್ಷೆಗೂ ವಿರೋಧ ಮಾಡುತ್ತಿದ್ದಾರೆ. ವಿರೋಧ ಪಕ್ಷದಲ್ಲಿದ್ದೇವೆ ಅಂದರೆ ಪ್ರತಿಯೊಂದು ವಿಚಾರವನ್ನು ವಿರೋಧ ಮಾಡಬೇಕೆಂಬ ಮನೋಭಾವನೆ ಹೊಂದಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ 1,820 ಜಾತಿಗಳಿದ್ದು, ಇಷ್ಟು ಜಾತಿಗಳ ಬಗ್ಗೆಯೂ ಸಮೀಕ್ಷೆ ನಡೆಯುತ್ತದೆ. ಪ್ರತಿಯೊಂದು ಜಾತಿಯಲ್ಲಿರುವ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಏನು ಎಂದು ಅಧಿಕೃತವಾಗಿ ದಾಖಲು ಮಾಡುವುದು ಈ ಸಮೀಕ್ಷೆಯ ಮೂಲ ಉದ್ದೇಶ ಎಂದು ಲಕ್ಷ್ಮಣ್ ಸ್ಪಷ್ಟಪಡಿಸಿದರು.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದವರ ಮೂಲ ಜಾತಿಯನ್ನು ದಾಖಲಿಸಲಾಗುವುದು. ಲಿಂಗಾಯತ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ರೀತಿಯಲ್ಲಿ 50 ಜಾತಿಗಳಿದ್ದು, ಅವರ ಸ್ಥಿತಿಗತಿಯನ್ನು ಅರಿಯಲಾಗುವುದು. ಕ್ರಿಶ್ಚಿಯನ್ ಧರ್ಮದಿಂದ ಅವರನ್ನು ಹೊರತರುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ ಎಂದರು.

ಕ್ರಿಶ್ಚಿಯನ್ ಧರ್ಮದಲ್ಲಿರುವ ಉಪ ಜಾತಿಗಳನ್ನು ತೆಗೆದು ಬೇರೆ ಕಡೆ ಸೇರ್ಪಡೆ ಮಾಡುವುದಿಲ್ಲ. ಇದನ್ನು ಕೋರ್ಟ್ ಕೂಡ ಒಪ್ಪುವುದಿಲ್ಲ. ಕ್ರಿಶ್ಚಿಯನ್ ಧರ್ಮದಲ್ಲಿರುವ ಉಪ ಜಾತಿಗಳ ಜನರ ಸ್ಥಿತಿಗತಿ ಅರಿತು ಅವರನ್ನು ಮೇಲೆತ್ತುವ ಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆದವರನ್ನು ಹಿಂದುಳಿದ ಜಾತಿಗೆ ತಂದು ಈಗಿರುವ ಹಿಂದುಳಿದವರ ಮೀಸಲಾತಿ ಕಿತ್ತುಕೊಳ್ಳುವ ಯಾವ ಪ್ರಯತ್ನ ಮಾಡುವುದಿಲ್ಲ. ಆದರೆ ಈ ಬಗ್ಗೆ ಬಿಜೆಪಿ ನಾಯಕರು ಜನರಿಗೆ ತಪ್ಪು ಮಾಹಿತಿ ನೀಡಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕೆಲವು ಕುರುಬ ಸಮುದಾಯವನ್ನು ಈಗಾಗಲೇ ಎಸ್‌ಟಿಗೆ ಸೇರಿಸಲಾಗಿದೆ. ಬೀದರ್, ಗುಲಬರ್ಗ, ಯಾದಗಿರಿಯಲ್ಲಿರುವ ಕೆಲವು ಕುರುಬ ಸಮುದಾಯವನ್ನು ಮಾತ್ರ ಈಗ ಎಸ್‌ಟಿಗೆ ಸೇರಿಸಲಾಗುತ್ತಿದ್ದು, ಇವರ ಸಂಖ್ಯೆ ಗರಿಷ್ಠ 60 ಸಾವಿರ ಆಗಬಹುದು ಎಂದು ಲಕ್ಷ್ಮಣ ಮಾಹಿತಿ ನೀಡಿದರು.

ಆದರೆ ಕುರುಬ ಸಮುದಾಯದ ಎಲ್ಲರನ್ನು ಎಸ್‌ಟಿಗೆ ಸೇರಿಸಿ ಈಗಿರುವ ಪರಿಶಿಷ್ಟ ಪಂಗಡದವರ ಮೀಸಲಾತಿ ಕಿತ್ತುಕೊಳ್ಳುತ್ತಿದ್ದೇವೆ ಎಂದು ಬಿಜೆಪಿ ನಾಯಕರು ವಾಸ್ತವತೆ ಮರೆಮಾಚಿ ರಾಜ್ಯ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸರ್ಕಾರದ ಕೆಲವು ತೀರ್ಮಾನಗಳ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ರಾಜಕೀಯ ಲಾಭಕ್ಕಾಗಿ ರಾಜಭವನವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಈ ಮೂಲಕ ಪರಿಶಿಷ್ಟ ಪಂಗಡ ಹಾಗೂ ಕುರುಬ ಸಮುದಾಯದ ನಡುವೆ ಕಿತ್ತಾಟ ತಂದಿಡುವ ಷಡ್ಯಂತ್ರ ರೂಪಿಸಿದ್ದಾರೆ. ಈ ಕುತಂತ್ರವನ್ನು ಈಗಲೇ ನಿಲ್ಲಿಸದಿದ್ದರೆ ಎರಡು ಸಮುದಾಯದವರು ಬಿಜೆಪಿ ನಾಯಕರನ್ನು ಅಟ್ಟಾಡಿಸುತ್ತಾರೆ ಎಂದು ಎಚ್ಚರಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಉಪಾಧ್ಯಕ್ಷ ನಾಗಭೂಷಣ ತಿವಾರಿ, ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆ.ಮಹೇಶ್, ಪ್ರಧಾನ ಕಾರ್ಯದರ್ಶಿ ಗಿರೀಶ್, ಮುಖಂಡ ಸುನೀಲ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರತಾಪ್ ಸಿಂಹ ಸೇರಿ ಹಲವರನ್ನು ಗಡಿಪಾರು ಮಾಡಲಿ

ಬಾನು ಮುಷ್ತಾಕ್ ಅವರಿಂದ ಮೈಸೂರು ದಸರಾ ಉದ್ಘಾಟಿಸುವುದನ್ನು ವಿರೋಧ ಮಾಡುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಇತರರನ್ನು ಕೂಡಲೇ ಗಡಿಪಾರು ಮಾಡಬೇಕು ಎಂದು ಲಕ್ಷ್ಮಣ್ ಆಗ್ರಹಿಸಿದರು.

ದಸರಾ ಕಾರ್ಯಕ್ರಮಗಳಲ್ಲಿ ಕಪ್ಪು ಪಟ್ಟಿ ಧರಿಸಿ ಯಾರಾದರೂ ಪ್ರತಿಭಟನೆ ನಡೆಸಿದರೆ ಅಂತವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಾಪ್ ಸಿಂಹ ಅವರು ಮೈಸೂರಿನ ಚಾಮರಾಜ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಾಗಿದ್ದಾರೆ. ಇದಕ್ಕಾಗಿ ಪ್ರಚಾರದಲ್ಲಿ ಉಳಿಯಲು ಅನವಶ್ಯಕ ವಿಚಾರವನ್ನು ಎಳೆದು ತರುತ್ತಿದ್ದಾರೆ ಎಂದು ದೂರಿದರು.

ಹಾಲಿ ಸಂಸದ ಯದುವೀರ್ ಅವರಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಮೈಸೂರಿನ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಈ ತನಕ ಯಾವುದೇ ಅನುದಾನ ನೀಡಿಲ್ಲ ಎಂದು ಲಕ್ಷ್ಮಣ್ ಆಪಾದಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಘಾಟಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) + ರಾಮನಗರ (ಕ)	2+2 ಪ್ರದರ್ಶನಗಳು

‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಅಭಿಯಾನಕ್ಕೆ ಚಾಲನೆ



‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಅಭಿಯಾನಕ್ಕೆ ಮೈಸೂರು–ಕೊಡಗು ಲೋಕಸಭಾ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮೈಸೂರು, ಸೆ.17(ಎಂಕೆ)– ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಬಲಪಡಿಸುವ ಆರೋಗ್ಯ ಶಿಬಿರಗಳ ‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಅಭಿಯಾನಕ್ಕೆ ಮೈಸೂರು–ಕೊಡಗು ಲೋಕಸಭಾ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮೈಸೂರಿನ ಸೇಠ್ ಮೋಹನ್‌ದಾಸ್ ತುಳಸಿದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸೆ.17 ರಿಂದ ಅ.2ರವರೆಗೆ ಹಮ್ಮಿಕೊಂಡಿರುವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಅತ್ಯಂತ ಅವಶ್ಯವಾಗಿದೆ ಎಂದರು.

ಪ್ರತಿಯೊಬ್ಬ ನಾಗರಿಕರು ಆರೋಗ್ಯ ತಪಾಸಣೆಗೆ ಒಳಗಾಗುವ ಮೂಲಕ ಸ್ವಸ್ಥ, ಸಶಕ್ತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು. ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ದೃಷ್ಟಿಯಿಂದ ಹಮ್ಮಿಕೊಂಡಿರುವ ಸ್ವಸ್ಥ ನಾರಿ, ಸಶಕ್ತ ಅಭಿಯಾನ ಯಶಸ್ವಿಯಾಗಬೇಕು. ಈ ಮೂಲಕ ದೇಶದ ಪ್ರಗತಿಗೆ ಸಹಕಾರ ನೀಡಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಧಿಕಾರಿ ಡಾ.ಸಿ.ಪಿ.ಕುಮಾರಸ್ವಾಮಿ ಮಾತನಾಡಿ, ‘ಸ್ವಸ್ಥ ನಾರಿ, ಸಶಕ್ತ ಪರಿವಾರ’ ಅಭಿಯಾನದಲ್ಲಿ ಮಹಿಳೆಯರಿಗಾಗಿ ಕಿವಿ, ಕಣ್ಣು, ಮೂಗು, ಗಂಟಲು, ರಕ್ತದೊತ್ತಡ ಮಧುಮೇಹ ಮತ್ತು ದಂತ ಪರೀಕ್ಷೆ, ಬಾಯಿ, ಸ್ತನ ಮತ್ತು ಗರ್ಭ ಕ್ಯಾನ್ಸರ್ ಪರೀಕ್ಷೆ, ಗರ್ಭಿಣಿಯರಿಗಾಗಿ ಪ್ರಸವಪೂರ್ವ ಪರೀಕ್ಷೆ, ಲಸಿಕಾ ಸೇವೆಗಳು, ರಕ್ತಹೀನತೆಯ ಮಟ್ಟದ ಪರೀಕ್ಷೆ, ಕ್ಷಯ ರೋಗ ಪರೀಕ್ಷೆ, ಸಿಕಲ್ ಸೇಲ್ ರಕ್ತಹೀನತೆ ಹಾಗೂ ವಿಶೇಷ ಸಲಹೆಗಳನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಆರೋಗ್ಯ ಇಲಾಖೆ ಮೈಸೂರು ವಿಭಾಗದ ವಿಭಾಗೀಯ ನಿರ್ದೇಶಕರಾದ ಡಾ.ಮಲ್ಲಿಕಾ, ಜಿಲ್ಲಾ ಆರ್‌ಸಿಹೆಚ್ ಡಾ.ಸಿರಾಜ್ ಅಹಮದ್, ಜಿಲ್ಲಾ ರೋಗ ವಾಹಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಸುವರ್ಣ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ಬೃಂದಾ, ತಾಲೂಕು ಆರೋಗ್ಯಾಧಿಕಾರಿ ಡಾ.ಪುಟ್ಟತಾಯಮ್ಮ, ರಾಜ್ಯಮಟ್ಟದ ಅಧಿಕಾರಿ ಡಾ.ರಾಜು, ಎಸ್‌ಎಂಟಿ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಅನುರಾಧ ಮತ್ತಿತರಿದ್ದರು.

ಅಕ್ಯುಪ್ರೆಷರ್ ಸುಜೋಕ್ ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ

ಮೈಸೂರು, ಸೆ.17–ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ 21 ದಿನಗಳ ಕಾಲ ಹೆಬ್ಬಾಳು 2ನೇ ಹಂತದಲ್ಲಿರುವ ರೋಟರಿ ಸೆಂಟ್ರಲ್ ಮೈಸೂರು ಇಲ್ಲಿ ಅಕ್ಯುಪ್ರೆಷರ್ ಸುಜೋಕ್ ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ.9845182716, 9892798768 ಸಂಪರ್ಕಿಸಿ.

ತೂಮಾಟಿ ದೊಣಪ್ಪರಿಂದ ತೆಲುಗು ಸಾಹಿತ್ಯಕ್ಕೆ ಅಪಾರ ಕೊಡುಗೆ

ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ ಅಭಿಮತ



‘ತೂಮಾಟಿ ದೊಣಪ್ಪ ಸಾಹಿತ್ಯ–ಬಹುಮುಖ ಸೇವೆ’ ವಿಚಾರ ಸಂಕಿರಣದಲ್ಲಿ ತೂಮಾಟಿ ದೊಣಪ್ಪ ಅವರ ಭಾವಚಿತ್ರಕ್ಕೆ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಶರಣಪ್ಪ ವಿ.ಹಲಸೆ ಪುಷ್ಪಾರ್ಚನೆ ಸಲ್ಲಿಸಿದರು.

ಮೈಸೂರು, ಸೆ.17(ಎಂಕೆ)– ಚಿಕ್ಕ ವಯಸ್ಸಿನಲ್ಲೇ ಸಾಹಿತ್ಯ, ಚಿತ್ರಲೇಖನ, ಕಲಾರಂಗಗಳಲ್ಲಿ ಅಪಾರ ಉತ್ಸುಕತೆ ಮತ್ತು ಪ್ರಾವೀಣ್ಯತೆ ಹೊಂದಿದ್ದ ತೂಮಾಟಿ ದೊಣಪ್ಪ ಅವರು, ತೆಲುಗು ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಶರಣಪ್ಪ ವಿ.ಹಲಸೆ ಸ್ಮರಿಸಿದರು.

ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ ಹಾಗೂ ತೂಮಾಟಿ ದೊಣಪ್ಪ ಶತ ಜಯಂತಿ ಸಮಿತಿ ವತಿಯಿಂದ ಆಯೋಜಿಸಿದ್ದ ‘ತೂಮಾಟಿ ದೊಣಪ್ಪ ಸಾಹಿತ್ಯ–ಬಹುಮುಖ ಸೇವೆ’ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಯಾಗಿದ್ದಾಗಿನಿಂದಲೇ ತೆಲುಗು ಭಾಷೆ ರಕ್ಷಣೆಗೆ ಮುಂದಾದವರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಾರಂಗದಲ್ಲಿ ಅಪಾರ ಆಸಕ್ತಿ ಹೊಂದಿದ್ದ ತೂಮಾಟಿ ದೊಣಪ್ಪ ಅವರು, ಚಿಂತಾಮಣಿ ನಾಟಕದಲ್ಲಿ ‘ಚಿಂತ’, ಸುಭದ್ರಾಪರಿಣಯ ನಾಟಕದಲ್ಲಿ ‘ಸುಭದ್ರ’ ಪಾತ್ರವನ್ನು ನಿರ್ವಹಿಸಿ, ಉರವಕೊಂಡ ಹೈಸ್ಕೂಲ್‌ನಲ್ಲಿ ತೆಲುಗು ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ತಾವು 8ನೇ ತರಗತಿಯಲ್ಲಿದ್ದಾಗಲೇ ‘ಚಂದ್ರುಡು–ಕಲುವ’ ಎಂಬ ಕಥೆ ಬರೆದ ಅವರು, ತಮಗೆ ಇಷ್ಟವಾದ ಸೇವಾ ರಂಗದಲ್ಲಿ ಪಾಲ್ಗೊಂಡು ವಿದ್ಯಾರ್ಥಿ ಸಂಘದ ನಾಯಕನಾಗಿ ಕೆಲಸ ನಿರ್ವಹಿಸಿದರು.

ಪ್ರೊ.ಗಂಟಿಜೋಗಿ ಸೋಮಯಾಜುಲು ಮಾರ್ಗನಿರ್ದೇಶನದಲ್ಲಿ ‘ತೆಲುಗುಲೋ ವೈಕೃತ ಪದಾಲು’ ಎಂಬ ವಿಷಯ ಕುರಿತು ಆಂಧ್ರ ವಿಶ್ವವಿದ್ಯಾಲಯದಲ್ಲೇ ಡಾಕ್ಟರೇಟ್ ಪದವಿ ಪಡೆದು, ನಂತರ ತೆಲುಗು ಪ್ರಾಧ್ಯಾಪಕರಾಗಿ, ತೆಲುಗು ವಿವಿ ಕುಲಪತಿಗಳಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ. ಅಲ್ಲದೆ ತಮ್ಮ ಹೆಸರಿನಲ್ಲಿ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಗುತ್ತಿದೆ.

ಮುಕ್ತ ವಿವಿ ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥಂ ನಾಯ್ಡು, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್ ರಾಜ್, ಅಧ್ಯಯನ ಕೇಂದ್ರದ ಡೀನ್ ಎನ್.ಆರ್.ಚಂದ್ರೇಗೌಡ, ತೂಮಾಟಿ ಸುಧಾಕರ್, ಜಾನಪದ ವಿದ್ವಾಂಸ ಪ್ರೊ.ಚಿಗಿಚರ್ಲ ಕೃಷ್ಣರೆಡ್ಡಿ, ಮುಕ್ತ ವಿವಿ ಪರೀಕ್ಷಾಂಗ ವಿಭಾಗದ ಪಿ.ಎಸ್.ಅನಂತಕುಮಾರ್ ಮತ್ತಿತರರಿದ್ದರು.

ಲೋಕ ಕಲ್ಯಾಣ ಮೇಳ

ಮೈಸೂರು,ಸೆ.17– ಕೇಂದ್ರ ಸರ್ಕಾರದ ಪ್ರತಿಷ್ಠಿತ ಪಿ.ಎಂ.ಸ್ವನಿಧಿ ಯೋಜನೆಯಡಿಯಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಲು ಲೋಕ ಕಲ್ಯಾಣ ಮೇಳವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲೆಯ 14 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಿ.ಎಂ. ಸ್ವನಿಧಿ ಯೋಜನೆಯಡಿ ಲೋಕ ಕಲ್ಯಾಣ ಮೇಳವನ್ನು ಸೆ.17 ರಿಂದ ಅ.2 ರವರೆಗೆ ಆಯೋಜಿಸಲಾಗುತ್ತಿದೆ.

ಮೇಳದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಸಾಲ ಪಡೆಯದ ವ್ಯಾಪಾರಿಗಳಿಂದ ಹೊಸ ಅರ್ಜಿಗಳ ಸ್ವೀಕೃತಿ, ಈಗಾಗಲೇ ಮಂಜೂರಾದ ಸಾಲಗಳನ್ನು ಫಲಾನುಭವಿಗಳಿಗೆ ವಿತರಣೆ, ಬ್ಯಾಂಕ್‌ನಿಂದ ಹಿಂದಿರುಗಿದ ಅರ್ಜಿಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಮರು ಸಲ್ಲಿಕೆ, ಮಂಜೂರಾತಿಗೆ ಬಾಕಿ ಇರುವ ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಮರು ಸಲ್ಲಿಸುವ ವ್ಯವಸ್ಥೆ, ಡಿಜಿಟಲ್ ವಹಿವಾಟಿನಲ್ಲಿ ನಿಷ್ಕ್ರಿಯಗೊಂಡ ಫಲಾನುಭವಿಗಳನ್ನು ಮತ್ತೆ ಡಿಜಿಟಲ್ ವಹಿವಾಟಿನಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ, ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆಯಿಂದ ಹೊರಗುಳಿದ ಬೀದಿಬದಿ ವ್ಯಾಪಾರಿಗಳು ಮತ್ತು ಅವರ ಕುಟುಂಬಗಳ ಸಮೀಕ್ಷೆ, ಕೇಂದ್ರ ಸರ್ಕಾರದ 8 ಸಾಮಾಜಿಕ ಭದ್ರತಾ ಯೋಜನೆಗಳಿಗೆ ಫಲಾನುಭವಿಗಳ ಜೋಡಣೆ.

ಈ ಮೇಳವನ್ನು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಮೈಸೂರು ಮಹಾನಗರಪಾಲಿಕೆ, ನಗರಸಭೆಗಳು, ಪುರಸಭೆಗಳು ಹಾಗೂ ಪಟ್ಟಣ ಪಂಚಾಯಿತಿಗಳು ಅವರ ವ್ಯಾಪ್ತಿಯಲ್ಲಿ ಆಯೋಜಿಸಲಾಗುತ್ತಿದ್ದು, ಎಲ್ಲಾ ಬೀದಿಬದಿ ವ್ಯಾಪಾರಿಗಳು ಭಾಗವಹಿಸಿ ಪ್ರಯೋಜನ ಪಡೆಯುವಂತೆ ವಿನಂತಿಸಲಾಗಿದೆ ಹಾಗೂ ಸಂಬಂಧಿಸಿದ ಬ್ಯಾಂಕ್‌ಗಳು ಮತ್ತು ಇಲಾಖೆಗಳ ಸಹಕಾರ ನೀಡಬೇಕಾಗಿದೆ ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಾನ್ಸೂನ್ ರೇಸ್

5ನೇ ದಿನ, ಗುರುವಾರ, 18–09–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಫ್ಲೀಟ್ ಇಂಡಿಯಾ–1200 ಮೀ. 3 ವರ್ಷ (ಟರ್ಮ್ಸ್). (ಮೈಸೂರ್ ಬೇಸ್ಡ್ ಹಾರ್ಸ್) ಮ.2.00ಕ್ಕೆ
1. ನ್ಯಾಚುರಲ್ ಲುಕ್ 2. ದಿಯಾ

II. ಎಕ್ಲೀಪ್ಸ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಫ್ಲೆಮಿಂಗೋ ಡ್ರೀಮ್ 2. ಎಸ್ಟಿ ಫೆನಿಯ

III. ಕಾಸರಗೋಡು ಪ್ಲೇಟ್ ಡಿII–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಪ್ಲೆಡ್ಜ 2 ಕ್ಯಾಸ್ಕೆಲ್ಸ್

IV. Dr. M.A.M.ರಾಮಸ್ವಾಮಿ ಟ್ರೋಫಿ–1600 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಆಶೀರ್ವಾದ್ 2. ಚೋಟಿ ಪ್ಯಾರಿ

V. B.A.ನಾಣಯ್ಯ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ಪಟ್ಟ. ಸಂ.4.00ಕ್ಕೆ
1. ಐರಿಸ್ ಕಾಫಿ 2. ವಂದಿಯ ದೇವನ್

VI. ಕಾಸರಗೋಡು ಪ್ಲೇಟ್ ಡಿI–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಫರ್ಫೆಕ್ಟ್ ಆ್ಯಟಿಟ್ಯೂಡ್ 2 ಬೆಲ್ಲವಿಟಾ

VII. ಫೇರ್‌ವುಡ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್) ಸಂ.5.00ಕ್ಕೆ
1. ಕ್ಲೌಡಿ ಹಿಲ್ಸ್ 2. ರೀಜನ್ ಆಫ್ ಟೆರರ್

ದಿನದ ಅತ್ಯುತ್ತಮ	: ಐರಿಸ್ ಕಾಫಿ
ಡಬ್ಬಲ್	: ನ್ಯಾಚುರಲ್ ಲುಕ್, ಪ್ಲೆಡ್ಜ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ರಾಜ್ಯಾದ್ಯಂತ 500 ನಂದಿನಿ ಬೂತ್‌ಗಳ ವರ್ಚುವಲ್ ಮೂಲಕ ಉದ್ಘಾಟಿಸಿದ ಸಿಎಂ

ಮೈಸೂರಿನಲ್ಲಿ 20 ನಂದಿನಿ ಬೂತ್ ಲೋಕಾರ್ಪಣೆ



ಮೈಸೂರು, ಸೆ17(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಾದ್ಯಂತ ಏಕಕಾಲಕ್ಕೆ 500 ನಂದಿನಿ ಕೇಂದ್ರಗಳನ್ನು ವರ್ಚುವಲ್ ಮೂಲಕ ಲೋಕಾರ್ಪಣೆ ಮಾಡಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಇಂದು 20 ನಂದಿನಿ ಕೇಂದ್ರಗಳನ್ನು ಲೋಕಾರ್ಪಣೆ ಮಾಡಲಾಯಿತು.

ನಗರದ ಹೂಟಗಳ್ಳಿಯ ಹುಣಸೂರು ಮುಖ್ಯ ರಸ್ತೆಯಲ್ಲಿ ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರು, ನಿರ್ದೇಶಕರು ಹಾಗೂ ಅಧಿಕಾರಿಗಳು ಸಾಂಕೇತಿಕವಾಗಿ ನಂದಿನಿ ಕೇಂದ್ರವನ್ನು ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಒಕ್ಕೂಟದ ನಿರ್ದೇಶಕ ಕೆ.ಉಮಾಶಂಕರ್, ನಂದಿನಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಿದ್ದರಾಮಯ್ಯ ಅವರು ವರ್ಚುವಲ್ ಮೂಲಕ 500 ನಂದಿನಿ ಪಾರ್ಲರ್‌ಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಈ ಮೂಲಕ ನಂದಿನಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ, ರೈತರಿಗೆ ನೆರವಾಗಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು.

ನಂತರ ಮಾತನಾಡಿದ ಒಕ್ಕೂಟದ ಮತ್ತೊಬ್ಬ ನಿರ್ದೇಶಕ ಬಿ. ಗುರುಸ್ವಾಮಿ, ಮೈಸೂರು ನಂದಿನಿ ಬೂತ್‌ನಲ್ಲಿ ಅನೇಕ ಉಪ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಗ್ರಾಹಕರು ಇದನ್ನು ಖರೀದಿ ಮಾಡುವ ಮೂಲಕ ರೈತರಿಗೆ ಪ್ರೋತ್ಸಾಹಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಶಾಸಕ ತನ್ವೀರ್ ಸೇಠ್ ಅವರು ಕೂಡ ತಮ್ಮ ಕ್ಷೇತ್ರದ ನಂದಿನಿ ಬೂತ್ ಅನ್ನು ಲೋಕಾರ್ಪಣೆ ಮಾಡಿದರು. ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಈರೇಗೌಡ, ಕೆ.ಜಿ.ಮಹೇಶ್, ಸಿ.ಓಂಪ್ರಕಾಶ್, ಪಿ.ಎಂ.ಪ್ರಸನ್ನ, ಕೆ.ಎಸ್.ಕುಮಾರ್, ದ್ರಾಕ್ಷಾಯಿಣಿ, ಬಸವರಾಜಪ್ಪ, ಲೀಲಾ, ಕೆ.ಬಿ.ನಾಗರಾಜು, ನೀಲಾಂಬಿಕೆ, ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮಗಂ, ಬಿ.ಎನ್.ಸದಾನಂದ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ, ರವಿಕುಮಾರ್, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಮಾರುಕಟ್ಟೆ ವ್ಯವಸ್ಥಾಪಕ ಜೈಶಂಕರ್ ಹಾಗೂ ಇತರರು ಈ ವೇಳೆ ಹಾಜರಿದ್ದರು.

ವಿಶ್ವಕರ್ಮ ಸಮುದಾಯದವರು ಕುಲಕಸುಬು ಕಾಪಾಡಿಕೊಳ್ಳಬೇಕು

ಶಾಸಕ ತನ್ವೀರ್ ಸೇಠ್ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಾಸನದ ಅರೆಮಾದನಹಳ್ಳಿ ವಿಶ್ವ ಬ್ರಾಹ್ಮಣರ ಮಹಾ ಸಂಸ್ಥಾನ ಮಠದ ವಿಶ್ವ ಜಗದ್ಗುರು ಪೀಠದ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಸೆ.17(ಎಂಟಿವೈ)– ಯಂತ್ರೋಪಕರಣಗಳ ಬಳಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವಕರ್ಮ ಸಮುದಾಯ ತಮ್ಮ ಕುಲಕಸುಬನ್ನು ಕಾಪಾಡಿಕೊಳ್ಳಬೇಕು ಎಂದು ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವಕರ್ಮ ಜಯಂತ್ಯುತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಯಂತ್ರಗಳ ಬಳಕೆ ಹೆಚ್ಚಾಗುತ್ತಿದೆ. ಇಂತಹ ಯಾಂತ್ರೀಕರಣದ ಸಂದರ್ಭದಲ್ಲಿ ವಿಶ್ವಕರ್ಮ ಸಮುದಾಯ ತಮ್ಮ ಕುಲಕಸುಬನ್ನು ಉಳಿಸಿಕೊಳ್ಳಬೇಕು. ಅನಾದಿ ಕಾಲದಿಂದಲೂ ಕೆಲ ವಸ್ತುಗಳಿಗೆ ರೂಪ ಕೊಡುವ ಶಕ್ತಿ ವಿಶ್ವಕರ್ಮ ಜನಾಂಗಕ್ಕೆ ವರವಾಗಿ ದೊರೆತಿದೆ. ಪ್ರಸ್ತುತ ಸಂದರ್ಭದಲ್ಲಿ ಅಭಿವೃದ್ಧಿ ಕಾರ್ಯದಲ್ಲಿ ಎಲ್ಲೆಡೆ ಯಂತ್ರಗಳ ಬಳಕೆ ಹೆಚ್ಚಾಗುತ್ತಿದೆ. ಇದರಿಂದ ಅಸ್ತಿತ್ವ ಕಾಪಾಡಿಕೊಳ್ಳಲು ಕಷ್ಟವಾಗುತ್ತಿದೆ. ಆದರೆ ಇದನ್ನು ಅಲ್ಲಗಳೆಯದೇ ನಮ್ಮ ಮೂಲ ಕಸುಬನ್ನು ಕಾಪಾಡಿಕೊಂಡು ಬರುವ ಹಿತಾಸಕ್ತಿ ನಮ್ಮಲ್ಲಿರಬೇಕಾಗಿದೆ ಎಂದರು.

ನಮ್ಮ ವೃತ್ತಿ ಏನೇ ಇರಬಹುದು ಆದರೆ ನಾವೆಲ್ಲರೂ ವಿಶ್ವಕರ್ಮರು ಎಂಬ ಭಾವ ಎಲ್ಲರಲ್ಲೂ ಇರಬೇಕು. ನಾರಾಯಣ ಗುರು ಅವರು ಈ ಹಿಂದೆಯೇ ಭಗವಂತನ ರೂಪಗಳು ಬೇರೆ ಬೇರೆ ಇದೆ ಎಂದಿದ್ದಾರೆ. ಆದರೆ ಎಲ್ಲರಿಗೂ ಮೂಲ ದೇವ ಒಬ್ಬನೇ ಆಗಿದ್ದಾನೆ. ಹಾಗೇಯೇ ನಮ್ಮೆಲ್ಲರ ಕಾಯಕಗಳು ಬೇರೆ ಬೇರೆ ಇದ್ದರೂ ಸಹ ನಮ್ಮೆಲ್ಲರ ಅಸ್ತಿತ್ವ ಕಾಪಾಡಿಕೊಳ್ಳಲು ಎಲ್ಲರೂ ಒಂದಾಗುವ ಅವಶ್ಯಕತೆ ಇದೆ. ವಿಶ್ವಕರ್ಮ ಕೃಪೆ ಮತ್ತು ದಯೆಯಿಂದಾಗಿ ಚಿನ್ನ, ಬೆಳ್ಳಿ, ಕಲ್ಲು ಬಂಡೆ, ಮರಗಳಿಗೆ ರೂಪ ಕೊಡುವ ಶಕ್ತಿ ವಿಶ್ವಕರ್ಮ ಜನಾಂಗದವರಿಗೆ ದೊರೆತಿದೆ. ಅದನ್ನು ಕಾಪಾಡಿಕೊಂಡು ಹೋಗಬೇಕು. ಜನಾಂಗದ ಸಮಸ್ಯೆ ಪರಿಹಾರಕ್ಕೆ ದಾರಿ ತಪ್ಪದೇ ಎಲ್ಲರೂ ಒಗ್ಗೂಡಬೇಕು. ಸಾಂಪ್ರದಾಯಿಕವಾದ ನಮ್ಮ ಕಲೆಗಳನ್ನು ಕಾಪಾಡಿಕೊಳ್ಳಬೇಕು. ಸಮುದಾಯ ಎಂದು ಹೇಳುವ ಸಂದರ್ಭದಲ್ಲಿ ನಮ್ಮಲ್ಲೇ ಭಿನ್ನತೆ ಇರಬಾರದು. ನಿಮ್ಮಲ್ಲಿರುವ ರೂಪ ಕೊಡುವ ಶಕ್ತಿ ಸದಾ ಮುಂದುವರೆಯಬೇಕೆಂದು ಆಶಿಸಿದರು.

ವಿಶ್ವಕರ್ಮ ಭಾವಚಿತ್ರ ಮೆರವಣಿಗೆ: ವಿಶ್ವಕರ್ಮ ಜಯಂತಿ ಅಂಗವಾಗಿ ಅಲಂಕೃತ ವಾಹನದಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೈಸೂರಿನ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇರ್ವಿನ್ ರಸ್ತೆಯಲ್ಲಿರುವ ಕಾಳಿಕಾಂಬ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಆರಂಭವಾದ ಮೆರವಣಿಗೆ ಕೆ.ಟಿ.ಸ್ಟ್ರೀಟ್, ಅಶೋಕ ರಸ್ತೆ, ದೊಡ್ಡ ಗಡಿಯಾರ ವೃತ್ತ, ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣ, ಕೆ.ಆರ್.ವೃತ್ತ, ಡಿ. ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ಆವರಣ ತಲುಪಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಹಾಸನದ ಅರೆಮಾದನಹಳ್ಳಿ ವಿಶ್ವ ಬ್ರಾಹ್ಮಣರ ಮಹಾ ಸಂಸ್ಥಾನ ಮಠದ ವಿಶ್ವ ಜಗದ್ಗುರು ಪೀಠದ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶಿಲ್ಪಿ ಅರುಣ್ ಯೋಗಿರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ವಿಶ್ವಕರ್ಮ ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಹುಚ್ಚಪ್ಪ, ಪದಾಧಿಕಾರಿಗಳಾದ ಸಿ.ಟಿ.ಆಚಾರ್, ರೇವಣ್ಣ, ಎ.ಎನ್.ಸ್ವಾಮಿ, ಜಯಕುಮಾರ್, ಎನ್.ಚಂದ್ರು, ನಿಂಗಾಚಾರ್, ಜಯರಾಮಾಚಾರ್ ಸೇರಿದಂತೆ ಆಚರಣಾ ಸಮಿತಿಯ ವಿವಿಧ ಸಂಘ ಸಂಸ್ಥೆ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಮಸ್ತ ಪಾಲ್ಗೊಂಡಿದ್ದರು.


ಪ್ರೇರಣಾ ಟ್ರಸ್ಟ್ ಅಧ್ಯಕ್ಷರು
ಹಾಗೂ ಉದ್ಯಮಿಗಳಾದ
ಶ್ರೀ ರಂಗರಾಜು
ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA
ADVERTISERS
8050302424